ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 10 ಸಂಚಿಕೆ 8 | ಫೆಬ್ರವರಿ 21, 2016 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com

ವಾಚು-ಕನ್ನಡಕ ರಾಜಕೀಯ





ಫೆಬ್ರವರಿ 16 ವಿ.ವಿ. ಬಂದ್













ಫೆಬ್ರವರಿ 17 ಶೈಕ್ಷಣಿಕ ಬಂದ್

ಜನರ ಸಮಸ್ಯೆಗಳಿಗೆ ಸ್ಪಂದಿಸುವ ಪಂಚಾಯತುಗಳಿಗಾಗಿ ಸಿಪಿಐ(ಎಂ) ಪಣ

HAL, BHEL, BEML ಇತ್ಯಾದಿ ಮಾರಾಟ ಸಲ್ಲದು

ನೆಟ್ ತಟಸ್ಥತೆಗೆ ವಿಜಯ

ಪೆಟ್ರೋಲ್, ಡೀಸೆಲ್ ತೆರಿಗೆ ಇಳಿಸಿ : ಕಾರಟ್

ಅಂತರ್ಜಾಲ ತಟಸ್ಥತೆ: ಇಂಟರ್ನೆಟ್ ಚಳುವಳಿಕಾರರಿಗೆ ಜಯ
ಸರಕಾರ ಸರಿಯಾದ ಪಾಟ ಕಲಿಯಬೇಕು- ಸೀತಾರಾಮ್ ಯೆಚೂರಿ

ಭಾರತದ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರ(ಟ್ರಾಯ್) ಮಾಹಿತಿ ಸೇವೆಗಳನ್ನು ಮಾಹಿತಿಗಳ ಆಧಾರದ ತಾರತಮ್ಯದ ದರಗಳಲ್ಲಿ ಒದಗಿಸುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದು ಪ್ರಕಟಿಸಿದೆ. ಈ ಮೂಲಕ ಅಂತರ್ಜಾಲ ತಟಸ್ಥತೆಯ ನಿಲುವಿಗೆ ಜಯ ದೊರೆತಿದೆ.

ಕಳೆದ ಎರಡು ತಿಂಗಳಿಂದ ಫೇಸ್‌ಬುಕ್ ಮತ್ತಿತರ ಕಂಪನಿಗಳು ದೇಶದ ಮೂಲೆ–ಮೂಲೆಗೂ ಇಂಟರ್ನೆಟ್ ಸೌಲಭ್ಯವನ್ನು ವಿಸ್ತರಿಸುವ ಹೆಸರಿನಲ್ಲಿ ತಾವು ಆರಿಸಿಕೊಟ್ಟ ತಾಣಗಳಿಂದ ಮಾಹಿತಿಗಳನ್ನು ಕಡಿಮೆ ದರಗಳಲ್ಲಿ ಪಡೆಯುವಂತೆ ಮಾಡುವ ಮೂಲಕ, ಇನ್ನಿತರ ತಾಣಗಳನ್ನು ಬದಿಗೊತ್ತಿ ಈ ತಾಟಸ್ಥ್ಯವನ್ನು ಮುರಿಯುವ ಪ್ರಯತ್ನವನ್ನು ಮಾಡುತ್ತಿದ್ದು, ಅದಕ್ಕಾಗಿ ಸಾರ್ವಜನಿಕ ಅಭಿಪ್ರಾಯವನ್ನು ತಮ್ಮ ಪರವಾಗಿ ಸೆಳೆಯಲು ಭಾರೀ ಪ್ರಚಾರ ನಡೆಸಿದ್ದವು. ಪತ್ರಿಕೆಗಳಲ್ಲಿ ಪೂರ್ಣ ಪುಟದ ಜಾಹೀರಾತುಗಳನ್ನು ಪ್ರಕಟಿಸಿದ್ದವು. ಇದರ ವಿರುದ್ಧ ಇಂಟರ್ನೆಟ್ ಸ್ವಾತಂತ್ರ್ಯದ ಚಳುವಳಿಕಾರರು ಇಂಟರ್ನೆಟ್‌ನಲ್ಲಿ ಮತ್ತು ಇತರ ಮಾಧ್ಯಮಗಳಲ್ಲಿ ಸಹಿ ಸಂಗ್ರಹ ಇತ್ಯಾದಿಗಳ ಮೂಲಕ ವ್ಯಾಪಕ ಪ್ರಚಾರ–ಪ್ರಕ್ಷೋಭೆ ನಡೆಸಿದ್ದರು. ಫೇಸ್‌ಬುಕ್ ಮತ್ತು ಅವರೊಡನೆ ಕೈಜೋಡಿಸಿದ ಅಂಬಾನಿ ಗುಂಪಿನ ಕಂಪನಿಯ ಪ್ರಚಾರದ ನಿಜ ಹೂರಣವನ್ನು ಬಯಲಿಗೆಳೆದಿದ್ದರು. ಸುಮಾರು 3.75ಲಕ್ಷ ಜನ ಬೆಂಬಲಿಸಿದ್ದ ಮನವಿಯನ್ನು ಟ್ರಾಯ್‌ಗೆ ಕಳಿಸಲಾಗಿತ್ತು. ಈ ವಿಜಯದಿಂದಾಗಿ ಫೇಸ್‌ಬುಕ್‌ನ ಫ್ರೀಬೇಸಿಕ್ ನಿಷೇಧಕ್ಕೆ ಒಳಗಾಗಿದೆ.



ಸಿಪಿಐ(ಎಂ) ಪೊಲಿಟ್‌ಬ್ಯುರೊ ಟ್ರಾಯ್‌ನ ಈ ನಿರ್ಧಾರವನ್ನು ಸ್ವಾಗತಿಸಿದೆ. ಅಂತರ್ಜಾಲ ತಟಸ್ಥತೆ ಇಂಟರ್ನೆಟ್‌ನ ಒಂದು ಮೂಲಭೂತ ಸ್ತಂಭ ಎಂದಿರುವ ಸಿಪಿಐ(ಎಂ) ಟ್ರಾಯ್ ಈ ವಿಷಯದಲ್ಲಿ ಸಮಾಲೋಚನೆಗಳನ್ನು ನಡೆಸಲು ಮಾಡಿದ ಪ್ರಯತ್ನ ಶ್ಲಾಘನಾರ್ಹ ಎಂದಿದೆ.

ಇಂಟರ್ನೆಟ್ ಚಳುವಳಿಗಾರರ ಬಲವಾದ ಅಭಿಪ್ರಾಯಗಳಿಂದಾಗಿ ಮತ್ತು ಅವರ ಹೋರಾಟದಿಂದಾಗಿ ಈ ನಿರ್ಧಾರ ಹೊರಬಂದಿದೆ ಎಂದು ಸಿಪಿಐ(ಎಂ) ಈ ಚಳುವಳಿಗಾರರನ್ನು ಅಭಿನಂದಿಸಿದೆ.

ಸಮಾಜದ ಎಲ್ಲ ವಿಭಾಗಗಳಿಗೆ ಇಂಟರ್ನೆಟ್ ಸೌಲಭ್ಯದ ಲಭ್ಯತೆಯನ್ನು ಉತ್ತಮ ಪಡಿಸಬೇಕಾದ ಅಗತ್ಯವಿದೆ, ಈ ಮೂಲಕ ಈ ಮಾಧ್ಯಮದ ಅಪಾರ ಸಾಮರ್ಥ್ಯದ ಪ್ರಯೋಜನ ಎಲ್ಲರಿಗೆ ಸಿಗುವಂತಾಗಬೇಕು ಎಂದು ಸರಕಾರದ ಗಮನಕ್ಕೆ ಈ ಸಂದರ್ಭದಲ್ಲಿ ತರಬಯಸುವುದಾಗಿ ಸಿಪಿಐ(ಎಂ) ಹೇಳಿದೆ.

ಸಾರ್ವತ್ರಿಕ ಸೇವಾ ಬಾದ್ಯತೆ ನಿಧಿ(ಯುಎಸ್‌ಒ ಫಂಡ್)ಯ ಭಾಗವಾಗಿ ಸಂಗ್ರಹಿಸಿದ ಸುಮಾರು 39 ಸಾವಿರ ಕೋಟಿರೂ.ಗಳು ಬಳಕೆಯಾಗದೆ ಬಿದ್ದಿದೆ ಎಂದು ಇತ್ತೀಚೆಗೆ ವರದಿಯಾಗಿದೆ. ಇಂತಹ ಸಂಪನ್ಮೂಲಗಳನ್ನು ಕ್ರೋಡೀಕರಿಸಿ ಮಾಹಿತಿ ತಂತ್ರಜ್ಞಾನದ ಪ್ರಯೋಜನಗಳು ಹೆಚ್ಚೆಚ್ಚು ಜನಗಳಿಗೆ ತಲುಪುವಂತೆ ಮಾಡುವ ಒಂದು ಬೃಹತ್ ಪ್ರಚಾರಾಂದೋಲನವನ್ನು ಆರಂಭಿಸಲು ಸರಕಾರ ಆದ್ಯತೆ ನೀಡಬೇಕು ಎಮದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.


ಸರಕಾರ ಈ ಟ್ರಾಯ್ ನಿರ್ಧಾರದಿಂದ ಸರಿಯಾದ ಪಾಟ ಕಲಿಯಬೇಕು, ಮತ್ತು ದೂರಸಂಪರ್ಕದ ಮೂಲ ಅಂಶಗಳ ಮೇಲೆ ಗಮನ ಕೇಂದ್ರೀಕರಿಸಬೇಕು ಎಂದು ಸಿಪಿಯ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ ಈ ಸಂದರ್ಭದಲ್ಲಿ ಹೇಳಿದ್ದಾರೆ.

ಸದ್ಯಕ್ಕೆ ಭಾರತದಲ್ಲಿ ಇಂಟರ್ನೆಟ್ ತಟಸ್ಥತೆ ಉಳಿದುಕೊಂಡಿದೆ. ಆದರೆ ಇತ್ತೀಚೆಗೆ ನಮ್ಮ ಪ್ರಧಾನ ಮಂತ್ರಿಗಳು ಭೇಟಿಯಾಗಿ ಬಂದ ಫೇಸ್‌ಬುಕ್‌ನ ಮುಖ್ಯಸ್ಥ ಟ್ರಾಯ್‌ನ ಈ ನಿರ್ಧಾರದ ಬಗ್ಗೆ ಬೇಸರ ವ್ಯಕ್ತಪಡಿಸುತ್ತ ಇಂಟರ್ನೆಟ್ ತಟಸ್ಥತೆಯನ್ನು ಮುರಿಯುವ ತಮ್ಮ ಪ್ರಯತ್ನ ಇಲ್ಲಿಗೇ ನಿಲ್ಲುವದಿಲ್ಲ ಎಂಬ ಸಂಕೇತ ನೀಡಿದ್ದಾರೆ.

ಗ್ರಾಮೀಣ ಉದ್ಯೋಗ ಖಾತ್ರಿ ಕಾನೂನಿನ ದಶವಾರ್ಷಿಕೋತ್ಸವ: ಪರಿಣಾಮಕಾರಿ ಜಾರಿಗಾಗಿ ಐಕ್ಯ ಹೋರಾಟಕ್ಕೆ ಕರೆ

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾನೂನು ಬಂದು ಹತ್ತು ವರ್ಷಗಳಾಗುತ್ತಿವೆ. ಇದು ಈಗ ದೇಶದ ಒಂದು ಅತ್ಯಂತ ಪರಿಣಾಮಕಾರಿ ಸಾಮಾಜಿಕ ಭದ್ರತಾ ಕಾನೂನಾಗಿ ಎಲ್ಲರ ಗಮನ ಸೆಳೆದಿದೆ.

ಎಡಪಕ್ಷಗಳ ಬೆಂಬಲವನ್ನು ಅವಲಂಬಿಸಿದ್ದ ಯುಪಿಎ–1 ಸರಕಾರದ ಅವಧಿಯಲ್ಲಿ ಎಡಪಕ್ಷಗಳ ಅಪಾರ ಒತ್ತಡದಿಂದಾಗಿಯೇ ಈ ಕಾನೂನನ್ನು ತಂದ ಕಾಂಗ್ರೆಸ್ ಮತ್ತು ಆಗ ಅದರ ಬುನಾದಿಯನ್ನೇ ವಿರೋಧಿಸಿದ್ದ ಬಿಜೆಪಿ ಈ ಹಿಂದೆ ಯುಪಿಎ–2 ಸರಕಾರ, ಈಗ ಬಿಜೆಪಿ ನೇತೃತ್ವದ ಸರಕಾರ ಇದರ ಅಂಶಗಳನ್ನು ದುರ್ಬಲಗೊಳಿಸಲು, ಅದರ ಹಣಕಾಸು ಬೆಂಬಲ ಮತ್ತು ನಿರ್ವಹಣೆಯ ಪ್ರದೇಶವನ್ನು ತೀವ್ರವಾಗಿ ಕಡಿತ ಮಾಡಲು ಪ್ರಯತ್ನಿಸುತ್ತಲೇ, ಇದು ತಮ್ಮ ಸಾಧನೆ ಎಂದು ಬಿಂಬಿಸುವ ಪೈಪೋಟಿಗಿಳಿದಿವೆ.



ಹಿಂದಿನ ಕೂಲಿ ಪಾವತಿ ಬಾಕಿಗಳಿದ್ದರೂ ಮೋದಿ ಸರಕಾರ ಕಳೆದೆರಡು ಬಜೆಟ್‌ಗಳಲ್ಲಿ ಈ ಕಾನೂನಿನ ಜಾರಿಗೆ ಹಣಕಾಸು ಬೆಂಬಲವನ್ನು ಹೆಚ್ಚಿಸಲಿಲ್ಲ. ಯುಪಿಎ–2 ಸರಕಾರದ ಅವಧಿಯಲ್ಲಿ ಈ ಕಾನೂನಿನ ಅಡಿಯಲ್ಲಿ ಒಂದು ರೂಪಾಯಿಯನ್ನೂ ಖರ್ಚು ಮಾಡದ ಪಂಚಾಯತುಗಳ ಸಮಕ್ಯೆ 15000 ಇತ್ತು. ಈಗ ಅದು 40,000 ಕ್ಕೇರಿದೆ. ಅಲ್ಲದೆ ಬಿಜೆಪಿ ಸರಕಾರ ಈ ಕಾನೂನಿನಲ್ಲಿ ಆಮೂಲಾಗ್ರ ಬದಲಾವಣೆ ತಂದು ಕೂಲಿಗೆ ಮಾಡುವ ಖರ್ಚನ್ನು ಇಳಿಸಿ, ಸಾಮಗ್ರಿಗಳಿಗೆ ಮಾಡುವ ಖರ್ಚಿನ ಪ್ರಮಾಣವನ್ನು ಹೆಚ್ಚಿಸಲು, ಆಮೂಲಕ ಕಾಂಟ್ರಕ್ಟರುಗಳಿಗೆ ನೆರವಾಗಲು ಪ್ರಯತ್ನಿಸಿತು. ಬರಪೀಡಿತ ಪ್ರದೇಶಗಳಲ್ಲಿ ಕನಿಷ್ಟ ಕೆಲಸದ ದಿನಗಳನ್ನು 150ಕ್ಕೆ ಏರಿಸಿದರೂ, ಅದಕ್ಕೆ ತಕ್ಕ ಹಣಕಾಸು ನೀಡದೆ, ವಾಸ್ತವವಾಗಿ ಕೆಲಸದ ದಿನಗಳು ಸೇರಿದಂತೆ ಈ ಕಾನೂನಿನ ಜಾರಿಯ ಎಲ್ಲ ಸೂಚ್ಯಂಕಗಳು ಇಳಿಯುವಂತೆ ಮಾಡಿದೆ.

ಇಂತಹ ಸಂದರ್ಭದಲ್ಲಿ ದೇಶದ ಕೃಷಿ ಕೂಲಿಕಾರರೆಲ್ಲರೂ ಈ ಕಾನೂನಿನ ಅಡಿಯಲ್ಲಿ ತಮ್ಮ ಉದ್ಯೋಗದ ಹಕ್ಕನ್ನು ರಕ್ಷಿಸಿಕೊಳ್ಳು ಮುಂದೆ ಬರಬೇಕು, ಈ ಕಾನೂನಿನ ಕಟ್ಟುನಿಟ್ಟಾ ಜಾರಿಗೆ ಹೋರಾಟ ನಡೆಸಬೇಕು ಎಂದು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ ಕರೆ ನೀಡಿದೆ.

ಈ ಕಾನೂನಿನ ಜಾರಿಗೆ ಬಜೆಟ್ ನೀಡಿಕೆಯನ್ನು ದುಪ್ಪಟ್ಟಾದರೂ ಮಾಡಬೇಕು, ಕೃಷಿಯಲ್ಲಿ ದುಡಿಮೆಯ ದಿನಗಳು ತೀವ್ರವಾಗಿ ಇಳಿದಿರುವುದರಿಮದ ಕನಿಷ್ಟ 250 ದಿನಗಳ ಉದ್ಯೋಗ ಕೊಡಿಸಬೇಕು, ಬೆಲೆಯೇರಿಕೆಯನ್ನು ಸರಿದೂಗಿಸಲು ಕೂಲಿಯನ್ನು ಕನಿಷ್ಟ 300ರೂ.ಗೆ ಏರಿಸಬೇಕು, ಈ ಯೋಜನೆಯಲ್ಲಿ ಕೆಲಸ ಮಾಡುವವರಿಗೆ ಬಿಪಿಎಲ್ ಕಾರ್ಡ್ ಕೊಡಬೇಕು, ಕೂಲಿ ಪಾವತಿಯಲ್ಲಿ ವಿಳಂಬ ತಕ್ಷಣ ನಿಲ್ಲಬೇಕು, ಈಗಲೂ ಪೂರ್ಣ ಕೆಲಸ ಕೊಡಲಾಗದಿದ್ದಲ್ಲಿ ನಿರುದ್ಯೋಗ ಪರಿಹಾರವನ್ನು ಕೊಡಬೇಕು ಮತ್ತು ಭ್ರಷ್ಟಾಚಾರ ತಡೆಯಲು ಈ ಕಾನೂನಿನ ಪ್ರಕಾರ ಮಾಡಬೇಕಾದ ಸಾಮಾಜಿಕ ಲೆಕ್ಕ ಪರಿಶೋಧನೆಯನ್ನು ನಿಯಮಿತವಾಗಿ ಮಾಡಬೇಕು ಎಂಬ ಬೇಡಿಕೆಗಳ ಮೇಲೆ ಗ್ರಾಮ ಮಟ್ಟದಲ್ಲಿ ಈ ಕಾನೂನಿನ ದಶವಾರ್ಷಿಕೋತ್ಸವದ ಆಚರಣೆಯನ್ನು ನಡೆಸಬೇಕು ಎಂದು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ ತನ್ನ ಘಟಕಗಳಿಗೆ ಕರೆ ನೀಡಿದೆ.

ಮೋದಿ ಸರಕಾರ ದೇಶದಲ್ಲಿರುವ ಸಾಮಾಜಿಕ ಭದ್ರತಾ ವ್ಯವಸ್ಥೆಯ ಮೇಲೆ ದಾಳಿಗಳನ್ನು ನಡೆಸುತ್ತಿದೆ. ಇದರತ್ತ ಗಮನ ಸೆಳೆಯಲು ಅಖಿಲ ಭಾರತ ಕೃಷಿ ಕೂಲಿಗಾರರ ಸಂಘದ ಕೇಂದ್ರ ಕಾರ್ಯಕಾರಿ ಸಮಿತಿ ಒಂದು ರಾಷ್ಟ್ರೀಯ ವಿಚಾರ ಸಂಕಿರಣವನ್ನು ಮತ್ತು ದೇಶಾದ್ಯಂತ ಎರಡು ತಿಂಗಳ ಪ್ರಚಾರಾಂದೋಲನವನ್ನು ನಡೆಸಲು ನಿರ್ಧರಿಸಿದೆ.

ಲೈಂಗಿಕ ಕಿರುಕುಳದ ಆಪಾದಿತ ಪ್ರಭಾವಿ ವ್ಯಕ್ತಿಯ ಮರುನೇಮಕ-ಎಐಡಿಡಬ್ಲ್ಯುಎ ಖಂಡನೆ

ದಿಲ್ಲಿಯಲ್ಲಿರುವ ಅಂತರ್ರಾಷ್ಟ್ರೀಯ ಖ್ಯಾತಿಯ ಸಂಸ್ಥೆ 'ತೆರಿ'(ದಿ ಎನರ್ಜಿ ಅಂಡ್ ರಿಸೋರ್ಸಸ್ ಇನ್‌ಸ್ಟಿಟ್ಯೂಟ್)ಗೆ ಆರ್.ಕೆ. ಪಚೌರಿಯವರನ್ನು ಮತ್ತೆ ನೇಮಕ ಮಾಡಿರುವುದನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ (ಎಐಡಿಡಬ್ಲ್ಯುಎ) ಬಲವಾಗಿ ಖಂಡಿಸಿದೆ.

ಈ ಸಂಸ್ಥೆಯ ಹಿಂದಿನ ಮುಖ್ಯಸ್ಥರಾದ ಆರ. ಕೆ.ಪಚೌರಿಯವರ ಮೇಲೆ ಅಲ್ಲೇ ಕೆಲಸ ಮಾಡುತ್ತಿದ್ದ ಒಬ್ಬ ಮಹಿಳೆಯನ್ನು ಲೈಂಗಿಕ ಕಿರುಕುಳಕ್ಕೆ ಗುರಿಪಡಿಸಿದ ಆಪಾದನೆ ಬಂದಿತ್ತು. ಈ ಹಿನ್ನೆಲೆಯಲ್ಲಿ ಅವರು ತೆರಿಯಿಂದ ದೀರ್ಘ ರಜೆಯ ಮೇಲೆ ಹೋಗಬೇಕಾಗಿ ಬಂದಿತ್ತು. ಇವರು ಒಬ್ಬ ವಿಶ್ವವಿಖ್ಯಾತ ಹವಾಮಾನ ವಿಜ್ಞಾನಿಯಾಗಿದ್ದು ವಿಶ್ವ ಸಂಸ್ಥೆಯ ಉನ್ನತ ಹವಾಮಾನ ಬದಲಾವಣೆ ಸಂಸ್ಥೆ ಐಪಿಸಿಸಿಯ ಮುಖ್ಯಸ್ಥರಾಗಿದ್ದರು. ಆ ಸ್ಥಾನದಿಂದ ಮತ್ತು ನಮ್ಮ ಪ್ರಧಾನ ಮಂತ್ರಿಗಳ ಹವಾಮಾನ ಬದಲಾವಣೆ ಕುರಿತ ಸಲಹಾಗಾರರ ಸಮಿತಿಯಿಂದಲೂ ಕೆಳಗಿಳಿದಿದ್ದರು. ಅವರ ಮೇಲಿನ ಆಪಾದನೆಯ ತನಿಖೆ ಇನ್ನೂ ನಡೆಯುತ್ತಿದ್ದು, ದಿಲ್ಲಿ ಹೈಕೋರ್ಟಿನಲ್ಲಿ ವಿಚಾರಣೆ ಆರಂಭವಾಗಲಿದೆ. ಇಂತಹ ಸಂರ್ಭದಲ್ಲೇ ಅವರನ್ನು ಮತ್ತೆ 'ತೆರಿ' ಸಂಸ್ಥೆಯಲ್ಲಿ ಅವರಿಗಾಗಿ ಹೊಸದೊಂದು ಕಾರ್ಯಕಾರಿ ಉಪಾಧ್ಯಕ್ಷ ಎಂಬ ಹುದ್ದೆಯನ್ನು ಸೃಷ್ಟಿಸಿ ಅದಕ್ಕೆ ನೇಮಕ ಮಾಡಲಾಗಿದೆ.

ಈ ಬಗ್ಗೆ ವ್ಯಾಪಕವಾಗಿ ಆಕ್ರೋಶ ವ್ಯಕ್ತವಾಗಿದೆ. ಎಐಡಿಡಬ್ಲ್ಯುಎ ಈ ಸುದ್ದಿಯ ಬಗ್ಗೆ ಆಘಾತ ಮತ್ತು ಪ್ರತಿಭಟನೆಯನ್ನು ವ್ಯಕ್ತಪಡಿಸಿದೆ.

ಪಚೌರಿಯವರು ಒಬ್ಬ ಅತ್ಯಂತ ಪ್ರಭಾವಿ ವ್ಯಕ್ತಿ. ಅವರನ್ನು ಮತ್ತೆ 'ತೆರಿ'ಗೆ ನೇಮಕ ಮಾಡಿರುವುದು ಈ ಆಪಾದನೆಯ ವಿಚಾರಣೆಯ ಮೇಲೆ ದುಷ್ಪ್ರಭಾವ ಬೀರುವ, ದೂರು ನೀಡಿದ ಯುವ ಮಹಿಳೆಯನ್ನು ಹೆದರಿಸುವ ಸಾಧ್ಯತೆಯಿದೆ. ಪಚೌರಿಯವರ ನೇಮಕವನ್ನು ನ್ಯಾಯಾಲಯದ ತೀರ್ಪು ಬರುವ ವರೆಗೆ ತಡೆಹಿಡಿಯಬೇಕು, ದೂರು ನೀಡಿದವರ ಅಹವಾಲನ್ನು ನ್ಯಾಯಯುತವಾಗಿ ಆಲಿಸಿ ನ್ಯಾಯ ದೊರಕಿಸುವ ವರೆಗೆ ತಡೆ ಹಿಡಿಯಬೇಕು ಎಂದು ಎಐಡಿಡಬ್ಲ್ಯುಎ ಆಗ್ರಹಿಸಿದೆ.



ಮಾಧ್ಯಮರಂಗದೊಳಗಿನ ಭ್ರಷ್ಟಾಚಾರವನ್ನು ಯಾರೂ ಬಹಿರಂಗವಾಗಿ ಪ್ರಶ್ನಿಸಲು ಹೋಗದೆ ಅಂತರಂಗದ ಪಿಸುದನಿಯಲ್ಲಿಯೇ ವ್ಯಥೆಪಡುತ್ತಿರುವ ದಿನಗಳಲ್ಲಿ ನಾವಿದ್ದೇವೆ. ಇಂತಹ ಹೊತ್ತಿನಲ್ಲಿ ವಿಜಯವಾಣಿ ಪತ್ರಿಕೆಯ ಮಡಿಕೇರಿ ವರದಿಗಾರ ಅಜ್ಜಮಾಡ ರಮೇಶ ಕುಟ್ಟಪ್ಪ ಬಹಿರಂಗವಾಗಿಯೇ ಲಂಚದ ಆಮಿಷವನ್ನು ಧಿಕ್ಕರಿಸಿ ಭ್ರಷ್ಟರಿಗೆ ಸವಾಲೆಸೆಯುವ ಧೈರ್ಯ ತೋರಿರುವುದು ಮತ್ತು ಈ ಮೂಲಕ ವೃತ್ತಿಧರ್ಮವನ್ನು ಎತ್ತಿ ಹಿಡಿದಿರುವುದು ಶ್ಲಾಘನೀಯ. ಅವರ ಪ್ರಾಮಾಣಿಕತೆಯನ್ನು ಗೌರವಿಸಿದ ಪತ್ರಿಕೆಯ ಮಾಲೀಕರಾದ ವಿಜಯ ಸಂಕೇಶ್ವರ್ ಅವರು ಕೂಡಾ ಅಷ್ಟೇ ಅಭಿನಂದಾರ್ಹರು. ಇಷ್ಟೆಲ್ಲ ದಿಟ್ಟತನ ತೋರಿದ ಪತ್ರಿಕೆ ಲಂಚದ ಆಮಿಷವೊಡ್ಡಿದ ಸಂಸದನ ಹೆಸರನ್ನೂ ಬಹಿರಂಗಗೊಳಿಸಿದ್ದರೆ Story ಪೂರ್ಣಗೊಳ್ಳುತ್ತಿತ್ತಲ್ಲವೇ? ಇತ್ತೀಚೆಗೆ ಕೆಲವು ಸಂಸದರು ತಮಗೆ ವೇತನ ಕಡಿಮೆಯಾಯಿತೆಂದು ರೋದಿಸುತ್ತಿರುವಾಗ ಹತ್ತು ಲಕ್ಷ ರೂಪಾಯಿ ಲಂಚಕೊಡುವಷ್ಟು ಶ್ರೀಮಂತನಾಗಿರುವ ಈ ಸಂಸದ ಮಹಾಶಯ ಯಾರೆಂದು ತಿಳಿಯುವ ಕುತೂಹಲ ಸಹಜವಾದುದಲ್ಲವೇ?

– ದಿನೇಶ್ ಅಮೀನ್ ಮಟ್ಟು

ಶೀತಲ ಸಾಠೆ ಮತ್ತು ಕಬೀರ್ ಕಲಾಮಂಚ್‌ಗೆ ಸೌಹಾರ್ದ ಬೆಂಬಲ

ಕಬೀರ್ ಕಲಾಮಂಚ್ ಎಂಬದು ಜಾತಿ ಪದ್ಧತಿ ಮತ್ತು ತಾರತಮ್ಯಗಳ ವಿರುದ್ಧ ಪ್ರತಿಭಟನೆಗೆ, ದಲಿತ ಹಕ್ಕುಗಳ ಸ್ಥಾಪನೆಗೆ ಸಂಗೀತವನ್ನು ಮಾಧ್ಯಮವಾಗಿ ಆರಿಸಿಕೊಂಡ ಪುಣೆಯ ಒಂದು ಸಾಂಸ್ಕೃತಿಕ ಕಲಾತಂಡ, 2011ರಿಂದ ಈ ತಂಡದ ಸದಸ್ಯರನ್ನು ಕಾನೂನು ಬಾಹಿರ ಚಟುವಟಿಕೆಗಳ ತಡೆ ಕಾನೂನಿನ ಅಡಿಯಲ್ಲಿ ನಕ್ಸಲೀಯರೆಂದು ಬಂಧಿಸಲಾಗುತ್ತಿದೆ.

2012ರಲ್ಲಿ ಈ ಕಲಾತಂಡದ ಸಂಸ್ಥಾಪಕರಾದ ಶೀತಲ ಸಾಠೆ ಮತ್ತು ಪತಿ ಸಚಿನ್ ಮಾಲಿ ಅವರು ಈ ಬಂಧನಗಳನ್ನು ಪ್ರತಿಭಟಿಸಿ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕಾಗಿ 'ಸತ್ಯಾಗ್ರಹ'ವಾಗಿ ಪೋಲೀಸ್ ಠಾಣೆಗೆ ತಾವಾಗಿಯೇ ಹೋದರು. ಅವರನ್ನು ಬಂಧಿಸಲಾಯಿತು. ಮುಂದೆ ಶೀತಲ ಅವರಿಗೆ ಜಾಮೀನು ಕೊಡಲಾಯಿತು. ಇತರರು ಇನ್ನೂ ಜೈಲಿನಲ್ಲಿಯೇ ಇದ್ದಾರೆ.

ಇವರೊಂದಿಗೆ ಸೌಹಾರ್ದ ವ್ಯಕ್ತಪಡಿಸಲು ಕಬೀರ್ ಕಲಾಮಂಚ್ ರಕ್ಷಣಾ ಸಮಿತಿ ಎಂಬುದು ರಚನೆಗೊಂಡಿದ್ದು ಕಳೆದ ವಾರ ದಿಲ್ಲಿಯಲ್ಲಿ ಶೀತಲ ಸಾಠೆ ಮತ್ತು ತಂಡದವರಿಂದ ಒಂದು ಕಾರ್ಯಕ್ರಮವನ್ನು ಈ ಸಮಿತಿ ಏರ್ಪಡಿಸಿತ್ತು. ಸುಮಾರು 500 ಜನ ಭಾಗವಹಿಸಿದ್ದರು. ಶೀತಲ ಸಾಠೆ ಮತ್ತು ತಂಡದವರು ಇತ್ತೀಚೆಗೆ ಹೈದರಾಬಾದ್ ವಿಶ್ವವಿದ್ಯಾಲಯದಲ್ಲಿ ಜಾತಿ ತಾರತಮ್ಯಕ್ಕೆ ಬಲಿಯಾದ ರೋಹಿತ್ ವೆಮುಲಾ ಕುರಿತ ಹಾಡು ಪ್ರಸ್ತುತ ಪಡಿಸಿದರು. 'ರೋಹಿತ್ ಹೋದ, ದಲಿತ ಸತ್ತ, ಪ್ರಜಾಸತ್ತೆ ಸತ್ತು ಹೋಯಿತು' ಎಂದು ಆರಂಭವಾಗುವ ಈ ಹಾಡು ಜಾತಿ ತಾರತಮ್ಯಗಳ ಬಗ್ಗೆ ಹೇಳುತ್ತ ಕೊನೆಯಲ್ಲಿ 'ನಾವೀಗ ಹೆದರೆವು, ನಾವೀಗ ಸಾಯೆವು, ಸಂಘರ್ಷ ನಡೆಸುವೆವು,'ದಲಿತ ಬಂದ, ವಿದ್ಯಾರ್ಥಿ ಬಂದ, ಪ್ರಜಾಸತ್ತೆ ಜೀವಂತವಾಯಿತು' ಎಂಬ ಸಂದೇಶದೊಂದಿಗೆ ಕೊನೆಗೊಳ್ಳುತ್ತದೆ.

ಈ ಸಂದರ್ಭದಲ್ಲಿ ಮಾತಾಡುತ್ತ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಸುಭಾಷಿಣಿ ಅಲಿಯವರು ಶೀತಲ ಸಾಠೆ ಮತ್ತು ಕಬೀರ್ ಕಲಾಮಂಚ್‌ಗೆ ಸಿಪಿಐ(ಎಂ)ನ ಸೌಹಾರ್ದವನ್ನು ವ್ಯಕ್ತಪಡಿಸಿದರು. ಅಭಿವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆಗೆ ಸಿಪಿಐ(ಎಂ) ಸಾಧ್ಯವಿರುವ ಪ್ರತಿಯೊಂದು ಕಡೆಯೂ ನಿಲ್ಲುತ್ತದೆ ಎಂದ ಅವರು ಪ್ರಸ್ತುತ ಆಳ್ವಿಕೆಯಲ್ಲಿ ಭಿನ್ನಮತದ ಹಕ್ಕಿಗೆ ಬೆದರಿಕೆಯೊಡ್ಡಲಾಗುತ್ತಿದೆ, ಪ್ರಜಾಸತ್ತಾತ್ಮಕ ದನಿಗಳನ್ನು ದಮನ ಮಾಡುವ ಇಂತಹ ಶಕ್ತಿಗಳಿಗೆ ಸರಿಯಾದ ಉತ್ತರ ಕೊಡಬೇಕು ಎಂದು ಅವರು ಹೇಳಿದರು.



ವಾಚು ಕನ್ನಡಕಗಳ, ಆಪಾದನೆಗಳ ರಾಜಕೀಯ ಸಾಕು!

ಸಂಪಾದಕೀಯ

ಮುಖ್ಯಮಂತ್ರಿ ಸಿದ್ದರಾಮಯ್ಯನವರ ವಾಚು, ಕನ್ನಡಕಗಳ ಮೇಲೆ ಕುಮಾರಸ್ವಾಮಿಯವರ ಕಣ್ಣು ಬಿದ್ದಿದೆ. ವಾಚು 50 ಲಕ್ಷಕ್ಕಿಂತಲೂ ಹೆಚ್ಚು ಬೆಲೆ ಬಾಳುತ್ತದೆ. ಕನ್ನಡಕ ಸಹ ಲಕ್ಷಾಂತರ ಬೆಲೆ ಬಾಳುವಂತಹುದು. ಇವು ಎಲ್ಲಿಂದ ಬಂದವು ಎಂದು ಅವರು ಪ್ರಶ್ನಿಸಿ ವಿವಾದ ಎಬ್ಬಿಸಿದ್ದಾರೆ. ವಾಚು ಬೇಕಾದರೆ ಕುಮಾರಸ್ವಾಮಿಯವರಿಗೆ 5 ಲಕ್ಷಕ್ಕೆ ಕೊಟ್ಟು ಬಿಡುತ್ತೇನೆ. ಕುಮಾರಸ್ವಾಮಿಯವರ ಮಗನ ಕಾರು ಕೋಟಿಗಟ್ಟಲೆ ಬೆಲೆಯದ್ದು. ಅದಕ್ಕೆ ಹಣ ಎಲ್ಲಿಂದ ಬಂತು? ಅವನು ಸಂಪಾದಿಸಿದ್ದಾನಾ? ಸಿನಿಮಾ ಮಾಡಲು ಕೋಟಿಗಟ್ಟಲೆ ಖರ್ಚು ಮಾಡುತ್ತಿರುವುದು ಯಾರು? ಎಂದು ಸಿದ್ದರಾಮಮಯ್ಯ ಮರುಸವಾಲು ಹಾಕಿದ್ದಾರೆ. ವಾಚು ಸ್ನೇಹಿತರು ಕೊಟ್ಟ ಉಡುಗೊರೆ ಎಂದೂ ಉತ್ತರಿಸಿದ್ದಾರೆ. ಕಳೆದ ವಾರದ ರಾಜಕೀಯ ಚರ್ಚೆ ಮುಖ್ಯಮಂತ್ರಿಗಳ ವಾಚು, ಕನ್ನಡಕಗಳ ಸುತ್ತಲೇ ಗಿರಕಿ ಹೊಡೆಯುತ್ತಿತ್ತು. ಮಾಧ್ಯಮಗಳು ಈ ವಿವಾದವನ್ನು ಎತ್ತಿಕೊಂಡಿದ್ದು ಈ ವಾಚು, ಕನ್ನಡಕಗಳ ಬ್ರಾಂಡು ಯಾವುದು? ಅದಕ್ಕೆ ಎಷ್ಟು ಬೆಲೆ? ಅದು ಎಲ್ಲಿಂದ ಖರೀದಿಸಿರಬಹುದು? ಯಾರು ಉಡುಗೊರೆ ಕೊಟ್ಟಿರಬಹುದು? ಅವರು ಪ್ರತಿಯಾಗಿ ಏನೂ ನಿರೀಕ್ಷಿಸಿರಬಹುದು? ಉಡುಗೊರೆ ಕೊಟ್ಟಿದ್ದರೆ ಮುಖ್ಯಮಂತ್ರಿಗಳು ಯಾವ ಕಾನೂನಿನ ತೊಡ-ಕಿಗೆ ಸಿಕ್ಕಿ ಹಾಕಿಕೊಳ್ಳುತ್ತಾರೆ? ಎಂದೆಲ್ಲಾ ತನಿಖೆ ಚರ್ಚೆ ಆರಂಭಿಸಿವೆ.

ಕರ್ನಾಟಕದಲ್ಲಿ ಜಿಲ್ಲಾ ಮತ್ತು ತಾಲೂಕು ಪಂಚಾಯತ್ ಚುನಾವಣೆಗಳು ನಡೆಯುತ್ತಿವೆ. ಗ್ರಾಮೀಣ ಪ್ರದೇಶದ ಜನರ ಸಮಸ್ಯೆಗಳು ಯಾವುವು? ಜಿಲ್ಲಾ ಮತ್ತು ತಾಲೂಕು ಪಂಚಾಯತುಗಳು ಜನರ ಈ ನೂರೆಂಟು ಸಮಸ್ಯೆಗಳನ್ನು ತುರ್ತಾಗಿ ಸಮರ್ಪಕವಾಗಿ ಏಕೆ ಪರಿಹರಿಸಲು ಸಾಧ್ಯವಾಗಿಲ್ಲ? ಅವುಗಳಿಗೆ ಅಧಿಕಾರ ಮತ್ತು ಸಂಪನ್ಮೂಲಗಳ ಕೊರತೆ ಇದೆಯೆ? ಇದ್ದ ಅಧಿಕಾರ ಮತ್ತು ಸಂಪನ್ಮೂಲಗಳನ್ನು ಅವು ಬಳಸಿಕೊಳ್ಳುತ್ತಿವೆಯೇ? ಅದಕಾಗಿ ಅವುಗಳಿಗೆ ಬೇಕಾದಷ್ಟು ಸಿಬ್ಬಂದಿ ಇದೆಯೇ? ಇತ್ತೀಚೆಗೆ ತಿದ್ದುಪಡಿಯಾದ ಪಂಚಾಯತ್ ಕಾನೂನು ಈ ವಿಷಯಗಳನ್ನು ಎಷ್ಟರ ಮಟ್ಟಿಗೆ ಪರಿಹರಿಸಿದೆ? ಇವು ಈ ವಾರದ ರಾಜಕೀಯ ಚರ್ಚೆಯ ಪ್ರಧಾನ ವಿಷಯಗಳಾಗಬೇಕಿತ್ತು. ಇವಲ್ಲದೆ ರಾಜ್ಯದ ಜನತೆ ಬರ ಪರಿಸ್ಥಿತಿಯಿಂದ ಕಂಗಾಲಾಗಿದ್ದಾರೆ. ಕೇಂದ್ರ ಸರಕಾರ ಕೊಟ್ಟಿರುವ ಬರ ಪರಿಹಾರ ಪೂರ್ತಿಯಾಗಿ ಜನತೆಗೆ ತಲುಪುತ್ತಿಲ್ಲ ಎಂಬ ತೀವ್ರ ಆಪಾದನೆಗಳು ಕೇಳಿ ಬಂದಿವೆ. ರೈತರ ಆತ್ಮಹತ್ಯೆಗಳು ಮುಂದುವರೆಯುತ್ತಿವೆ. ಇನ್ನಷ್ಟು ಬೆಳೆಗಳನ್ನು ಬೆಳೆಯುವ ರೈತರು ಆತ್ಮಹತ್ಯೆಗಳಿಗೆ ತುತ್ತಾಗುತ್ತಿದ್ದಾರೆ. ಇವೂ ರಾಜಕೀಯ ಸಂವಾದ–ವಿವಾದಗಳ ವಿಷಯಗಳಾಗಬೇಕಿತ್ತು.

ಬದಲಾಗಿ ಮುಖ್ಯಂತ್ರಿಗಳ ವಾಚು, ಕನ್ನಡಕಗಳು ರಾಜಕೀಯ ಚರ್ಚೆಯ ಪ್ರಧಾನ ವಿಷಯವಾಗಿರುವುದು ಆಳುವ ಮತ್ತು ವಿರೋಧಿ ಪಕ್ಷಗಳ ರಾಜಕೀಯ ದೀವಾಳಿತನ ತೋರಿಸುತ್ತಿವೆ. ಮುಖ್ಯಮಂತ್ರಿಗಳು ಮತ್ತು ಇತರ ಮಂತ್ರಿಗಳು ದುಬಾರಿ ಅಲ್ಲದ ಶೋಕಿ ಇಲ್ಲದ ಸರಳ ಕಳಂಕ ರಹಿತ ಜೀವನ ಸಾಗಿಸಬೇಕು. ಅವರ ಜೀವನಶೈಲಿ, ಅವರು ಬಳಸುವ ವಸ್ತುಗಳು, ಅವನ್ನು ಖರೀದಿಸಲು ಹಣ ಎಲ್ಲಿಂದ ಬಂತು? ಇಂತಹ ಉಡುಗೊರೆಗಳನ್ನು ಕೊಟ್ಟವರು ಯಾರು? ಅವರು ಬರಿಯ ಸ್ನೇಹಕ್ಕಾಗಿಯೇ ಉಡುಗೊರೆ ಕೊಟ್ಟರೇ? – ಇವೆಲ್ಲವೂ ಸಾರ್ವಜನಿಕ ರಾಜಕೀಯ ಚರ್ಚೆಯ ವಿಷಯ ಆಗಬಾರದೆಂದೇನಿಲ್ಲ. ಆದರೆ ಅವೇ ಪ್ರಧಾನ ಅಥವಾ ಏಕಮಾತ್ರ ವಿಷಯವಾಗುವುದು ರಾಜಕೀಯ ದೀವಾಳಿತನವನ್ನು ಪ್ರತಿನಿಧಿಸುತ್ತದೆ ಅಷ್ಟೇ. ಅಲ್ಲದೆ ಮುಖ್ಯಮಂತ್ರಿಗಳಿಗಿಂತಲೂ ಎಷ್ಟೋ ಪಟ್ಟು ಹೆಚ್ಚಿನ ದುಬಾರಿ ಶೋಕಿಯ ಜೀವನಶೈಲಿ ಹೊಂದಿರುವ ಕುಮಾರಸ್ವಾಮಿ ಇಂತಹ ಆಪಾದನೆ ಮಾಡುವುದು, ನೈಸ್ ಅಪಖ್ಯಾತಿಯ ಖೇಣಿ ಈ ಬಗ್ಗೆ ಸಿಬಿಐ ತನಿಖೆಗೆ ಒತ್ತಾಯಿಸುವುದು ಇನ್ನಷ್ಟು ಹಾಸ್ಯಾಸ್ಪದವಾಗಿದೆ

ವಾಚು, ಕನ್ನಡಕ ವಿವಾದ ಮಾತ್ರವಲ್ಲ, ಈ ವಾರದ ಇತರ ರಾಜಕೀಯ ಚರ್ಚೆಗೆ ಒಳಗಾದ ಇತರ ವಿಷಯಗಳಲ್ಲೂ ಮೂರೂ ಪ್ರಮುಖ ರಾಜಕೀಯ ಪಕ್ಷಗಳು ಇದೇ ದೀವಾಳಿತನ ಪ್ರದರ್ಶಿಸಿವೆ. ಚುನಾವಣೆಗಳ ಸಮಯದಲ್ಲಿ ಹಿಂದೆಯೂ ಆದಂತೆ ಹಿರಿಯ ಕಾಂಗ್ರೆಸ್ ನಾಯಕರ ಸರಕಾರದ ಕಾರ್ಯ ವೈಖರಿ ಬಗ್ಗೆ ಬಹಿರಂಗ ಟೀಕೆ ರಾಜಕೀಯ ಸಂವಾದವನ್ನು ಇನ್ನಷ್ಟು ದಿಕ್ಕು ತಪ್ಪಿಸಿದೆ. ಮಾಜಿ ಮುಖ್ಯಮಂತ್ರಿ ಕೃಷ್ಣ ಸಿದ್ಧರಾಮಯ್ಯ ಮಂತ್ರಿಮಂಡಲದಲ್ಲಿ 'ತೂಕದ ವ್ಯಕ್ತಿತ್ವದವರು ಇಲ್ಲ' ಎನ್ನುವುದು, ಹಿರಿಯ ಕಾಂಗ್ರೆಸ್ ನಾಯಕ ಜನಾರ್ಧನ ಪೂಜಾರಿ 'ಸಚಿವರು ಮುಖ್ಯಮಂತ್ರಿಯ ಮಾತುಗಳನ್ನು ಕೇಳುತ್ತಿಲ್ಲ ಮತ್ತು ಕಾರ್ಯಕರ್ತರಿಗೆ ಸ್ಪಂದಿಸುತ್ತಿಲ್ಲ' ಎಂಬ ಆಪಾದನೆಯನ್ನು ಮಾಡುವುದು 'ಮೂಲ ಕಾಂಗ್ರೆಸಿಗರು' ಮತ್ತು 'ವಲಸೆ ಬಂದವರ' ನಡುವಿನ ಘರ್ಷಣೆಯನ್ನು ಇನ್ನೊಮ್ಮೆ ಮುನ್ನೆಲೆಗೆ ತಂದಿದೆ. ಹೆಬ್ಬಾಳದ ಮರುಚುನಾವಣೆಯ ಅಭ್ಯರ್ಥಿಯ ಆಯ್ಕೆಯಲ್ಲಿ ಜಾಫರ್ ಶರೀಫ್ ಮತ್ತು ಸಿದ್ಧರಾಮಯ್ಯ ಅವರ ನಡುವಿನ ಮುಸುಕಿನೊಳಗಿನ ಸಮರ ಇನ್ನೂ ಹಸಿಯಾಗಿದೆ. ಕೇರಳದ ಚುನಾವಣೆಗಳ ಸಂದರ್ಭದಲ್ಲಿ 'ಕಾಂಗ್ರೆಸಿಗರು ಮಾತ್ರ ಕಾಂಗ್ರೆಸಿಗರನ್ನು ಸೋಲಿಸಲು ಸಾಧ್ಯ' ಎಂಬ ರಾಹುಲ್ ಗಾಂಧಿ ಅವರ ಉದ್ಧಟ ಹೇಳಿಕೆ ಸ್ವಲ್ಪ ಬದಲಾವಣೆಯೊಂದಿಗೆ ('ಕಾಂಗ್ರೆಸಿಗರನ್ನು ಸೋಲಿಸಲು ಕಾಂಗ್ರೆಸಿಗರೇ ಸಾಕು') ಕರ್ನಾಟಕಕ್ಕಂತೂ ಚೆನ್ನಾಗಿ ಒಪ್ಪುತ್ತದೆ!

ಕರ್ನಾಟಕದ ಪ್ರಮುಖ ವಿರೋಧ ಪಕ್ಷವಾದ ಜೆಡಿ(ಎಸ್) ಒಳಗೆ ಸಹ ಎಲ್ಲವೂ ಸರಿಯಾಗಿಲ್ಲ. ದೇವೇಗೌಡರಂತಹ ಹಿರಿಯ ನಾಯಕರು ಪ್ರಧಾನಿಯಾಗಿದ್ದವರು ತಮ್ಮದೇ ಪಕ್ಷದ ಅಲ್ಪಸಂಖ್ಯಾತ ಶಾಸಕನೊಬ್ಬನನ್ನು 'ಮೀರ್ ಸಾದಿಕ್' ಎಂದು ಸಾರ್ವಜನಿಕವಾಗಿ ಹೀಯಾಳಿಸುವುದರೊಂದಿಗೆ ರಾಜಕೀಯ ಸಂವಾದವನ್ನು ಇನ್ನಷ್ಟು ಕೀಳುಮಟ್ಟಕ್ಕೆ ಒಯ್ದಿದ್ದಾರೆ. ಈ ಬಗ್ಗೆ ಅಲ್ಪಸಂಖ್ಯಾತರ ಪ್ರತಿಭಟನೆಯೂ ವ್ಯಕ್ತವಾಗಿದೆ.

ಜಿಲ್ಲಾ/ತಾಲೂಕು ಪಂಚಾಯತ್ ಚುನಾವಣೆಗಳು ಮತ್ತು ಮೂರು ವಿಧಾನಸಭಾ ಮರು ಚುನಾವಣೆಗಳಲ್ಲಿ ಮೂರೂ ಪ್ರಮುಖ ರಾಜಕೀಯ ಪಕ್ಷಗಳ ರಾಜಕಾರಣದ ವೈಖರಿ ಇನ್ನೊಮ್ಮೆ ಬಯಲಾಗಿದೆ. ಟಿಕೆಟ್ ಕೊಡಿಸುವುದರಲ್ಲಿ ಕುಟುಂಬ ರಾಜಕಾರಣ, ಬಣಗಳ ಒಳಜಗಳ, ಟಿಕೆಟ್ ಅಂತಿಮವಾದ ನಂತರ ಹಿಂತೆಗೆಯಲು ವಿರೋಧಿ ಅಭ್ಯರ್ಥಿಗಳಿಗೆ ಬೆದರಿಕೆ/ಒಲೈಕೆ, ಪಕ್ಷಗಳ ಗಡಿಬೇಧಗಳನ್ನು ಮೀರಿ ಜಾತಿ ಮುಂತಾದ ಹಿತಾಸಕ್ತಿಗಳಿಗಾಗಿ ಒಳ ಒಪ್ಪಂದಗಳು – ಇವೇ ಚುನಾವಣಾ ರಾಜಕಾರಣ ಎಂದು ಮೂರೂ ಪಕ್ಷಗಳು ಮತ್ತೆ ತೋರಿಸಿವೆ. ತಮ್ಮ ನಡುವೆ ಯಾವುದೇ ವ್ಯತ್ಯಾಸಗಳಿಲ್ಲ ಎಂದು ಒತ್ತಿ ಹೇಳುತ್ತಿವೆ. ಮತದಾನದ ದಿನ ಹತ್ತಿರ ಬರುತ್ತಿದ್ದಂತೆ ಸೀರೆ, ಹಣ, ಹೆಂಡ, ಉಡುಗೊರೆಗಳ ಹೊಳೆ ಹರಿಸುವುದರಲ್ಲೂ ಒಂದು ಪಕ್ಷ ಇನ್ನೊಂದು ಪಕ್ಷದೊಂದಿಗೆ ಸ್ಪರ್ಧೆಯಲ್ಲಿದೆ. ಜಿಲ್ಲಾ/ತಾಲೂಕು ಪಂಚಾಯತ್ ಚುನಾವಣೆಗಳಲ್ಲೂ 2–4 ಕೋಟಿ ರೂ. ಖರ್ಚು ಮಾಡದೆ ಯಾವುದೇ ಪಕ್ಷದ ಅಭ್ಯರ್ಥಿ ಗೆಲ್ಲಲಾರ ಎಂಬ ಸ್ಥಿತಿ ನಿರ್ಮಾಣವಾಗಿದೆ. ಇಷ್ಟೆಲ್ಲಾ ಚುನಾವಣಾ ಅಕ್ರಮಗಳು ನಡೆಯುತ್ತಿದ್ದರೂ ಕೆಲವು ನಾಮ್–ಕಾ–ವಾಸ್ತೆ ಕ್ರಮಗಳನ್ನು ಬಿಟ್ಟರೆ ಚುನಾವಣಾ ಆಯೋಗ ಕಣ್ಣು ಮುಚ್ಚಿ ಕುಳಿತಿದೆ. ಚುನಾವಣಾ ಅಕ್ರಮಗಳು, ಅವನ್ನು ತಡೆಯುವುದು ಹೇಗೆ ಎಂಬ ಬಗ್ಗೆ ರಾಜಕೀಯ ಸಂವಾದ ನಡೆಯಬೇಕಿತ್ತು.

ಮೂರು ಬೂರ್ಜ್ವಾ–ಭೂಮಾಲಕ ಆಳುವ ವರ್ಗದ ಪಕ್ಷಗಳ ಈ ಚಿಲ್ಲರೆ ರಾಜಕಾರಣವನ್ನು ಮೀರಿ, ನಿಜವಾದ ಜನರ ನಿಜವಾದ ಕಾಳಜಿಯ ವಿಷಯಗಳನ್ನು ಚುನಾವಣೆಯ (ಮತ್ತು ಇತರ) ಸಂದರ್ಭದಲ್ಲೂ ರಾಜಕೀಯ ಚರ್ಚೆಯ ಮುನ್ನೆಲೆಗೆ ತರುವುದು ಸಿಪಿಐ(ಎಂ) ಮತ್ತು ಎಡ ಪಕ್ಷಗಳ ರಾಜಕೀಯ ಜವಾಬ್ದಾರಿಯಾಗಿದೆ

ಈ ವಾರ ಚರಿತ್ರೆಯಲ್ಲಿ

ಫೆಬ್ರುವರಿ 11, 1950



ಸೇಲಮ್ ಜೈಲಿನಲ್ಲಿಟ್ಟಿದ್ದ ಕಮ್ಯುನಿಸ್ಟರಲ್ಲಿ 100ಕ್ಕೂ ಹೆಚ್ಚು ಮಂದಿಯನ್ನು ಒಂದು ಹಾಲ್‌ನಲ್ಲಿ ತುಂಬಿಸಿ ಹೊರಗೆ ಬೀಗ ಜಡಿದು ಅದರ ಎಲ್ಲ ಕಿಟಕಿಗಳಿಂದ ಗೋಲೀಬಾರ್ ನಡೆಸಲಾಯಿತು. ಈ ಕಗ್ಗೊಲೆಯಲ್ಲಿ 22 ಕಮ್ಯುನಿಸ್ಟರು ಬಲಿಯಾದರು, 107 ಮಂದಿ ತೀವ್ರವಾಗಿ ಗಾಯಗೊಂಡರು. 1948ರಲ್ಲಿ ಅವಿಭಜಿತ ಕಮ್ಯುನಿಸ್ಟ್ ಪಕ್ಷದ ಎರಡನೇ ಮಹಾಧಿವೇಶನದ ನಂತರ ಕಮ್ಯುನಿಸ್ಟ್ ಪಕ್ಷದ ನಿಷೇಧ ಹೇರಲಾಯಿತು. ಸಾವಿರಾರು ಕಮ್ಯುನಿಸ್ಟರ ಬಂಧನ ನಡೆಯಿತು. ಈ ದಮನಚಕ್ರದಲ್ಲಿ 1982 ಗೋಲೀಬಾರುಗಳು ನಡೆದವು, 3284 ಮಂದಿ ಕೊಲ್ಲಲ್ಪಟ್ಟರು. 50,000 ಕ್ಕೂ ಹೆಚ್ಚು ಮಂದಿಯನ್ನು ಜೈಲಿಗಟ್ಟಲಾಯಿತು, ಕಸ್ಟಡಿಯಲ್ಲಿ ಪ್ರಮುಖ ಮುಖಂಡರಾದ ಮೊಯರಾತ್ ಶಂಕರನ್ ಸೇರಿದಂತೆ 82 ಕಮ್ಯುನಿಸ್ಟರನ್ನು ಸಾಯಿಸಲಾಯಿತು. ಬಹಳಷ್ಟು ಕಮ್ಯುನಿಸ್ಟರು ಭೂಗತರಾದರು.

ಜನಶಕ್ತಿ ವೆಬ್ ಸೈಟಿನಲ್ಲಿ ಏನಿದೆ?

janashakthi.co.in

1 ಫೆ.05 ರಂದು ಸಿಐಟಿಯು ನೇತೃತ್ವದಲ್ಲಿ ವಿವಿಧ ಜಿಲ್ಲೆಗಳಲ್ಲಿ ನಡೆದ ಪ್ರತಿಭಟನಾ ವರದಿಗಳು
2 ಅತಿಥಿ ಉಪನ್ಯಾಸಕರ ಹೋರಾಟದ ವರದಿಗಳು
3 ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯತಿ ಚುನಾವಣೆಯ ಜಿಲ್ಲಾ ವರದಿಗಳು.
4 ಶಿಕ್ಷಣ ತಜ್ಞ ಕೃಷ್ಣ ಶಾಸ್ತ್ರೀ ಬಾಳಿಲ ನಿಧನಕ್ಕೆ ಸಿಪಿಐ(ಎಂ) ಶೋಕ
5 ರೋಹಿತ್ ಆತ್ಮಹತ್ಯೆಗೆ ಕಾರಣರಾದವರನ್ನು ಬಂಧಿಸಬೇಕೆಂದು ನಡೆದ ಪ್ರತಿಭಟನೆಗಳು
6 ನಮಗೂ ಮತದಾನ ಮಾಡಲು ಅವಕಾಶ ಕೊಡಿ–ತುಮಕೂರು ಕಾರ್ಮಿಕರ ಮನವಿ

ನಾಳಿನ ಕಾರ್ಯಕ್ರಮಗಳು

ಫೆಬ್ರವರಿ 16 – ರೋಹಿತ್ ವೇಮುಲ ನ್ಯಾಯಕ್ಕಾಗಿ ರಾಜ್ಯ ವ್ಯಾಪಿ ವಿಶ್ವವಿದ್ಯಾಲಯಗಳ ಬಂದ್

ಫೆಬ್ರವರಿ 16 – ರಸ್ತೆ ಸಾರಿಗೆ ಕಾರ್ಮಿಕರ ರಾಜ್ಯ ಸಮಾವೇಶ, ಇಎಂಎಸ್ ಭವನ, ಬೆಂಗಳೂರು,

ಫೆಬ್ರವರಿ 17 – ಅತಿಥಿ ಉಪನ್ಯಾಸಕರ ಇತರ ಶೈಕ್ಷಣಿಕ ಬೇಡಿಕೆ ಈಡೇರಿಕೆಗಾಗಿ ಶಾಲಾ–ಕಾಲೇಜು, ವಿವಿಗಳ ಶೈಕ್ಷಣಿಕ ಬಂದ್

ಫೆಬ್ರವರಿ 19 – ಬಿಸಿಯೂಟ ನೌಕರರ ವಿಧಾನಸೌಧ ಚಲೋ


ಮಾರ್ಚ್ 01 – ಪಂಚಾಯತಿ ನೌಕರರ ಅನಿರ್ಧಿಷ್ಟಾವಧಿ ಧರಣಿ, ರಾಜ್ಯದ ವಿವಿಧ ಜಿಲ್ಲಾ ಪಂಚಾಯತಿ ಕಛೇರಿ ಬಳಿ

ಮಾರ್ಚ್ 01 –ರಸ್ತೆ ಸಾರಿಗೆ ಕಾರ್ಮಿಕರ ದೆಹಲಿ ಚಲೋ

ಮಾರ್ಚ್ 11 –ಕಾರ್ಮಿಕರ ವಿಧಾನಸೌಧ ಚಲೋ, ಸಿಐಟಿಯು

aAiÀvEAzÀgÉ EzÀÄ

ಅತಿ ಕೆಟ್ಟ ನಿರಕ್ಷರಸ್ಥ ಎಂದರೆ ರಾಜಕೀಯ ನಿರಕ್ಷರಸ್ಥ, ಆತನಿಗೆ ಕೇಳಿಸುವುದಿಲ್ಲ, ಆತ ಮಾತಾಡುವುದಿಲ್ಲ, ರಾಜಕೀಯ ಘಟನೆಗಳಲ್ಲಿ ಭಾಗವಹಿಸುವುದೇ ಇಲ್ಲ. ಬದುಕಿನ ಬೆಲೆ, ತರಕಾರಿಯ, ಮೀನಿನ, ಹಿಟ್ಟಿನ, ಬಾಡಿಗೆಯ, ಚಪ್ಪಲಿಯ, ಔಷಧಿಯ ಬೆಲೆ ಎಲ್ಲವೂ ರಾಜಕೀಯ ನಿರ್ಧಾರಗಳ ಮೇಲೆ ಅವಲಂಬಿಸಿವೆ ಎಂಬುದು ಆತನಿಗೆ ತಿಳಿದಿಲ್ಲ. ಈ ರಾಜಕೀಯ ನಿರಕ್ಷರಸ್ಥ ಎಷ್ಟೊಂದು ಮೂರ್ಖ ಎಂದರೆ ತಾನು ರಾಜಕೀಯವನ್ನು ದ್ವೇಷಿಸುತ್ತೇನೆ ಎಂದು ಹೆಮ್ಮೆಯಿಂದ ಎದೆಯುಬ್ಬಿಸಿ ಹೇಳುತ್ತಾನೆ. ತನ್ನ ರಾಜಕೀಯ ಅಜ್ಞಾನದಿಂದಲೇ ಸೂಳೆ, ನಿರ್ಗತಿಕ ಮಗು, ಮತ್ತು ಎಲ್ಲರಿಗಿಂತ ಕೆಟ್ಟ ಕಳ್ಳ, ಕೆಟ್ಟ ರಾಜಕಾರಣಿ, ರಾಷ್ಟ್ರೀಯ ಮತ್ತು ಬಹುರಾಷ್ಟ್ರೀಯ ಕಂಪನಿಗಳ ಭ್ರಷ್ಟ ಮತ್ತು ಭಟ್ಟಂಗಿ ಹುಟ್ಟುತ್ತಾರೆ ಎಂದು ಈ ದಡ್ಡನಿಗೆ ತಿಳಿದಿಲ್ಲ.



–ಬರ್ಟೋಲ್ಟ್ ಬ್ರೆಕ್ಟ್
ಜರ್ಮನ್ ಕವಿ, ನಾಟಕಕಾರ

ವಿದ್ಯಾರ್ಥಿ ರೋಹಿತ್ ವೇಮುಲ ಹತ್ಯೆ ಖಂಡಿಸಿ ಫೆ.16 ರಂದು ರಾಜ್ಯದ 'ವಿಶ್ವವಿದ್ಯಾಲಯಗಳ ಬಂದ್' ಗೆ ಕರೆ

ರೋಹಿತ್ ವೇಮುಲನ ಸಾವು ಒಂದು ದುಷ್ಟ, ಜಾತಿ ದುರಭಿಮಾನಿ ವ್ಯವಸ್ಥೆ ಮಾಡಿರುವ ಕೊಲೆ ಎಂಬುದು ಎಂಥವರಿಗೂ ತಿಳಿಯುತ್ತದೆ. ಈ ಕಾರಣದಿಂದಲೇ ರೋಹಿತ್ ವೇಮುಲನ ಕೊಲೆಗೆ ನ್ಯಾಯ ಸಿಗುವವರೆಗೂ ಹೋರಾಟ ಭುಗಿಲೆದ್ದಿದೆ. ದೇಶದ ಹಲಾವರು ಕಡೆ, ಮಾತ್ರವಲ್ಲ ವಿದೇಶಗಳಲ್ಲಿಯೂ ಈ ಕೊಲೆಯನ್ನು ಖಂಡಿಸಿ ಹೋರಾಟಗಳು ಪ್ರತಿದಿನ ನಡೆಯುತ್ತಿವೆ. ರಾಜ್ಯದಲ್ಲಿ ಈಗಾಗಲೆ ಹಲವಾರು ಕಡೆ ಹೋರಾಟಗಳು ನಡೆದಿದ್ದು ಮುಂದುವರೆದ ಭಾಗವಾಗಿ, ವಿದ್ಯಾರ್ಥಿ, ಯುವಜನ, ಅಧ್ಯಾಪಕ ಮತ್ತು ಪ್ರಗತಿಪರ ಸಂಘಟನೆಗಳು ರಚಿಸಿಕೊಂಡ

"ರೋಹಿತ್ ವೇಮುಲ ಪರ ನ್ಯಾಯಕ್ಕಾಗಿ ಜಂಟಿ ಹೋರಾಟ ಸಮಿತಿ" ಫೆಬ್ರವರಿ 16 ರಂದು ರಾಜ್ಯಾದ್ಯಂತ 'ವಿಶ್ವವಿದ್ಯಾಲಯ ಬಂದ್'ಗೆ ಕರೆ ನೀಡಲಾಗಿದೆ. ಪತ್ರಿಕಾಗೋಷ್ಠಿಯಲ್ಲಿ ಡಾ.ಟಿ ಕುಮಾರಸ್ವಾಮಿ (ಕೆ.ಎಸ್.ಎಸ್.) ಅಂಬರೀಷ್ ವಿ.(ಎಸ್.ಎಫ್.ಐ.) ರಾಜಗೋಪಾಲ (ಡಿ.ಎಸ್.ಎಫ್.) ಮನನ್(ಎನ್.ಎಸ್.ಯು.ಐ.) ಪ್ರವೀಣ್(ಎ.ಎಸ್.ಎ.) ರವರು. ಭಾಗವಹಿಸಿದ್ದರು

'ವಿಶ್ವವಿದ್ಯಾಲಯ ಬಂದ್'ನ ಹಕ್ಕೊತ್ತಾಯಗಳು ಈ ರೀತಿ ಇವೆ:

1. ಹೈದರಾಬಾದ್ ವಿ.ವಿ ಸಂಶೋಧನಾ ದಲಿತ ವಿದ್ಯಾರ್ಥಿ ರೋಹಿತ್ ವೇಮುಲ ಸಾವಿಗೆ ಕಾರಣರಾಗಿರುವ ಕೇಂದ್ರಮಂತ್ರಿ ಬಂಡಾರು ದತ್ತಾತ್ರೇಯ, ವಿವಿ ಕುಲಪತಿ ಅಪ್ಪಾರಾವ್ ಪೊಡಿಲೆ, ಪ್ರೊ. ವಿಪಿನ್ ಶ್ರೀವಾತ್ಸವ, ಬಿಜೆಪಿ ಎಂ.ಎಲ್.ಸಿ. ರಾಮಚಂದ್ರಾರಾವ್, ಎಬಿವಿಪಿ ಮುಖಂಡ ಸುಶೀಲ್ ಕುಮಾರ್ ಇವರನ್ನು ಕೂಡಲೇ ಬಂಧಿಸಬೇಕು.
2. ರೋಹಿತ್ ಮೇಲೆ ಅನಗತ್ಯವಾಗಿ ಕ್ರಮ ಕೈಗೊಳ್ಳುವಂತೆ ಪತ್ರ ವ್ಯವಹಾರ, ಒತ್ತಡ ಹೇರಿರುವ ಕೇಂದ್ರ ಸಚಿವೆ ಸ್ಮೃತಿ ಇರಾನಿ, ಬಂಡಾರು ದತ್ತಾತ್ರೇಯ ತಮ್ಮ ಸ್ಥಾನಕ್ಕೆ ಕೂಡಲೇ ರಾಜೀನಾಮೆ ಕೊಡಬೇಕು. ವಿವಿ ಉಪಕುಲಪತಿ ಮತ್ತಿತರನ್ನು ಸೇವೆಯಿಂದ ವಜಾಗೊಳಿಸಬೇಕು.
3. ರೋಹಿತ್ ವೇಮುಲನ ಮೇಲೆ ಅವಲಂಬಿತವಾಗಿದ್ದ ಕುಟುಂಬಕ್ಕೆ ರೂ.50 ಲಕ್ಷ ಸೂಕ್ತ ಪರಿಹಾರ ಮತ್ತು ಅವರ ಮನೆಯವರೊಬ್ಬರಿಗೆ ಸರಕಾರಿ ಉದ್ಯೋಗ ನೀಡಬೇಕು. ಬಾಕಿಯಿದ್ದ ರೋಹಿತ್‌ನ ಫೆಲೋಶಿಪ್ ಹಣವನ್ನು ತಕ್ಷಣ ಬಿಡುಗಡೆ ಮಾಡಿ, ಅವನ ಕುಟುಂಬಕ್ಕೆ ನೀಡಬೇಕು.
4. ರೋಹಿತ್ ವೇಮುಲ ಪರ ದೇಶಾದ್ಯಂತ ಹೋರಾಟಕ್ಕಿಳಿದಿರುವ ವಿದ್ಯಾರ್ಥಿಗಳ ಮೇಲೆ ಹೂಡಿರುವ ಎಲ್ಲಾ ಮೊಕದ್ದಮೆಗಳನ್ನು ಕೈಬಿಡಬೇಕು. ದೆಹಲಿಯಲ್ಲಿ ವಿದ್ಯಾರ್ಥಿನಿಯರ ಮೇಲೆ ಅಮಾನುಷವಾಗಿ ಹಲ್ಲೆ ನಡೆಸಿರುವ ಪೊಲೀಸರ ಮೇಲೆ ಕ್ರಮ ಜರುಗಿಸಬೇಕು. ಹೈದರಾಬಾದ್ ವಿಶ್ವವಿದ್ಯಾಲಯದ 50 ವಿದ್ಯಾರ್ಥಿ, ಅಧ್ಯಾಪಕರ ಮೇಲೆ ಕೇಂದ್ರ ಸರ್ಕಾರ ಕಣ್ಗಾವಲು ನಡೆಸುತ್ತಿರುವುದನ್ನು ಕೈಬಿಡಬೇಕು.
5. ವಿವಿ ವಿದ್ಯಾರ್ಥಿಗಳಿಗೆ ಶೈಕ್ಷಣಿಕ–ಸಾಮಾಜಿಕ ತಾರತಮ್ಯಗಳ ಮೇಲೆ ಬೆಳಕು ಚಲ್ಲಿರುವ ಪ್ರೊ. ಸುಖದೇವ ಥೋರಟ್ ರವರ ಸಮಿತಿಯ ವರದಿಯ ಶಿಫಾರಸ್ಸುಗಳನ್ನು ಜಾರಿಗೊಳಿಸಬೇಕು. ವಿವಿಗಳಲ್ಲಿ ತಳಸಮುದಾಯದ ವಿದ್ಯಾರ್ಥಿಗಳ ಮೇಲೆ ನಡೆಯುವ ಶೋಷಣೆಯನ್ನು ತಪ್ಪಿಸಲು "ರೋಹಿತ್ ಕಾಯ್ದೆ" ರಚಿಸಿ ಜಾರಿಗೊಳಿಸಬೇಕು.
6. ದೇಶವ್ಯಾಪಿ ವಿವಿ ವಿದ್ಯಾರ್ಥಿಗಳ ತಡೆ ಹಿಡಿದಿರುವ ಫೆಲೋಶಿಪ್, ವಿದ್ಯಾರ್ಥಿ ವೇತನ, ಕ್ಯಾಂಟೀನ್ ಭತ್ಯೆ ಇತ್ಯಾದಿ ಹಣವನ್ನು ತಕ್ಷಣ ಬಿಡುಗಡೆಗೊಳಿಸಬೇಕು. ಪ್ರತಿ ತಿಂಗಳು ವಿದ್ಯಾರ್ಥಿಗಳ ಖಾತೆಗೆ ಹಣ ಜಮಾ ಆಗುವಂತೆ ನೋಡಿಕೊಳ್ಳಬೇಕು.
7. ಉನ್ನತ ಶಿಕ್ಷಣದ ಬ್ರಾಹ್ಮಣೀಕರಣ ಪ್ರಕ್ರಿಯೆ ನಿಲ್ಲಿಸಿ, ಸಾಂವಿಧಾನಿಕ ಪ್ರಜಾತಾಂತ್ರಿಕ, ಬಹುಸಂಸ್ಕೃತಿಯ ಮೌಲ್ಯಗಳನ್ನು ಬಲಪಡಿಸಬೇಕು.

ರಾಜ್ಯ ಸರಕಾರಕ್ಕೆ ಒತ್ತಾಯಗಳು:

1. ರಾಜ್ಯದಲ್ಲಿ ಸಂಶೋಧನೆಯಲ್ಲಿ ತೊಡಗಿರುವ ಬಡ, ಹಿಂದುಳಿದ, ದಲಿತ ವಿದ್ಯಾರ್ಥಿಗಳಿಗೆ ಮಾಸಿಕ ಕನಿಷ್ಠ ರೂ. 5000 ಹಣವನ್ನು ಪ್ರೋತ್ಸಾಹಧನವನ್ನಾಗಿ ನೀಡುವುದು.
2. ರಾಜ್ಯದ ವಿ.ವಿಗಳಲ್ಲಿರುವ ಸಮಸ್ಯೆಗಳ ಅಧ್ಯಯನಕ್ಕಾಗಿ ಒಂದು ತಜ್ಞರ ಸಮಿತಿಯನ್ನು ರಚಿಸುವುದು.
3. ರಾಜ್ಯದ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಉನ್ನತಶಿಕ್ಷಣ ಸಚಿವರು, ಎಲ್ಲಾ ವಿ.ವಿಗಳ ಉಪಕುಲಪತಿಗಳು, ಉನ್ನತ ಅಧಿಕಾರಿಗಳು ಮತ್ತು ಈ ವೇದಿಕೆಯ ಪ್ರಮುಖರನ್ನೊಳಗೊಂಡ ಜಂಟಿ ಸಭೆಯನ್ನು ಕರೆಯಬೇಕು.
4. ರಾಜ್ಯದ ವಿ.ವಿಗಳಿಗೆ ಅಗತ್ಯ ಹಣಕಾಸು, ಬೋಧಕ–ಬೋಧಕೇತರ ಸಿಬ್ಬಂದಿಗಳ ಖಾಯಂ ನೇಮಕ, ಆಡಳಿತಾತ್ಮಕ ಅಂಶಗಳ ಕುರಿತು ತುರ್ತು ಕ್ರಮ ಕೈಗೊಳ್ಳುವುದು.

ಪಂಚಾಯತಿ ನೌಕರರ ಅನಿರ್ಧಿಷ್ಟಾವಧಿ ಧರಣಿ – ಮಾರ್ಚ್ 1ರಿಂದ

ಸರ್ಕಾರ ನಿಗದಿ ಪಡಿಸಿದ ಕನಿಷ್ಟ ವೇತನ ಜಾರಿಗಾಗಿ, ಪ್ರತಿ ತಿಂಗಳು ಸಂಬಳಕ್ಕಾಗಿ, ಭವಿಷ್ಯವರ್ತಿ ಅನುಮೋದನೆ ಬದಲಾಗಿ ಸೇವೆಗೆ ಸೇರಿದ ದಿನಾಂಕದಿಂದ ಅನುಮೋದನೆಗಾಗಿ ಹೆಚ್ಚುವರಿ ಕರ ವಸೂಲಿಗಾರರ, ನೀರಗಂಟಿ, ಸ್ವೀಪರ್‌ಗಳ ಅನುಮೋದನೆಗಾಗಿ ಒತ್ತಾಯಿಸಿ ಕರ್ನಾಟಕ ರಾಜ್ಯ ಗ್ರಾಮ ಪಂಚಾಯತಿ ನೌಕರರ ಸಂಘಟನೆ ವತಿಯಿಂದ ಮಾರ್ಚ್ 01ರಿಂದ ಅನಿರ್ಧಿಷ್ಟಾವಧಿ ಧರಣಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

2015 ಮಾರ್ಚ್ 24 ರಂದು ಬೆಂಗಳೂರಿನಲ್ಲಿ ವಿಧಾನಸೌಧ ಚಲೋ ಮಾಡಿ ಪ್ರತಿಭಟನೆ ನಡೆಸಿದಾಗ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಭವಿಷ್ಯವರ್ತಿ ಅನುಮೋದನೆ ತೆಗೆದು ಸೇವೆಗೆ ಸೇರಿದ ದಿನಾಂಕ ಪರಿಗಣಿಸುವುದಾಗಿ, ಎಲ್ಲಾ ಸಿಬ್ಬಂದಿಗಳ ಅನುಮೋದನೆ ಮಾಡುವುದಾಗಿ ಅಪರ ಕಾರ್ಯದರ್ಶಿ ಎಂ.ಎಸ್.ಸ್ವಾಮಿ ವರದಿ ಜಾರಿಯ ಭರವಸೆ ನೀಡಿದ್ದರು. ಒಂದು ವರ್ಷ ಕಳೆದರೂ ಕೂಡಾ ಮಂತ್ರಿಗಳು ಭರವಸೆಗಳನ್ನು ಜಾರಿ ಮಾಡಿಲ್ಲ. ಗ್ರಾಮ ಪಂಚಾಯತ್ ನೌಕರರು, ಮಾಸಿಕ ವೇತನದ ನೌಕರರು 1994 ರಲ್ಲಿ ಮಂಜೂರಾದ ಐದು ಹುದ್ದೆಗಳಿಗೆ ಅನುಮೋದನೆ ನೀಡಿರುವುದು ಸ್ವಾಗತಾರ್ಹ. ಹೊಸ ಹುದ್ದೆಗಳ ಸೃಷ್ಟಿ, ಉಳಿದ ಸಿಬ್ಬಂದಿಗಳಾದ ಕರ ವಸೂಲಿಗಾರ, ಗಣಕಯಂತ್ರ ಸಹಾಯಕರು, ನೀರಗಂಟಿ, ಸಿಪಾಯಿ, ಸ್ವಚ್ಛತಾಗಾರರಿಗೆ ಅನುಮೋದನೆ ಹಾಗೆ ಉಳಿದಿದೆ. ಗ್ರಾಮೀಣ ಅಭಿವೃದ್ಧಿ ಪಂಚಾಯತ್ ರಾಜ್ ಯಂತ್ರ ವಿಶೇಷವಾಗಿ ನಿರ್ದೇಶನಾಲಯ ನೌಕರರ ಹಿತಾಸಕ್ತಿಗೆ ವಿರುದ್ಧವಾಗಿ ನಡೆದುಕೊಂಡಿರುವುದು ಎದ್ದು ಕಾಣುತ್ತಿದೆ. ಪಂಚಾಯತ್ ರಾಜ್ ನಿರ್ದೇಶನಾಲಯವು ಸರ್ಕಾರಿ ಕಛೇರಿಯಾಗಿ ಕೆಲಸ ಮಾಡದೇ ಪಟ್ಟಭದ್ರ ಹಿತಾಸಕ್ತಿಗಳ ಗೂಡಾಗಿದೆ ಎಂದು ಪಂಚಾಯತಿ ನೌಕರರ ಸಂಘಟನೆಯ ರಾಜ್ಯ ಅಧ್ಯಕ್ಷರಾದ ಮಾರುತಿ ಮಾನ್ಪಡೆ, ಪ್ರಧಾನ ಕಾರ್ಯದರ್ಶಿ ಎಂ.ಬಿ.ನಾಡಗೌಡ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಸರ್ಕಾರ ನಿಗದಿಪಡಿಸಿದ ಕನಿಷ್ಟ ವೇತನ ಹಾಗೂ ತುಟ್ಟಿಭತ್ಯೆ ಗ್ರಾಮ ಪಂಚಾಯತ್‌ಗಳಲ್ಲಿ ಕೊಡದೇ ಸತಾಯಿಸುತ್ತಿದ್ದಾರೆ. ವೇತನ ಕೊಡದೇ ದುಡಿಸಿಕೊಳ್ಳುವ ಅನಾಗರಿಕ ಪದ್ಧತಿ ಗ್ರಾಮ ಪಂಚಾಯತ್‌ಗಳಲ್ಲಿದೆ. ಸರ್ಕಾರದ ಕಾನೂನನ್ನು ಮನ್ನಿಸದೇ ಸಂಬಳ ನೀಡದೇ ಸತಾಯಿಸುವ ಗ್ರಾಮ ಪಂಚಾಯತ್‌ಗಳ ಆಡಳಿತವನ್ನು ಸರಿ ದಾರಿಗೆ ತರಬೇಕಾಗಿದೆ. ಸ್ವಜನ ಪಕ್ಷಪಾತ ನೌಕರರ ವಿರೋಧಿ ಧೋರಣೆ ಕಸ ಗುಡಿಸುವವರನ್ನು ಅನಾಗರಿಕರಂತೆ ದುಡಿಸಿಕೊಳ್ಳುವುದು ಪ್ರತಿಭಟನೆಗೆ ಕಾರಣವಾಗಿದೆ. 10.09.2014ರ ಆದೇಶ ಕಂಟಕಪ್ರಾಯವಾಗಿದ್ದು, ಬಡ್ತಿ, ಗ್ರಾಚ್ಯುಟಿ ನಿಂತು ಹೋಗಿದೆ. ನಿವೃತ್ತಿ ವೇತನ ಕೊಡುವ ಆದೇಶ ಮಾಡಿ 18 ತಿಂಗಳು ಕಳೆದರೂ ಜಾರಿ ಆಗಲಿಲ್ಲ. ಹೊಸ ಹುದ್ದೆಗಳ ಸೃಷ್ಟಿ ನಿಂತು ಹೋಗಿದೆ. ಅರ್ಹತೆ ಇರುವ ನೀರಗಂಟಿಗಳಿಗೆ ಕರವಸೂಲಿಗಾರ ಹುದ್ದೆಗಳಿಗೆ ಬಡ್ತಿ ರಾಜ್ಯದಲ್ಲಿ ಎಲ್ಲೂ ಆಗುತ್ತಿಲ್ಲ. ಈ ಎಲ್ಲಾ ಕಾರಣಗಳಿಂದ 2016 ಮಾರ್ಚ್ 01ರಿಂದ ಹೋರಾಟ ಅನಿವಾರ್ಯವಾಗಿದ್ದು ಗ್ರಾಮ ಪಂಚಾಯತ್ ನೌಕರರು ಎಲ್ಲರೂ ಒಟ್ಟಾಗಿ ಜಿಲ್ಲಾ ಪಂಚಾಯತ್ ವಿರುದ್ಧ ಹೋರಾಟದಲ್ಲಿ ಭಾಗವಹಿಸಲಿದ್ದಾರೆ ಎಂದೂ ಹೇಳಿಕೆ ತಿಳಿಸಿದೆ

ಈ ಕೆಳಗಿನ ಹಕ್ಕೊತ್ತಾಯಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿ ಮಾರ್ಚ್ 01ರಂದು ನಡೆಯುವ ಹೋರಾಟದಲ್ಲಿ ಗ್ರಾಮ ಪಂಚಾಯತಿ ನೌಕರರು ಭಾಗವಹಿಸಬೇಕೆಂದು ರಾಜ್ಯ ಅದ–ಕ್ಷರಾದ ಮಾರುತಿ ಮಾನ್ಪಡೆ, ಪ್ರಧಾನ ಕಾರ್ಯದರ್ಶಿ ಎಂ.ಬಿ.ನಾಡಗೌಡ ಕರೆ ಕೊಟ್ಟಿದ್ದಾರೆ.

1. ಸರ್ಕಾರ (ಕಾರ್ಮಿಕ ಇಲಾಖೆ) ನಿಗದಿ ಪಡಿಸಿದ ವೇತನ ಹಾಗೂ ತುಟ್ಟಿಭತ್ಯೆಯನ್ನು ಪ್ರತಿ ತಿಂಗಳು ಪ್ರತಿಯೊಬ್ಬ ಸಿಬ್ಬಂದಿಗೂ ಕೊಡುವಂತಾಗಬೇಕು.
2. 10.9.2014 ರ ಸರ್ಕಾರದ ಆದೇಶಕ್ಕೆ ಸೂಕ್ತ ತಿದ್ದುಪಡಿ ತಂದು ಸೇವೆಗೆ ಸೇರಿದ ದಿನಾಂಕದಿಂದ ಅನುಮೋದನೆ ಪರಿಗಣಿಸಬೇಕು. ಈಗಾಗಲೇ ನೇಮಕಗೊಂಡ ಹೆಚ್ಚುವರಿ ಕರ ವಸೂಲಿಗಾರ, ಗುಮಾಸ್ತ, ಕಿರು ನೀರು ಸರಬರಾಜು ನೀರಗಂಟಿಗಳಿಗೆ ಅನುಮೋದನೆ ನೀಡಬೇಕು.
3. 10.9.2014 ರ ಆದೇಶದಂತೆ ನಿವೃತ್ತಿ ವೇತನ ಹಾಗೂ ಗ್ರಾಚ್ಯುಟಿಗಾಗಿ ಒಂದು ಟ್ರಸ್ಟ್ ರಚನೆ ಮಾಡಿ ನೌಕರರಿಗೆ ಸೌಲಭ್ಯ ಸಿಗುವಂತಾಗಬೇಕು.
4. ಎಂ.ಎಸ್.ಸ್ವಾಮಿ ಹಾಗೂ ಐ.ಪಿ.ಡಿ. ಸಾಲಪ್ಪ ವರದಿ ಶಿಫಾರಸ್ಸಿನಂತೆ ಕಸ ಗುಡಿಸುವವರ ಹುದ್ದೆಗಳನ್ನು ಸೃಷ್ಟಿಸಿ ಈಗಿರುವ ಎಲ್ಲಾ ಸಿಬ್ಬಂದಿಗೆ ಅನುಮೋದನೆ ನೀಡಬೇಕು. ಈ ವರದಿ ಆಧರಿಸಿ ಹೆಚ್ಚುವರಿ ಕರ ವಸೂಲಿಗಾರರ ನೇಮಕಕ್ಕೆ ಅವಕಾಶ ನೀಡಬೇಕು.
5. ಜಿಲ್ಲೆಯಲ್ಲಿ ಬಾಕಿ ಉಳಿದಿರುವ ಎಲ್ಲಾ ನೌಕರರಿಗೆ ಅನುಮೋದನೆ ನೀಡಬೇಕು.
6. ಗ್ರೇಡ್ ಕಾರ್ಯದರ್ಶಿ–2 ಹುದ್ದೆಗೆ ಶೇ. 100 ರಷ್ಟು, 3500 ಲೆಕ್ಕ ಸಹಾಯಕ ಹುದ್ದೆಗಳಿಗೆ ಮಂಜೂರಾತಿ ನೀಡಿ ಕರವಸೂಲಿಗಾರರಿಗೆ ಶೇ. 50 ರಷ್ಟು ಬಡ್ತಿಗೆ ಅವಕಾಶ ನೀಡಬೇಕು.

'ವಿಶೇಷ ನಿಯಮಾವಳಿ' ರೂಪಿಸಲು ಅತಿಥಿ ಉಪನ್ಯಾಸಕರಿಂದ
ಫೆ.17ರಂದು ಶಾಲಾ–ಕಾಲೇಜು, ವಿ.ವಿ.ಗಳ ಶೈಕ್ಷಣಿಕ ಬಂದ್

ಅತಿಥಿ ಉಪನ್ಯಾಸಕರ ಸೇವಾ ಭದ್ರತೆಗಾಗಿ "ವಿಶೇಷ ನಿಯಮಾವಳಿ" ರೂಪಿಸಬೇಕೆಂದು ಜನವರಿ–12, 2016ರಿಂದ ರಾಜ್ಯಾದ್ಯಂತ 411 ಸರ್ಕಾರಿ ಪದವಿ ಕಾಲೇಜುಗಳಲ್ಲಿ 14,531 ಅತಿಥಿ ಉಪನ್ಯಾಸಕರು ತರಗತಿ ಬಹಿಷ್ಕಾರ ಮತ್ತು ವಿವಿಧ ರೀತಿಯಲ್ಲಿ ಪ್ರತಿಭಟನೆ–ಹೋರಾಟಗಳಲ್ಲಿ ನಿರತರಾಗಿದ್ದಾರೆ.

ಅತ್ಯಂತ ಗಂಭೀರವಾದ ಸಮಸ್ಯೆಗಳನ್ನು ಎದುರಿಸುತ್ತಿರುವ ಅತಿಥಿ ಉಪನ್ಯಾಸಕರ ಬೇಡಿಕೆಗಳ ಬಗ್ಗೆಯಾಗಲೀ ಅಥವಾ 5 ಲಕ್ಷಕ್ಕಿಂತ ಹೆಚ್ಚಿರುವ ಪದವಿ ವಿದ್ಯಾರ್ಥಿಗಳ ತರಗತಿಗಳು ನಡೆಯದಿರುವ ಬಗ್ಗೆಯಾಗಲೀ ರಾಜ್ಯ ಸರ್ಕಾರ ಕಿಂಚಿತ್ತು ಸ್ಪಂದಿಸುತ್ತಿಲ್ಲ.

ರಾಜ್ಯದ ಕಾಂಗ್ರೆಸ್ ಸರ್ಕಾರ ಕಳೆದ ಮೂರು ವರ್ಷಗಳಿಂದಲೂ ಅತಿಥಿ ಉಪನ್ಯಾಸಕರ ಸಮಸ್ಯೆಗಳ ಕುರಿತು ಗಮನಹರಿಸದೆ ಇರುವುದನ್ನು ಖಂಡಿಸಿ ಹೋರಾಟದಲ್ಲಿರುವ ಅತಿಥಿ ಉಪನ್ಯಾಸಕರು ಮತ್ತು ಎಲ್ಲಾ ವಿದ್ಯಾರ್ಥಿ, ಯುವಜನ ಸಂಘಟನೆಗಳು, ಕನ್ನಡ ಪರ ಸಂಘಟನೆಗಳು, ದಲಿತ ಸಂಘಟನೆಗಳು, ರೈತ–ಕಾರ್ಮಿಕ ಸಂಘಟನೆಗಳು ಹಾಗೂ ಸಾಹಿತಿಗಳು ಸೇರಿದಂತೆ ನಾಡಿನ ಜನತೆಯ ಬೆಂಬಲದೊಂದಿಗೆ ರಾಜ್ಯಾದ್ಯಂತ ಶಾಲಾ–ಕಾಲೇಜು ಮತ್ತು ವಿಶ್ವವಿದ್ಯಾನಿಲಯಗಳ ಶೈಕ್ಷಣಿಕ ಬಂದ್‌ನ್ನು ಫೆಬ್ರವರಿ–17, 2016ರಂದು ನಡೆಸಲಾಗುತ್ತಿದೆ.

- ಅತಿಥಿ ಉಪನ್ಯಾಸಕರನ್ನು ಕಡೆಗಣಿಸಿರುವ, ಅತಾರ್ತಿಕ ಮತ್ತು ಅಮಾನವೀಯ ಸಿ.ಇ.ಟಿ. ನೇಮಕಾತಿಯನ್ನು ತಡೆಗಟ್ಟಬೇಕು.
- ಪದವಿ ಕಾಲೇಜುಗಳಲ್ಲಿನ 14,531 ಅತಿಥಿ ಉಪನ್ಯಾಸಕರನ್ನು ಖಾಯಂ ವಿಲೀನಗೊಳಿಸಬೇಕು.
- ಅತಿಥಿ ಉಪನ್ಯಾಸಕರ ವಿಲೀನ ಪ್ರಕ್ರಿಯೆ ಆಗುವವರೆಗೂ ಮಾಸಿಕ ವೇತನ ರೂ. 25,000 ನಿಗದಿಗೊಳಿಸಿ, ವರ್ಷದ 12 ತಿಂಗಳೂ ವೇತನ ನೀಡಬೇಕು.
- ಮಹಿಳಾ ಅತಿಥಿ ಉಪನ್ಯಾಸಕರಿಗೆ ಹೆರಿಗೆ ರಜೆ ಸಹಿತ ಮೂರು ತಿಂಗಳ ವೇತನ ನೀಡಬೇಕು.

ಮೇಲ್ಕಂಡ ಬೇಡಿಕೆಗಳ ಅತಿಥಿ ಉಪನ್ಯಾಸಕರ ಈಡೇರಿಕೆಗಾಗಿ ಹಾಗೂ ಕೆಳಕಂಡ ಶೈಕ್ಷಣಿಕ ಕ್ಷೇತ್ರದಲ್ಲಿನ ನಿರುದ್ಯೋಗ ಸಮಸ್ಯೆಗಳನ್ನೂ ಕೂಡ ಬಗೆಹರಿಸಬೇಕೆಂದು ಕರ್ನಾಟಕ ರಾಜ್ಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರ ಸಂಘ ಮತ್ತು ಭಾರತ ಪ್ರಜಾಸತಾತ್ಮಕ ಯುವಜನ ಫೆಡರೇಷನ್ (ಡಿ.ವೈ.ಎಫ್.ಐ) ಕರ್ನಾಟಕ ರಾಜ್ಯ ಸಮಿತಿ ಒತ್ತಾಯಿಸಿದೆ.

- 80000 ಖಾಲಿ ಇರುವ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿನ ಶಿಕ್ಷಕ ಹುದ್ದೆಗಳನ್ನು ಭರ್ತಿ ಮಾಡಿ
- 3800 ಖಾಲಿ ಇರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕ ಹುದ್ದೆಗಳನ್ನು ತುಂಬಿರಿ
- 7000 ಖಾಲಿ ಇರುವ ಸರ್ಕಾರಿ ಪದವಿ ಕಾಲೇಜುಗಳಲ್ಲಿರುವ ಸಹಾಯಕ ಪ್ರಾಧ್ಯಾಪಕ ಹುದ್ದೆಗಳನ್ನು ಭರ್ತಿ ಮಾಡಿ (ಎಲ್ಲಾ ಅತಿಥಿ ಉಪನ್ಯಾಸಕರನ್ನು ಆದ್ಯತೆಯ ಮೇಲೆ ಪರಿಗಣಿಸಿ)
- ರಾಜ್ಯ ಎಲ್ಲಾ ವಿಶ್ವ ವಿದ್ಯಾಲಯಗಳಲ್ಲಿ ಶೇ. 38 ಖಾಲಿ ಹುದ್ದೆಗಳನ್ನು ಭರ್ತಿ ಮಾಡಿ.
- ಶಾಲಾ–ಕಾಲೇಜು ಮತ್ತು ವಿ.ವಿ.ಗಳಲ್ಲಿನ ಬೋಧ–ಕೇತರ ಹುದ್ದೆಗಳನ್ನು ಭರ್ತಿ ಮಾಡಿ.
- 2.75 ಲಕ್ಷ ವಿವಿಧ ಸರ್ಕಾರಿ ಇಲಾಖೆಗಳಲ್ಲಿರುವ ಖಾಲಿ ಹುದ್ದೆಗಳನ್ನು ಭರ್ತಿ ಮಾಡಿ.
- 20000 ವಿವಿಧ ಸರ್ಕಾರಿ ಇಲಾಖೆಗಳಲ್ಲಿನ ಖಾಲಿ ಇರುವ ಅಧಿಕಾರಿ ಹುದ್ದೆಗಳನ್ನು ಕೂಡಲೇ ತುಂಬಿರಿ.
- ಸರ್ಕಾರಿ ಶಾಲಾ–ಕಾಲೇಜುಗಳು ಮತ್ತು ವಿ.ವಿ.ಗಳನ್ನು ಅಧುನಿಕರಿಸಬೇಕು.
- ರಾಜ್ಯ ಬಜೆಟ್‌ನಲ್ಲಿ ಶೇ.30, ಕೇಂದ್ರ ಬಜೆಟ್‌ನಲ್ಲಿ ಶೇ.10ರಷ್ಟು ಹಣವನ್ನು ಶಿಕ್ಷಣಕ್ಕೆ ಮೀಸಲಿಡಿ.
- ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ನಿಯಂತ್ರಿಸಲು "ಕೇಂದ್ರೀಯ ಶಾಸನ" ಜಾರಿಗೆ ತನ್ನಿ.
- ಖಾಸಗಿ ಶಾಲಾ–ಕಾಲೇಜುಗಳಲ್ಲಿನ ಬೋಧಕ ಮತ್ತು ಬೋಧಕೇತರರಿಗೆ ವೇತನ ಹೆಚ್ಚಿಸಿ
- ಎಲ್ಲಾ ಹಾಸ್ಟೆಲ್‌ಗಳನ್ನು ಆಧುನೀಕರಿಸಿ, ಊಟದ ಭತ್ಯೆ ಹೆಚ್ಚಿಸಿ.
- ಉಚ್ಚ ನ್ಯಾಯಾಲಯದ ನಿರ್ದೇಶನದಂತೆ 'ವಿದ್ಯಾರ್ಥಿ ಸಂಘಗಳ ಚುನಾವಣೆ'ಗಳನ್ನು ನಡೆಸಿ
- ವಿದ್ಯಾರ್ಥಿ–ಪೋಷಕರು, ಬೋಧಕ ಮತ್ತು ಬೋದ–ಕೇತರರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ರಕ್ಷಿಸಿ
- ಸರಕಾರದ ಎಲ್ಲಾ ಇಲಾಖೆಗಳಲ್ಲಿರುವ ತಾತ್ಕಾಲಿಕ, ಗುತ್ತಿಗೆ, ಹೊರಗುತ್ತಿಗೆ, ದಿನಗೂಲಿ, ಸಂಭಾವನೆ, ಅತಿಥಿ, ತರಬೇತಿ ಮುಂತಾದ ಹೆಸರುಗಳ ಅಭದ್ರತೆಯ ಉದ್ಯೋಗ ಪದ್ಧತಿ ನಿಲ್ಲಿಸಿ, ಎಲ್ಲಾರಿಗೂ ಉದ್ಯೋಗ ಭದ್ರತೆ ಒದಗಿಸಬೇಕೆಂದು ಈ ಶೈಕ್ಷಣಿಕ ಬಂದ್‌ನ ಮೂಲಕ ರಾಜ್ಯ ಸರ್ಕಾರದ ಮೂಲಕ ರಾಜ್ಯ ಸರ್ಕಾರವನ್ನು ಒತ್ತಾಯಿಸಲಾಗುತ್ತಿದೆ.

ಅತಿಥಿ ಉಪನ್ಯಾಸಕರ ಮತ್ತು ಶೈಕ್ಷಣಿಕ ಬೇಡಿಕೆಗಳ ಈಡೇರಿಕೆಗಾಗಿ ರಾಜ್ಯಾದ್ಯಂತ ಶಾಲಾ–ಕಾಲೇಜು, ವಿಶ್ವ ವಿದ್ಯಾಲಯಗಳ ಬಂದ್‌ನ್ನು ಯುವಜನ ಪರವಾದ ಹೋರಾಟವನ್ನು ನಾಡಿನ ವಿದ್ಯಾರ್ಥಿ–ಪೋಷಕರು ಬೆಂಬಲಿಸಿ ಯಶಸ್ವಿಗೊಳಿಸಬೇಕೆಂದು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಲಾಗಿದೆ. ಅತಿಥಿ ಉಪನ್ಯಾಸಕರ ಸಂಘದ ಗೌರವ ಅಧ್ಯಕ್ಷರು ಹಾಗೂ ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ಬಿ.ರಾಜಶೇಖರಮೂರ್ತಿ, ಬೆಂಗಳೂರು ನಗರ ಅಧ್ಯಕ್ಷರಾದ ಗುಡಿಬಂಡೆ ಗಣೇಶ್, ಬೆಂ.ಗ್ರಾ. ಅಧ್ಯಕ್ಷರಾದ ಆದಿನಾರಾಯಣಪ್ಪ, ನಗರ ಕಾರ್ಯದರ್ಶಿಗಳಾದ ಸುರೇಶ್, ಮೋಹನ್, ಬೆಂ.ಗ್ರಾ. ಮುಖಂಡರಾದ ಡಾ॥ನೇತ್ರಾವತಿ ಮತ್ತಿತ್ತರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಅನಿವಾರ್ಯವಾದ ಬೀಡಿ ಕಾರ್ಮಿಕರ ಹೋರಾಟ:



ತಂಬಾಕು ಸೇವನೆ ತಡೆಗಟ್ಟುವ ಉದ್ದೇಶದಿಂದ ಕೇಂದ್ರ ಸರಕಾರ ಕೋಟ್ಪಾ ಕಾಯಿದೆಯನ್ನು ಜಾರಿಗೆ ತಂದಿದೆ. ಹಂತಹಂತವಾಗಿ ಅದನ್ನು ಜಾರಿಗೊಳಿಸುವ ಕ್ರಮವಾಗಿ ರಾಜ್ಯ ಸರಕಾರಗಳು, ಪೋಲೀಸು ಇಲಾಖೆ, ಕಾರ್ಮಿಕ ಇಲಾಖೆ, ಆರೋಗ್ಯ ಇಲಾಖೆ ಹೀಗೆ ಹಲವು ಇಲಾಖೆಗಳನ್ನು ಕಾಯಿದೆಯ ಅನುಷ್ಠಾನಕ್ಕೆ ಜವಾಬ್ದಾರ ಮಾಡಿರುತ್ತವೆ. ಇದರ ಪರಿಣಾಮವಾಗಿ ತಂಬಾಕು ಉತ್ಪನ್ನಗಳ ಮಾರುವಿಕೆಯನ್ನು ಅದರಲ್ಲೂ ದೊಡ್ಡ ಪ್ರಮಾಣದಲ್ಲಿ ಉತ್ಪನ್ನವಾಗುವ ಬೀಡಿಯನ್ನು ನಿಲ್ಲಿಸಲು ಅಂಗಡಿಗಳ ಮೇಲೆ, ಬೀಡಿ ಗುತ್ತಿಗೆದಾರರ ವಿತರಣ ಸ್ಥಾನಗಳ ಮೇಲೆ ಬೀಡಿ ಉದ್ದಿಮೆ ಕಾರ್ಖಾನೆಗಳ ಮೇಲೆ ದಾಳಿ ಮಾಡಲು ಪ್ರಾರಂಭಿಸಿದೆ. ಇದರಿಂದಾಗಿ ಉದ್ಯಮಿಗಳು, ಗುತ್ತಿಗೆದಾರರು, ಅಂಗಡಿಯವರು ಬೀಡಿ ನಿರ್ಮಾಣ, ಸಂಗ್ರಹ ವಿತರಣೆಯನ್ನು ಒಂದೋ ನಿಲ್ಲಿಸಿದ್ದಾರೆ ಇಲ್ಲವೇ ಕಡಿಮೆಗೊಳಿಸಿದ್ದಾರೆ. ಇದರ ಪರಿಣಾಮಗಳು ಏನು ಎಂದು ಯಾರೂ ಯೋಚಿಸಿದಂತಿಲ್ಲ.

ದೇಶದ 1.3 ಕೋಟಿ ಜನತೆ ಬೀಡಿ ಉದ್ಯಮವನ್ನೇ ಹೊಂದಿಕೊಂಡು ಜೀವನ ಮಾಡುತ್ತಿದ್ದಾರೆ. ಬೀಡಿಗೆ ಕಚ್ಚಾವಸ್ತುವಾದ ತಂಬಾಕು ಕೃಷಿಯನ್ನು ದೇಶದ 30 ಲಕ್ಷಕ್ಕೂ ಮೀರಿದ ಜನ ಅವಲಂಬಿಸಿದ್ದಾರೆ. 20 ಲಕ್ಷ ಆದಿವಾಸಿಗಳು ತೆಂಡು ಎಲೆಗಳನ್ನು ಕಿತ್ತು ಸಂಗ್ರಹಿಸುವ ಉದ್ಯೋಗವನ್ನು ಅವಲಂಬಿಸಿದ್ದಾರೆ. 80 ಲಕ್ಷ ಕಾರ್ಮಿಕರು ಬೀಡಿ ಕಟ್ಟುವ ಮತ್ತಿತರ ಪೂರಕ ಕೆಲಸಗಳನ್ನು ಅವಲಂಬಿಸಿದ್ದಾರೆ. ಇದರಿಂದ ದೇಶದ ಬಹುದೊಡ್ಡ ಭಾಗದ ಜನತೆ ರೈತರು ಮತ್ತು ಕಾರ್ಮಿಕರು ಬೀಡಿ ಉದ್ದಿಮೆಯನ್ನು ತಮ್ಮ ಜೀವನಾಧಾರವಾಗಿ ಇಟ್ಟುಕೊಂಡಿದ್ದಾರೆ. ಸಂಘಟಿತ ಕಾರ್ಮಿಕರ ಒಂದು ವಿಭಾಗ ಮಾತ್ರ ಹೋರಾಟಗಳಲ್ಲಿ ಭಾಗವಹಿಸುವುದರಿಂದ ಜನಸಾಮಾನ್ಯರಿಗೆ ಈ ಉದ್ದಿಮೆಯ ಸ್ಥಗಿತತೆಯಿಂದ ಆಗಬಹುದಾದ ವಿಪತ್ತುಗಳು ಅರಿವಿಗೆ ಬಂದಂತಿಲ್ಲ. ಸರಕಾರದ ಆರೋಗ್ಯ ಸಂಬಂಧೀ ಪ್ರಚಾರಗಳಿಂದಲಾಗಿ ಬೀಡಿ ಉದ್ದಿಮೆ ನಿಲುಗಡೆಯಿಂದ ಜೀವನದ ದಾರಿಯನ್ನೇ ಕಳೆದುಕೊಳ್ಳುವ ಬಡವರ ಕಷ್ಟಗಳನ್ನು ಮರೆಮಾಚಲಾಗಿದೆ.

ಉದ್ಯೋಗವನ್ನೇ ಕಳೆದುಕೊಳ್ಳುವ 1–3ಕೋಟಿ ಜನತೆಗೆ ಸರಕಾರ ಏನು ಪರ್ಯಾಯ ವ್ಯವಸ್ಥೆ ಮಾಡಿದೆ? ಕೋಟ್ಪಾ ಕಾಯಿದೆ ಜಾರಿಯಾದಂದಿನಿಂದ ಬೀಡಿ ಕಾರ್ಮಿಕ ಸಂಘಟನೆಗಳು ಸರಕಾರಕ್ಕೆ ಈ ಪ್ರಶ್ನೆಯನ್ನು ಕೇಳುತ್ತಿದ್ದಾರೆ. ಅಲ್ಲಲ್ಲಿ ಈ ಕಾಯಿದೆಯ ವಿರುದ್ಧ ಹೋರಾಟಗಳು, ಪ್ರತಿಭಟನೆಗಳು ನಡೆದಿವೆ. ಸರಕಾರ ಪರ್ಯಾಯದ ಬಗ್ಗೆ ಮೂಕವಾಗಿದ್ದು, ಬಡವರ ಜೀವನಾಡಿಯಾದ ಬೀಡಿ ವಿತರಣಾ ವ್ಯವಸ್ಥೆಯ ಮೇಲೆ ನಿರ್ಭಿಡೆಯ ದಾಳಿ ಮುಂದುವರೆಸಿದೆ. ಪಾಶ್ಚಿಮಾತ್ಯ ಪ್ರಭಾವಕ್ಕೊಳಗಾಗಿರುವ ಸರಕಾರೇತರ ಸಂಸ್ಥೆಗಳು ಈ ನೆಲದ ಜನರ ಸಂಕಟಗಳನ್ನು ಅರ್ಥಮಾಡಿಕೊಳ್ಳದೆ ಸರಕಾರಕ್ಕೆ ನೀಡಿದ ಸಲಹೆಗಳನ್ನು ಸರಕಾರ ಅಂಗೀಕರಿಸಿ ಕಾಯಿದೆ ಮಾಡಿರುವುದರ ಹಿಂದೆ ವಿದೇಶೀ ಕಾರ್ಪರೇಟ್ ಉದ್ದಿಮೆ ಸಂಸ್ಥೆಗಳ ಹುನ್ನಾರಗಳಿವೆ. ಸಿಗರೇಟನ್ನು ಕಡಿಮೆ ಅಪಾಯಕಾರಿ ಎಂದು ಪ್ರತಿಬಿಂಬಿಸಿ ಸಿಗರೇಟ್ ಕಂಪೆನಿಗಳು ಏಕಸ್ವಾಮ್ಯ ಹೊಂದುವುದಕ್ಕಾಗಿ ಮಾಡಿದ ಸಂಚು ಈ ಕಾಯಿದೆಯ ಅನುಷ್ಠಾನದ ಹಿಂದಿದೆ. ಅಗ್ಗ ದರದ ಬೀಡಿಗಳು ನಿಂತೇ ಹೋದರೆ ದುಬಾರಿ ದರದ ಸಿಗರೇಟುಗಳನ್ನು ಮಾರುಕಟ್ಟೆಗಳಲ್ಲಿ ಚಲಾವಣೆಗೆ ತರುವ ಹುನ್ನಾರ ಇದರಲ್ಲಿ ಕಾಣುತ್ತಿದೆ.

ಅಲ್ಲದೆ ಮುಂದೆ ಬೀಡಿ ಪೊಟ್ಟಣದ ಮೇಲೆ ಮುದ್ರಿಸಿದ ಬರಹದಲ್ಲೂ ಜೀವಾಪಾಯ ಸೂಚಿಸುವ ತಲೆಬರಹದ ಚಿತ್ರ ಮುದ್ರಣದ 85% ದಪ್ಪಿರಬೇಕೆಂದು ಕಾಯ್ದೆ ಹೇಳುತ್ತದೆ. ಬಡವರು ಸೇದುವ ಬೀಡಿಯನ್ನು ರಾಕ್ಷಸನೆಂದು ಏಕಸ್ವಾಮ್ಯ ಉದ್ಯಮಗಳು ಮಾತ್ರ ಹೇಳಿಯಾರು. ಇಷ್ಟಕ್ಕೂ ಬೀಡಿ ಉತ್ಪಾದನೆ ಏಕಾಏಕಿ ನಿಲ್ಲಿಸಿಬಿಟ್ಟರೆ ಅದನ್ನು ನಂಬಿದ 1.3 ಕೋಟಿ ಜನರಿಗೆ ಪರ್ಯಾಯ ಜೀವನಾಧಾರ ಸರಕಾರ ಏನು ಮಾಡಿದೆ?

ಈ ಹಿನ್ನೆಲೆಯಲ್ಲಿ ಬೀಡಿ ಕೈಗಾರಿಕೆ ಕಾರ್ಮಿಕರೊಂದಿಗೆ ಬೀಡಿ ವಿತರಣೆಯ ಗುತ್ತಿಗೆದಾರರೂ ಅತಂತ್ರರಾಗಿದ್ದಾರೆ. ಬೀಡಿ ಉದ್ಯಮದ ಮಾಲಕರು ಉದ್ಯಮ ತೊರೆಯಬೇಕಾಗಬಹುದು. ಅವರಾದರೋ ತಮ್ಮ ಬಂಡವಾಳವನ್ನು ಬೇರೆ ಉದ್ಯಮಗಳಲ್ಲಿ ತೊಡಗಿಸಬಹುದು. ಆದರೆ ವಿತರಕರ,ಮಾರಾಟಗಾರರ, ಬೀಡಿ ಕಾರ್ಮಿಕರ ಪಾಡೇನು?

ಈ ಹಿನ್ನೆಲೆಯಲ್ಲಿ ಮಂಗಳೂರಿನಲ್ಲಿ ಫೆಬ್ರವರಿ 9 ರಂದು ಒಂದು ಬೃಹತ್ ಪ್ರತಿಭಟನೆ ನಡೆಯಿತು. ಸಿಐಟಿಯು, ಎಐಟಿಯುಸಿ, ಬಿಎಂಎಸ್, ಎಚ್‌ಎಂಎಸ್‌ಗಳಿಗೆ ಸೇರಿದ ದ.ಕ.ಮತ್ತು ಉಡುಪಿ ಜಿಲ್ಲೆಗಳ ಬೀಡಿ ಕಾರ್ಮಿಕರ ಜೊತೆ ತಾವೂ ಕೆಲಸ ಕಳಕೊಳ್ಳುತ್ತಿರುವ ಸಾವಿರಾರು ಬೀಡಿ ಕಂಟ್ರಾಕ್ಟುದಾರರು ಮಂಗಳೂರಿನ ಅಂಬೇಡ್ಕರ್ ಜ್ಯೋತಿ ವೃತ್ತದಿಂದ ನೆಹರೂ ಮೈದಾನಿನವರೆಗೂ ಕೋಟ್ಪಾ ಕಾಯಿದೆ ವಿರೋಧಿಸಿ ಹಾಗೂ ಬೀಡಿ ಕಾರ್ಮಿಕರ ಪರ್ಯಾಯ ಉದ್ಯೋಗವನ್ನು ಆಗ್ರಹಿಸಿ ಮೆರವಣಿಗೆ ನಡೆಸಿದರು. 10,000 ಕಾರ್ಮಿಕರಿದ್ದ ಜಾಥಾ ಇತ್ತೀಚಿಗಿನ ವರ್ಷದಲ್ಲಿ ಇದೇ ಮೊದಲಿನದಾಗಿದ್ದು, ಕೆಲಸ ಕಳೆದುಕೊಳ್ಳುವ ದಾರುಣತೆಯನ್ನು ಸಾರ್ವಜನಿಕರಿಗೆ ತಿಳಿಸುವಂತಿತ್ತು.

ಪ್ರತಿಭಟನೆಯನ್ನು ಉದ್ದೇಶಿಸಿ ಸಿಐಟಿಯು ಮುಖಂಡರಾದ ಜೆ.ಬಾಲಕೃಷ್ಣ ಶೆಟ್ಟಿ, ವಸಂತ ಆಚಾರಿ, ಎಐಟಿಯುಸಿ ಯ ಸೀತರಾಮ ಬೇರಿಂಜೆ, ಗುತ್ತಿಗೆದಾರರ ಸಂಘದ ಅಬ್ದುಲ್ ಖಾದರ್ ಮಾತನಾಡಿದರು. ಸಿಐಟಿಯು ಮುಖಂಡರಾದ ಯು.ಬಿ.ಲೋಕಯ್ಯ, ಬಿ.ಎಂ.ಭಟ್, ಪದ್ಮಾವತಿ ಶೆಟ್ಟಿ, ಜಯಂತಿ ಶೆಟ್ಟಿ, ಎಐಟಿಯುಸಿಯ ಎಚ್.ವಿ.ರಾವ್, ವಿ.ಕುಕ್ಯಾನ್, ಕೆ.ಎಂ.ಭಟ್, ಎಚ್‌ಎಂಎಸ್‌ನ ಮಹಮ್ಮದ್ ರಫಿ, ಗುತ್ತಿಗೆದಾರರ ಸಂಘದ ಪದಾಧಿಕಾರಿಗಳು ಪ್ರತಿಭಟನೆಯಲ್ಲಿ ಉಪಸ್ಥಿತರಿದ್ದರು.

ಬೀಡಿ ಉದ್ದಿಮೆ ಹಾಗೂ ಕಾರ್ಮಿಕರ ಸಂರಕ್ಷಣಾ ಸಮಿತಿ ನೇತೃತ್ವದಲ್ಲಿ ನಡೆದ ಈ ಸಭೆಯ ಬಳಿಕ ಕೇಂದ್ರ ಸರಕಾರಕ್ಕೆ ಬೇಡಿಕೆಗಳ ಪಟ್ಟಿಯನ್ನು ಜಿಲ್ಲಾಧಿಕಾರಿಗಳ ಮೂಲಕ ಸಲ್ಲಿಸಲಾಯಿತು. ಅಲ್ಲದೆ ಸರಕಾರ ಬೀಡಿ ಕಾರ್ಮಿಕರಿಗೆ ಪರ್ಯಾಯ ಉದ್ಯೋಗ ಕಲ್ಪಿಸದಿದ್ದರೆ ದೆಹಲಿ ಚಲೋ ಕಾರ್ಯಕ್ರಮ ಹಮ್ಮಿಕೊಂಡು ಸಂಸತ್ತಿನ ಮುಂದೆ ಪ್ರತಿಭಟನಾ ಪ್ರದರ್ಶನ ನಡೆಸಲಾಗುವುದು ಎಂಬುದಾಗಿ ಬಳಿಕ ನಡೆದ ಪತ್ರಿಕಾಗೋಷ್ಠಿಯಲ್ಲಿ ಮುಖಂಡರು ಘೋಷಿಸಿದರು.

ವೈಜ್ಞಾನಿಕವಾಗಿ ದೃಢಪಡದ ಕೆಲವು ವಿಷಯಗಳನ್ನು ಮುಂದಿಟ್ಟುಕೊಂಡು ಬೀಡಿ ಉದ್ಯಮವನ್ನು ನಾಶ ಮಾಡುವ ಸಂಚು ನಡೆದಿದೆ. ಅನಗತ್ಯವಾಗಿ ಬೀಡಿ ಉದ್ಯಮದ ಮೇಲೆ ಸವಾರಿ ಮಾಡುವ ಪ್ರಯತ್ನಗಳು ಆಗುತ್ತಿವೆ. ಇದರ ವಿರುದ್ಧ ಸಂಘಟಿತ ಹೋರಾಟ ರೂಪಿಸಲಾಗುವುದು ಎಂದು ಕಾರ್ಮಿಕರ ಮುಖಂಡರು ಘೋಷಿಸಿದ್ದಾರೆ.

ಉಡುಪಿಯಲ್ಲಿ ಜೆಸಿಟಿಯು ಪ್ರತಿಭಟನೆ:

ಕೇಂದ್ರ ಸರಕಾರದ ಕಾರ್ಮಿಕ ವಿರೋಧಿ ಧೋರಣೆಯನ್ನು ಖಂಡಿಸಿ ಹಾಗೂ ಎಲ್ಲಾ ವರ್ಗದ ಕಾರ್ಮಿಕರಿಗೆ ರೂ.18,000 ಕನಿಷ್ಠ ವೇತನ ನಿಗದಿ ಮಾಡಬೇಕು ಎಂದು ಸೇರಿದಂತೆ 12 ಪ್ರಮುಖ ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿಯ ನೇತೃತ್ವದಲ್ಲಿ ಉಡುಪಿಯ ಕ್ಲಾಕ್‌ಟವರ್ ಎದುರು ಫೆಬ್ರವರಿ 5 ರಂದು ಪ್ರತಿಭಟನೆ ನಡೆಸಲಾಯಿತು.

ಸರ್ಕಾರ ಆಹಾಧಾನ್ಯಗಳ ಮತ್ತು ಜೀವನಾವಶ್ಯಕ ವಸ್ತುಗಳ ಬೆಲೆಯನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳಬೇಕು. ಸರ್ಕಾರೀ ಇಲಾಖೆ ಮತ್ತು ಸಾರ್ವಜನಿಕ ಉದ್ದಿಮೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ನೇಮಕಾತಿಯ ಮೂಲಕ ಭರ್ತಿ ಮಾಡಬೇಕು. ಬಿಸಿಯೂಟ ನೌಕರರು, ಅತಿಥಿ ಉಪನ್ಯಾಸಕರು, ಅಂಗನವಾಡಿ ಮತ್ತು ಆಶಾ ನೌಕರರನ್ನು ಖಾಯಂ ಉದ್ಯೋಗಿಗಳಾಗಿ ಪರಿಗಣಿಸಿ, ಅವರಿಗೆ ಎಲ್ಲಾ ಸವಲತ್ತುಗಳನ್ನು ನೀಡಬೇಕು. ಹೊಸ ಪಿಂಚಣಿ ಯೋಜನೆಯನ್ನು ರದ್ದುಗೊಳಿಸಿ ಹಳೆಯ ಪಿಂಚಣಿ ಯೋಜನೆಯನ್ನು ಮುಂದುವರಿಸಬೇಕು. ಕಾರ್ಮಿಕ ಕಾಯ್ದೆಗಳ ತಿದ್ದುಪಡಿಯನ್ನು ಕೈಬಿಡಬೇಕು ಎಂದು ಆಗ್ರಹಿಸಿದರು.

ಕೇಂದ್ರ ಮತ್ತು ಕೆಲವು ರಾಜ್ಯ ಸರ್ಕಾರಗಳು ಕಾರ್ಮಿಕ ಕಾನೂನುಗಳಲ್ಲಿ ತರಬೇಕೆಂದಿರುವ ತಿದ್ದುಪಡಿಗಳನ್ನು ಕೈಬಿಡಬೇಕು, ಕೇಂದ್ರ ಸರಕಾರದ 7ನೇ ವೇತನ ಆಯೋಗ ನಿಗದಿಪಡಿಸಿರುವ ಕಾರ್ಮಿಕರ ಕನಿಷ್ಠ ವೇತನ ರೂ.18,000 ಅನುಷ್ಠಾನಗೊಳಿಸಬೇಕು. ಕಾರ್ಮಿಕ ಕನಿಷ್ಠ ಪಿಂಚಣಿಯನ್ನು 3000 ಕ್ಕೆ ಹೆಚ್ಚಿಸಬೇಕು ಎಂದು ಸಿಐಟಿಯು ಉಡುಪಿ ಜಿಲ್ಲಾ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ ಆಗ್ರಹಿಸಿದರು.

ಜೆಸಿಟಿಯು ಜಿಲ್ಲಾ ಸಂಚಾಲಕ ಅದಮಾರು ಶ್ರೀಪತಿ ಆಚಾರ್ಯ, ಸಿಐಟಿಯು ಜಿಲ್ಲಾಧ್ಯಕ್ಷ ಕೆ.ಶಂಕರ್, ಎಐಟಿಯುಸಿನ ಕೆ.ವಿ.ಭಟ್, ನೌಕರ ಹಾಗೂ ಕಾರ್ಮಿಕ ಮುಖಂಡರಾದ ಯು.ಗುರುದತ್, ಹೆರಾಲ್ಡ್ ಡಿಸೋಜ, ರವೀಂದ್ರ, ಶಶಿಧರ ಗೊಲ್ಲ, ಕವಿರಾಜ್ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಪ್ರಶ್ನೆ : ಸಲಿಂಗ ಕಾಮವನ್ನುಅಪರಾಧವೆಂದು ಪರಿಗಣಿಸುವ ಭಾರತೀಯದಂಡ ಸಂಹಿತೆ ಸೆಕ್ಷನ್377 ಬಗ್ಗೆ ಹಾಗೂ ಸುಪ್ರಿಂಕೋರ್ಟ್‌ನಲ್ಲಿ ಈ ಕಾನೂನನ್ನು ಪುನಃ ಪರಿಶೀಲನೆಗಾಗಿ ಸಲ್ಲಿಸಿರುವ ಅರ್ಜಿಯ ಬಗ್ಗೆ ಸಿಪಿಐ(ಎಂ) ಪಕ್ಷದ ನಿಲುವೇನು?

–ಎಸ್. ಮಾಧವ, ಮೈಸೂರು



ಸಿಪಿಐ(ಎಂ) ಪರಸ್ಪರ ಒಪ್ಪಿಗೆ ಇರುವ ವಯಸ್ಕರ ಸಲಿಂಗರತಿಯನ್ನು ಕಾನೂನು ಬಾಹಿರವೆಂದು ಪರಿಗಣಿಸಬಾರದೆಂಬ ಕರೆ ನೀಡಿದ ಮೊದಲ ರಾಷ್ಟ್ರೀಯ ರಾಜಕೀಯ ಪಕ್ಷವಾಗಿದೆ. 19 ನೇ ಶತಮಾನದ ವಸಾಹತುಶಾಹಿ ಸಂದರ್ಭದಲ್ಲಿ ರೂಪಿಸಿದ ಸೆಕ್ಷನ್377 ಐಪಿಸಿ ಹಳೆಯ ಕಾನೂನು. ಅದು ಸಲಿಂಗ ಸಂಬಂಧಗಳನ್ನು 'ಪ್ರಕೃತಿ–ವಿರೋಧಿ ಅಪರಾಧ'ವೆಂದು ಪರಿಗಣಿಸುತ್ತದೆ. ಹಲವಾರು ಜನರಿಗೆ ಬದಲಿ ಲಿಂಗ ಸಂಬಂಧಗಳ ಬಗ್ಗೆ ಒಲವಿರುತ್ತದೆ. ಅಂಥವರನ್ನು ಶಿಕ್ಷಿಸುವುದು ಅಥವಾ ಅವರ ವಿರುದ್ಧ ತಾರತಮ್ಯ ಮಾಡುವುದು ಕಂಡು ಬರುತ್ತದೆ. ಈಗ ಎಲ್ಲ ಕಡೆಗಳಲ್ಲಿ ಸಲಿಂಗ ಕಾಮಿಗಳ, ಸಲಿಂಗ ಸ್ತ್ರೀಕಾಮಿಗಳ ಮತ್ತು ಲಿಂಗಾತೀತರ ಹಕ್ಕನ್ನು ಮಾನ್ಯಗೊಳಿಸಲು ಕೂಗೆದ್ದಿದೆ.

2009ರಲ್ಲಿ ದೆಹಲಿ ಹೈಕೋರ್ಟ್ ತನ್ನ ತೀರ್ಪಿನಲ್ಲಿ ಸಂವಿಧಾನ ಕಲಮು 14ರಲ್ಲಿ ಕೊಟ್ಟಿರುವ ನಾಗರಿಕರ ಮೂಲಭೂತ ಹಕ್ಕಿನ ಉಲ್ಲಂಘನೆ ಮಾಡುವ ಸೆಕ್ಷನ್ 377 ಅಸಂವಿಧಾನಿಕವೆಂದು ಘೋಷಿಸಿತು. ಎಲ್ಲರಿಗೂ ಬದುಕಲು ಸಮಾನ ಅವಕಾಶ ಕೊಡುವ ಮತ್ತು ಸಮಾನ ಕಾನೂನು ಅನ್ವಯವಾಗುವ ಹಕ್ಕು ಇದೆಸಂವಿಧಾನ ಕಲಮು 14 ಹೇಳುತ್ತದೆ. ಎ.ಪಿ.ಶಾ ನೇತೃತ್ವದ ಎರಡು ಸದಸ್ಯರ ನ್ಯಾಯಪೀಠ ಸೆ. 377ನ್ನು ಕೇವಲ ಒಪ್ಪಿಗೆ–ರಹಿತ ಮತ್ತು ಅಪ್ರಾಪ್ತ ವಯಸ್ಕರ ನಡುವಿನ ಪ್ರಕರಣಗಳಿಗೆ ಸೀಮಿತಗೊಳಿಸಬೇಕೆಂದು ತಿಳಿಸಿತು. ಈ ಐತಿಹಾಸಿಕ ತೀರ್ಪನ್ನು ಸಿಪಿಐ(ಎಂ) ಸ್ವಾಗತಿಸಿತು.

ಆದರೆ ಈ ತೀರ್ಪನ್ನು ಪ್ರಶ್ನಿಸಿ 2013 ರಲ್ಲಿ ಸಲ್ಲಿಸಲಾದ ಅರ್ಜಿಯನ್ನು ವಿಚಾರಿಸಿ ಸುಪ್ರೀಂಕೋರ್ಟು ದೆಹಲಿ ಹೈಕೋರ್ಟ್ ನೀಡಿದ್ದ ಸೆಕ್ಷನ್ 377 ಅಸಂವಿಧಾನಿಕ ಎಂಬ ತೀರ್ಪನ್ನು ರದ್ದುಗೊಳಿಸಿತು. ಪಾರ್ಲಿಮೆಂಟ್ ಈ ವಿಷಯವನ್ನು ಚರ್ಚಿಸಿ ತೀರ್ಮಾನಿಸಲು ತೀರ್ಪು ಸೂಚಿಸಿತು. ಇದೊಂದು ಹಿಮ್ಮುಖ ಕ್ರಮವಾಗಿದ್ದು ಒಪ್ಪಿಗೆಯಿರುವ ವಯಸ್ಕರ ಸಲಿಂಗ ಸಂಬಂಧವನ್ನು ಮತ್ತೆ ದಂಡನೀಯ ಮಾಡುವುದಾಗಿತ್ತು.

ಇತ್ತೀಚೆಗೆ ಫೆಬ್ರವರಿ 2 ರಂದು ಸುಪ್ರೀಂಕೋರ್ಟ್ ಈ ತೀರ್ಪಿನ ಬಗ್ಗೆ ಸಲ್ಲಿಸಿದ್ದ ಪರಿಹಾರಿಕ ಅರ್ಜಿಯನ್ನು ಪರಿಶೀಲಿಸಲು 5 ಸದಸ್ಯರ ಪೀಠಕ್ಕೆ ವರ್ಗಾಯಿಸಿದೆ. ಈ ಕ್ರಮಕೋರ್ಟ್ ತನ್ನ ತೀರ್ಪನ್ನು ಪುನರ್ ಪರಿಶೀಲಿಸಿಬಹುದೆಂಬ ಮತ್ತು ಸಲಿಂಗ ಸಂಬಂಧಗಳನ್ನು ಅಪರಾಧವೆಂಬ ದೃಷ್ಟಿಯಿಂದ ನೋಡದೇ ಇರಬಹುದೆನ್ನುವ ಆಶಾಭಾವನೆಯನ್ನು ಹುಟ್ಟಿಸಿದೆ.

ಸಿಪಿಐ(ಎಂ) ಬದಲಿ ಲೈಂಗಿಕ ಒಲವುಗಳನ್ನು ಹೊಂದಿದ ಜನರಿಗೆ ಸಮಾನ ಹಕ್ಕು ನೀಡುವುದು ಮೊದಲ ಹೆಜ್ಜೆಯೆಂದು ಪರಿಗಣಿಸುತ್ತದೆ.

ಚಿಂತನಶೀಲ ಬಿಂಬಕಲಾಕೃತಿಯಾಗಿ 'ಗಾಳಿಬೀಜ' ನೋಡಬೇಕು

ಅತಿಥಿ ಅಂಕಣ



ಪ್ರೊ. ವಿ.ಎನ್.ಲಕ್ಷ್ಮೀನಾರಾಯಣ

ಕನ್ನಡದ ಚಿಂತನಶೀಲ ಸಿನಿಮಾ ಪ್ರಾರಂಭದಿಂದಲೂ ತನ್ನ ನಿರ್ಮಿತಿಗಾಗಿ ಸಾಹಿತ್ಯವನ್ನು ಅವಲಂಬಿಸಿದ ಕಲಾಮಾಧ್ಯಮವಾಗಿತ್ತು. ಇದೀಗ ಹೊಸ ಚಿತ್ರ ನಿರ್ದೇಶಕರು, ಅದರಲ್ಲೂ ಚಿತ್ರಕಲೆಯ ಹಿನ್ನೆಲೆಯಿಂದ ಬಂದ ಕಲಾವಿದರು ಸಾಹಿತ್ಯದ ಹಂಗಿಲ್ಲದೆ ತಾತ್ವಿಕ ಆಲೋಚನೆಗಳನ್ನು ಚಿತ್ರನಿರ್ಮಿತಿಯಲ್ಲಿ ತೊಡಗಿಸುತ್ತಿದ್ದಾರೆ. 'ಅತ್ತಿಹಣ್ಣು ಮತ್ತು ಕಣಜ' ನಿರ್ಮಿಸಿದ ಪ್ರಕಾಶ್ ಬಾಬು ಅವರಂತೆ ಬಾಬು ಈಶ್ವರ್ ಪ್ರಸಾದ್ ಸಹ ಚಿತ್ರಕಲೆಯ ಹಿನ್ನೆಲೆಯಿಂದ ಬಂದ ಬಿಂಬಕಲಾಕಾರ. ಇಂಥ ವಿಭಿನ್ನ ಹಿನ್ನೆಲೆಯ, ವಿಭಿನ್ನದೃಷ್ಟಿಕೋನ–ತಾತ್ವಿಕತೆಗಳ ಬಿಂಬಕಲಾಕಾರರು ಕನ್ನಡಕ್ಕೆ ಬಂದಷ್ಟೂ ಕನ್ನಡ ಚಿಂತನಶೀಲ ಸಿನಿಮಾ ಸಮೃದ್ಧವಾಗುತ್ತದೆ.

ಬಾಬು ಈಶ್ವರ್ ಪ್ರಸಾದ್ ಅವರ 'ಗಾಳಿಬೀಜ' (ಇಂಗ್ಲಿಷ್ ಶೀರ್ಷಿಕೆ 'ವಿಂಡ್ ಸೀಡ್') ಬಿಡುಗಡೆಯಾಗುವುದಕ್ಕಿಂತ ಮುಂಚೆಯೇ ಸೆನ್ಸಾರ್ ಅಧಿಕಾರಿಗಳ ಬಿಂಬ–ಸಂವೇದನಾಶೀಲತೆ, ಸಿನಿಮಾದ ಬಗೆಗಿನ ಸಂಕುಚಿತ ಜ್ಞಾನ, ಸೆನ್ಸಾರ್‌ಷಿಪ್ಪಿನ ಪ್ರಸ್ತುತತೆ ಮುಂತಾದ ಮೂಲಭೂತ ಅಂಶಗಳ ಬಗ್ಗೆ ವಿವಾದ–ಸಂವಾದಗಳನ್ನು ಹುಟ್ಟುಹಾಕುವುದರ ಮೂಲಕ ಸಾಕಷ್ಟು ಸುದ್ದಿ ಮಾಡಿದ ಚಿತ್ರ. 'ಇದು ಸಾಕ್ಷ್ಯಚಿತ್ರವೋ, ಕಥಾಚಿತ್ರವೋ ಎಂದು ವರ್ಗೀಕರಿಸಲು ಸಾಧ್ಯವಿಲ್ಲವಾದ್ದರಿಂದ, ಇದು ವಸ್ತುವಿನಲ್ಲಾಗಲಿ, ನಿರೂಪಣೆಯಲ್ಲಾಗಲಿ, ಸಿನಿಮಾನೇ ಅಲ್ಲವಾದ್ದರಿಂದ ಇದಕ್ಕೆ ಪ್ರಮಾಣಪತ್ರ ಕೊಡುವುದು ಸಾಧ್ಯವಿಲ್ಲ' ಎಂದು ಪ್ರಾದೇಶಿಕ ಸೆನ್ಸಾರ್ ಮಂಡಳಿ ಹೇಳಿತ್ತು. ನಿರ್ದೇಶಕರ 11 ತಿಂಗಳ ಸತತ ಪ್ರಯತ್ನದಿಂದಾಗಿ ಪ್ರಮಾಣ ಪತ್ರ ದೊರೆತು, ಮುಂಬಯಿ, ಬೆಂಗಳೂರು ಮತ್ತು ಮೈಸೂರಿನ ಚಿತ್ರೋತ್ಸವಗಳಲ್ಲಿ ಚಿತ್ರಸಹೃದಯರು ಈ ಚಿತ್ರವನ್ನು ನೋಡುವುದು ಸಾಧ್ಯವಾಯಿತು.

'ಗಾಳಿಬೀಜ'ದ 'ಕತೆ'

ಬೆಂಗಳೂರಿನಲ್ಲಿ ವಾಸಿಸುವ ರೋಡ್ ಇಂಜಿನಿಯರ್ ಪ್ರಕಾಶ್, ತನ್ನ ಸಂಸ್ಥೆಯ ಪರವಾಗಿ ಹಾವೇರಿಯ ಸಮೀಪದ ರಸ್ತೆ ಸರ್ವೆಯ ಮೇಲುಸ್ತುವಾರಿಕೆಯ ಜವಾಬ್ದಾರಿಗಳನ್ನು ನಿರ್ವಹಿಸಲು ಕಾರಿನಲ್ಲಿ ಸುಮಾರು 350 ಕಿಲೋಮೀಟರ್ ನಷ್ಟು ದೀರ್ಘ ಪ್ರಯಾಣವನ್ನು ಕೈಗೊಳ್ಳುತ್ತಾನೆ. ಈ ಸುದೀರ್ಘ ಪ್ರಯಾಣವೇ ರಸ್ತೆಯ ಇಕ್ಕೆಲಗಳ ಜನರ ಚಟುವಟಿಕೆಗಳು, ವಾಸಸ್ಥಳಗಳು, ಮರಗಿಡಗಳು ಮತ್ತು ಭೂ ವಿಸ್ತಾರಗಳ ಸರ್ವೆಯಾಗುತ್ತದೆ. ರಸ್ತೆಯಲ್ಲಿ ಹಿಂದೆ, ಮುಂದೆ ಚಲಿಸುವ ಜನ, ಕಾರು, ಸ್ಕೂಟರ್ ಮತ್ತು ಸಾರಿಗೆ, ಸರಕು ಸಾಗಣೆ ವಾಹನಗಳು, ರಸ್ತೆ, ಕಟ್ಟಡ ನಿರ್ಮಾಣದ ಪರಿಕರಗಳ ವಾಹನಗಳು. ಹೈಡ್ರೋ ಇಲೆಕ್ಟ್ರಿಕ್ ಮತ್ತು ಶಾಖೋತ್ಪನ್ನ ವಿದ್ಯುತ್ ತಯಾರಿ–ಕೆಯ ಸಂಕೇತಗಳಾಗಿ ಕಾಣಿಸುವ ಹೈ ಟೆನ್ಶನ್ ವಿದ್ಯತ್ ಕಂಬಗಳು. ದೂರದ ಬೆಟ್ಟಗಳ ಮೇಲೆ, ಸ್ಥಳೀಯವಾಗಿ ಪರ್ಯಾಯ ವಿಧಾನದಲ್ಲಿ ವಿದ್ಯುತ್ ತಯಾರಿಸುವ ಗಾಳಿ ಯಂತ್ರಗಳ ಚಿತ್ರ, ಹೀಗೆ ಕಣ್ಣ ಹಾಯಿಸಿದ ಕಡೆಗಳಲ್ಲೆಲ್ಲಾ ನಡೆಯುವ ವಿವಿಧ ಚಟುವಟಿಕೆಗಳು, ಒಟ್ಟಿನಲ್ಲಿ ರೋಡ್ ಇಂಜಿನಿಯರ್‌ನ ದೃಷ್ಟಿಪರಿಧಿಗೆ ಸಿಕ್ಕುವ ಎಲ್ಲವೂ ಸರ್ವೆಯ ಶೈಲಿಯಲ್ಲಿ ದಾಖಲಾಗುತ್ತಾ ಸಾಗುತ್ತವೆ.

ರಸ್ತೆಬದಿಯಲ್ಲಿ ನಿಂತು ಸಹಪ್ರಯಾಣಕ್ಕಾಗಿ ಕೈಯೊಡ್ಡುವ ಜಾಫರ್‌ನನ್ನು ಕಾರಿಗೆ ಹತ್ತಿಸಿಕೊಂಡು ಪ್ರಯಾಣಿಸುವ ಇಂಜಿನಿಯರ್ ಅವನೊಂದಿಗೆ ನಡೆಸುವ ಸಂಭಾಷಣೆಯಲ್ಲಿ 'ಗಾಳಿಬೀಜ' ದ ಹಿನ್ನೆಲೆಯಾಗಿ 'ರೋಡ್ ಮೂವಿ' ಎಂಬ ಸಿನಿಮಾ ಪ್ರಕಾರದ ಬಗ್ಗೆ ನೋಡುಗರಿಗೆ ಪರಿಚಯವಾಗುತ್ತದೆ. ಗ್ರಾಮೀಣ ಜನರಿಗೆ ಸಿನಿಮಾ ತೋರಿಸುವ ಜಾಫರ್‌ನಿಂದ ಪಡೆಯುವ ಸಿನಿಮಾಗಳು, ಸಿನಿಮಾ ಪೈರಸಿ ದಂಧೆಯ ಫಲವಾಗಿ (ಸಿನಿಮಾಪ್ರಿಯ) ಇಂಜಿನಿಯರ್‌ಗೆ ದಕ್ಕುವ ಸಿನಿಮಾನುಭವದ ಆಕರಗಳಾಗುತ್ತವೆ. ಅವನು ಗಮ್ಯ ಸ್ಥಾನವನ್ನು ತಲುಪಿದಮೇಲೆ ವಿಶ್ರಾಂತಿ ಗೃಹದಲ್ಲಿ ಏಕಾಂಗಿಯಾಗಿ ಅನುಭವಿಸುವ ಏಕತಾನತೆ ಮತ್ತು ವೈಯಕ್ತಿಕ ನೋವಿನ ಕ್ಷಣಗಳನ್ನು ಬಿಂಬಿಸಲು ಅವು ಬಳಕೆಯಾಗುತ್ತವೆ. ಬಹುತೇಕವಾಗಿ, ಚಲಿಸುವ ಕಾರಿನೊಳಗಿಂದಲೇ ತನ್ನ ಸಿನಿಮಾವನ್ನು ಸೃಷ್ಟಿಸುವ ಅಬ್ಬಾಸ್ ಕಯರೋಸ್ತಮಿ ನಿರ್ಮಿಸಿರುವ 'ಟೇಸ್ಟ್ ಆಫ್ ಚೆರ್ರಿ' ಸಿನಿಮಾದ ಕೇಂದ್ರ ಪಾತ್ರ, ತನ್ನ ಆತ್ಮಹತ್ಯೆಯ ನಂತರದ ಕ್ರಿಯೆಗಳನ್ನು ನಿರ್ವಹಿಸಬಲ್ಲ ವ್ಯಕ್ತಿಗಾಗಿ ಅನ್ವೇಷಿಸುತ್ತಾ ಕಾರಿನಲ್ಲಿ ಅಲೆಯುವ ದೃಶ್ಯದ ತುಣುಕು 'ಗಾಳಿಬೀಜ'ದ ಅನುಭವದಲ್ಲಿ ಬೀಜರೂಪದಲ್ಲಿ ಸೇರ್ಪಡೆಯಾಗಿದೆ.

ಇಂಜಿನಿಯರ್ ಕಾರಿನಲ್ಲಿ ಪ್ರಯಾಣಿಸುವಾಗ, ಮತ್ತು ವಿಶ್ರಾಂತಿಗೃಹದಲ್ಲಿ ತಂಗಿದ್ದಾಗ ಆಗಾಗ ಆತನನ್ನು ಸಂಪರ್ಕಿಸುವ , ಆತನೇ ಸಂಪರ್ಕಿಸಲು ಯತ್ನಿಸುವ ಹೆಣ್ಣಿನೊಂದಿಗಿನ ಸಂಬಂಧ ಯಾವುದೋ ನೋವಿನಿಂದ, ಬೇಸರ–ಏಕತಾನತೆಯ ಭಾರದಿಂದ ಕೂಡಿರುವಂತೆ ಬಿಂಬಿಸಲಾಗಿದೆ. ಚಲಿಸುವ ಕಾರಿಗೆ ನಿಶ್ಚಲವಾಗಿ ಹರಿಯುವ ರಸ್ತೆಯೊಂದಿಗೆ ಏರ್ಪಡುವ ವಿವಿಧ ರೀತಿಯ ಸಂಬಂಧಗಳು. ರಸ್ತೆಯ ಅಗಲೀಕರಣಕ್ಕಾಗಿ ಕೆಡವಿದ ಮನೆಗಳ ಮುರುಕು ಗೋಡೆಗಳು. ರಸ್ತೆಗಾಗಿ ವಶಪಡಿಸಿಕೊಂಡ ಕೃಷಿ ಭೂಮಿ. ಕೆಡವಿ ಮುಕ್ಕಾದ ಗುಡ್ಡಗಳು. ಯಾವುದೋ ಅಪಘಾತಕ್ಕೆ ಸಿಕ್ಕಿ ಭಸ್ಮವಾಗಿ ರಸ್ತೆಬದಿಯಲ್ಲಿ ನಿಶ್ಚಲವಾಗಿ ನಿಂತ ಬಸ್ಸಿನ ಅಸ್ಥಿಪಂಜರದ ಚಿತ್ರ. ಇವೆಲ್ಲಾ ಒಟ್ಟಾ–ರೆ ಬದುಕು–ಸಾವಿನ ಸಂಬಂಧಗಳ ರೂಪಕಗಳಾಗಿ ಬಿಂಬಿತವಾಗುತ್ತವೆ.

ಹಳ್ಳಿ–ನಗರಗಳ ತಾರತಮ್ಯದ ಚಿತ್ರಣ

ಚಲಿಸುವ ಕಾರಿನಿಂದ ಕಾಣುವ ನಗರದ ಗಗನಚುಂಬಿ ಬಹುಮಹಡಿ ಕಟ್ಟಡಗಳ ಚಿತ್ರಗಳು. ಗ್ರಾಮೀಣ ಪ್ರದೇಶದ ಕುಬ್ಜ, ಕೊಳಕು, ಮುರುಕು ವಾಸಸ್ಥಳಗಳ ಚಿತ್ರಗಳು ವೈದೃಶ್ಯ ಸಂಬಂಧಗಳಲ್ಲಿ ಪರಸ್ಪರ ಹೆಣೆದುಕೊಂಡು ಇಡೀ ದೇಶದ–ನಾಡಿನ ಕುಸಿದ ಜೀವನ ಮಟ್ಟವನ್ನು ಮಾತಿಲ್ಲದೆ ಹೇಳುತ್ತವೆ. ಒಂದು ಕಡೆ ವಿವಿಧ ವೇಗಗಳಲ್ಲಿ ರಸ್ತೆಯ ಮೇಲೆ ಸಾಗುವ ಮೋಟಾರು ವಾಹನಗಳು. ಅವುಗಳಗೆ ಆಧಾರವಾದ ವಾಹನ ಉದ್ಯಮ. ತೈಲದ ವ್ಯಾಪಾರದ ಹಿಂದಿರುವ ರಾಜಕೀಯ ಮತ್ತು ಆರ್ಥಿಕತೆ. ಅವುಗಳ ಫಲಾನುಭವಿಗಳ ಹಿತಾಸಕ್ತಿಯನ್ನು ನಿರಂತರವಾಗಿ ಪೋಷಿಸಲೆಂದೇ ವಿಸ್ತಾರಗೊಳ್ಳುವ ಹೆದ್ದಾರಿಗಳ ಕಾಮಗಾರಿ. ಸೇತುವೆ, ಮೇಲ್ಸೇತುವೆಗಳ ನಿರ್ಮಾಣದ ಹಿಂದಿರುವ ಸಿಮೆಂಟ್ ಮತ್ತು ಕಬ್ಬಿಣದ ಉದ್ಯಮ. ರೈತರ ಕೃಷಿಭೂಮಿಯನ್ನು ವಶಪಡಿಸಿಕೊಂಡು ರಸ್ತೆ ನಿರ್ಮಾಣಕ್ಕಾಗಿ ಉದ್ಯಮಿಗಳ ವಶಕ್ಕೊಪ್ಪಿಸುವ ಸರ್ಕಾರಗಳು. ಸಾವಿರಾರು ಜನ ಕಾರ್ಮಿಕರನ್ನು ನಿರುದ್ಯೋಗಿಗಳನ್ನಾಗಿಸಿ ಹಗಲಿರುಳೆನ್ನದೆ ನೆಲಬಗೆಯುವ ರಾಕ್ಷಸ ಯಂತ್ರಗಳು. ಮೂಲಸೌಕರ್ಯದ ಅಭಿವೃದ್ಧಿಯ ಹೆಸರಿನಲ್ಲಿ ಪಡೆಯುವ ಜಾಗತಿಕ ಸಾಲಗಳು. ಇವೆಲ್ಲವೂ ಮೈಲುಗಟ್ಟಲೆ ಹರಿಯುತ್ತಾ ಹೋಗುವ ರಸ್ತೆ ರಾಜಕೀಯದ ಮೂಲಕ ಜನಸಾಮಾನ್ಯರ ಬದುಕನ್ನು ನಿಯಂತ್ರಿಸುವ ಸಾಧನಗಳಾಗುತ್ತವೆ. ಮತ್ತೊಂದು ಕಡೆ, ನಿಶ್ಚಲವಾಗಿ ನಿಂತ ಎತ್ತಿನಗಾಡಿ, ರಸ್ತೆಯ, ಬಸ್ ಸ್ಟಾಪಿನ ಗೋಡೆಗಳ ಮೇಲೆ ಸಿನಿಮಾ ಪೋಸ್ಟರ್ ಅಂಟಿಸಲು ಬಳಸುವ ಹಳೆಯ ಬೈಸಿಕಲ್ಲು. ಕಿರಿದಾದ ಮಣ್ಣಿನ ರಸ್ತೆಗಳು. ದಮನಕಾರೀ ರಾಜಕೀಯಕ್ಕೆ ಸಿಕ್ಕಿ ನರಳುವ ಜನರ ಪ್ರತಿನಿಧಿಯೆಂಬಂತೆ ಕಾಣುವ ಬೆಂಕಿಯ ಜ್ವಾಲೆಗಳ ಮಧ್ಯೆ ಮಲಗುವ ಭಿಕ್ಷುಕ–ಅಲೆಮಾರಿ–ಅಸ್ವಸ್ಥ ಇವೆಲ್ಲವೂ ಪ್ರಸ್ತುತ ರಾಜಕೀಯದ ಫಲಶ್ರುತಿಗಳಂತೆ ಕಾಣುತ್ತವೆ. ಜನಸಾಮಾನ್ಯರ ಕಷ್ಟಕರ ಜೀವನದ ಬವಣೆಯನ್ನು ಮರೆಸಲು ಹೀರೋ–ಸೂಪರ್ ಹೀರೋಗಳನ್ನು ಸೃಷ್ಟಿಸುವ ಸಿನಿಮಾ ಉದ್ಯಮವೂ 'ಗಾಳಿ ಬೀಜ'ದ ಮಾತಿಲ್ಲದ ವಿಮರ್ಶೆಗೆ ಒಳಪಡುತ್ತದೆ.

ಜನಸಾಮಾನ್ಯರ ಅಸಹಾಯಕತೆ

ಜನಸಾಮಾನ್ಯರ ಜೀವನದ ಬಗ್ಗೆ ಯಾವುದೇ ರೀತಿಯಲ್ಲಿ ಮರುಗದೆ, ನಿರ್ಭಾವುಕರಾಗಿ ರಸ್ತೆ ನಿರ್ಮಾಣಕ್ಕಾಗಿ ಭೂಮಿಯ ಸರ್ವೆಯಲ್ಲಿ ತೊಡಗುವ ಸಿಬ್ಬಂದಿ. ಉದ್ದೇಶರಹಿತವಾಗಿ ಎಂಬಂತೆ ಸುಮ್ಮನೆ ಅಲ್ಲಿ ಇಲ್ಲಿ ಸುತ್ತುತ್ತಾ ಕಾಲ ಕಳೆಯುವಂತೆ ಕಾಣಿಸುವ ಹಳ್ಳಿಗ. ನೀರಿಗಾಗಿ ಪ್ಲಾಸ್ಟಿಕ್ ಬಿಂದಿಗೆಗಳನ್ನು ಗಾಡಿಯಲ್ಲಿಟ್ಟು ರಸ್ತೆ ದಾಟುವ ಮನುಷ್ಯ. ರಸ್ತೆಯ ಅಗಲೀಕರಣಕ್ಕೆ ಟೀ ಅಂಗಡಿಯ ಭೂಮಿಯನ್ನು ಕಳೆದುಕೊಳ್ಳಬೇಕಾಗಿ ಬಂದರೆ, ಮತ್ತೊಂದು ಸ್ಥಳದಲ್ಲಿ ಅಂಗಡಿ ಇಟ್ಟರಾಯಿತೆಂದು ತನಗೆ ತಾನೇ ಸಮಾಧಾನ ಹೇಳಿಕೊಳ್ಳುವ ಟೀ ಅಂಗಡಿಯ ಮನುಷ್ಯ. ಇವರೆಲ್ಲರೂ ಪ್ರಸ್ತುತ ಸರ್ಕಾರಗಳ ಜನವಿರೋಧಿ ರಾಜಕೀಯ ನಿರ್ಧಾರಗಳನ್ನು, ಆರ್ಥಿಕ ಆದ್ಯತೆಗಳನ್ನು ಅನಿವಾರ್ಯವೆಂದು ಒಪ್ಪಿಕೊಂಡ ಅಸಹಾಯಕರಾಗಿ ಚಿತ್ರಿತವಾಗಿದ್ದಾರೆ.

ಜಾಗತೀಕರಣ, ಅಭಿವೃದ್ಧಿ ಮತ್ತು ಕೃಷಿಭೂಮಿ

'ಗಾಳಿ ಬೀಜ'ದ ಚೌಕಟ್ಟಿನೊಳಗಿದ್ದುಕೊಂಡೇ ಕಳೆದ ಎರಡು ದಶಕಗಳಲ್ಲಿ ನಾಡಿನ ಆರ್ಥಿಕ–ರಾಜಕೀಯದಲ್ಲಾದ ನೀತಿಗಳ ಪಲ್ಲಟವನ್ನು ಗಮನಿಸಲು ಚಿತ್ರದಲ್ಲಿ ಅವಕಾಶವಿದೆ. ಜಾಗತೀಕರಣದ ರಾಜಕೀಯದಲ್ಲಿ ಸಂಪತ್ತಿನ ಖಾಸಗೀಕರಣ, ಕೃಷಿಯೇತರ ಉದ್ದೇಶಗಳಿಗಾಗಿ ಕೃಷಿಭೂಮಿಯ ಆಕ್ರಮಣ, ಮತ್ತು ಹಣಕಾಸು ಬಂಡವಾಳದ ವಿಸ್ತರಣೆ ಬಹು ಮುಖ್ಯವಾದ ಅಂಶಗಳು. ನೈಸರ್ಗಿಕ, ಸಾಮಾಜಿಕ ಮತ್ತು ಸಾರ್ವಜನಿಕ ಜೀವನಾಗತ್ಯಗಳ ಮೇಲೆ ಖಾಸಗಿ ನಿಯಂತ್ರಣ, ಅವುಗಳ ವ್ಯಾಪಾರೀಕರಣ, ಮತ್ತು ಆಹಾರಸಾಮಗ್ರಿಗಳ ಉತ್ಪಾದನೆಯ ಬದಲು ಹಣಕಾಸು ವಹಿವಾಟನ್ನು ಕೇಂದ್ರದಲ್ಲಿರಿಸಿಕೊಂಡ ನಗರೀಕರಣ ಈ ನೀತಿಗಳ ನೇರ ಫಲಶೃತಿಗಳು. ನಿರ್ಭಾವುಕತೆ, ಯಾಂತ್ರಿಕತೆ, ಅಮಾನವೀಯತೆ ಮುಂತಾದ ಜೀವವಿರೋಧೀ ನಿಲುವುಗಳು ಇಂಥ ಜೀವನದ ಸಹಜ ಮಾದರಿಗಳು. (ಉದಾಹರಣೆಗೆ, 'ಗಾಳಿಬೀಜ' ದಲ್ಲಿ ಬೆತ್ತಲಾಗಿ ನಿಂತ ಬೆಟ್ಟ–ಗುಡ್ಡಗಳ ಸೌಂದರ್ಯ ಮರೆಯಾಗಿ ಬೇಲಿಹಾಕಿದ ಭೂಮಿಯ ಪಕ್ಕ ನಿಂತ ಹುತ್ತ ಆಕರ್ಷಕ ವಸ್ತುವಾಗುತ್ತದೆ).

ರಸ್ತೆಗಳ ವಿಸ್ತರಣೆ, ನಗರೀಕರಣ ಮತ್ತು ಭೂಮಿಯ ಸರಕೀಕರಣ

ಊರಿನೊಳಗೆ ಹಾಯುವ ವಾಹನಗಳ ದಟ್ಟಣೆಯನ್ನು ತಗ್ಗಿಸುವ ಕಾರಣವನ್ನೊಡ್ಡಿ ಬೈಪಾಸ್ ರಸ್ತೆಗಳು ನಿಮಾಣಗೊಂಡವು. ಅಂಥದೇ ಕಾರಣವನ್ನು ಮುಂದಿಟ್ಟುಕೊಂಡು ದೊಡ್ಡ ದೊಡ್ಡ ಊರುಗಳ ಆಸುಪಾಸಿನ ಊರುಗಳನ್ನು ಕಬಳಿಸಲು ವರ್ತುಲ ರಸ್ತೆಗಳು ನಿರ್ಮಾಣಗೊಂಡವು. ಅವೂ ಸಾಲದೆಂಬಂತೆ ಹೊರವರ್ತುಲ ರಸ್ತೆಗಳ ನಿರ್ಮಾಣವಾಯಿತು. ಖಾಸಗಿ ಗುತ್ತಿಗೆದಾರರಿಗೆ ಅನುಕೂಲವಾಗಲೆಂದು ದುಬಾರಿ ಕರ ವಸೂಲಿಯ 'ನೈಸ್' ರಸ್ತೆಗಳು ನಿರ್ಮಾಣಗೊಂಡವು. ಅವುಗಳಿಗೆ ಹೊಂದಿಕೊಂಡಂತೆ 'ಉಪನಗರ'ಗಳು ನಿರ್ಮಾಣಗೊಂಡವು. ಇವೆಲ್ಲವುಗಳ ಘೋಷಿತ ಉದ್ದೇಶಗಳು ಎಷ್ಟೇ ಸಂಗತವಾಗಿ ಕಂಡರೂ, ವಾಸ್ತವವಾಗಿ ಅವು ಮಾಡಿದ ಬಹು ಮುಖ್ಯ ಬದಲಾವಣೆಯೆಂದರೆ ನಗರೀಕರಣದ ವ್ಯಾಪಕ ವಿಸ್ತರಣೆ ಮತ್ತು ಕೃಷಿ ಭೂಮಿಯ ಅಗಾಧ ಸರಕೀಕರಣ. ಇದರ ಅವಳಿ ಬೆಳವಣಿಗೆಯಾಗಿ ಕಪ್ಪು ಹಣದ ಚಲಾವಣೆ ಮತ್ತು ಭೂ ಕಬಳಿಕೆಯ ಲ್ಯಾಂಡ್ ಮಾಫಿಯಾ ಜನಸಾಮಾನ್ಯರ ಬದುಕನ್ನು ನಿಯಂತ್ರಿಸತೊಡಗಿದವು.

ಹಣಕಾಸು ಬಂಡವಾಳದ ವಿಸ್ತರಣೆಗೆ ಇದೂ ಸಾಲದಾದಾಗ ಗ್ರಾಮೀಣ ಭಾಗದ ಕೃಷಿಭೂಮಿಯನ್ನೇ ನೇರವಾಗಿ ವಶಪಡಿಸಿಕೊಳ್ಳಲು ವಿಶೇಷ ಆರ್ಥಿಕ ವಲಯಗಳ ಪರಿಕಲ್ಪನೆ ಹುಟ್ಟಿಕೊಂಡಿತು. ಇದ–ಕ್ಕೆ ಪೂರಕವಾಗಿ ಭೂ ಸಂಬಂಧಿ ಕಾನೂನುಗಳ ಪರಿಷ್ಕರಣೆ, ಭೂ ಬ್ಯಾಂಕ್ ನ ಸ್ಥಾಪನೆಗಳು ನಡೆದವು. ದ್ವಿಪಥ, ಚತುಷ್ಪಥ, ಷಟ್ಪಥ ರಸ್ತೆಗಳು, ಮೇಲುಸೇತುವೆ, ದ್ವಿಪಥ ರೈಲುಮಾರ್ಗಗಳು, ಮೆಟ್ರೋ ಮುಂತಾದ ಕಾಮಗಾರಿಗಳು ಮೇಲುನೋಟಕ್ಕೆ ಜನರಿಗಾಗಿಯೇ ಕೈಗೊಂಡ ಅಭಿವೃದ್ಧಿ ಕಾರ್ಯಗಳೆಂದು ಅನ್ನಿಸುವುದು ನಿಜ. ಆದರೆ ಇವುಗಳ ಮೂಲ ಉದ್ದೇಶ ಬೃಹತ್ ಖಾಸಗಿ ಗುತ್ತಿಗೆದಾರರು, ಜಾಗತಿಕ ಹಣಕಾಸುಸಂಸ್ಥೆಗಳು ಮತ್ತು ರಾಜಕಾರಣಿ–ಉದ್ದಿಮೆದಾರರ ಕೂಟವಾದ ಹಣಕಾಸು ಬಂಡವಾಳಗಾರರ ಹಿತಾಸಕ್ತಿಯನ್ನು ಕಾಯುವುದು. ನದಿಗಳ ಜೋಡಣೆ, ಬೃಹತ್ ನಗರಗಳನ್ನು ಜೋಡಿಸುವ ಉದ್ದೇಶವುಳ್ಳ ಮೈಲಿಗಟ್ಟಲೆ ರಸ್ತೆಗಳು, ದಾರಿಮಧ್ಯದಲ್ಲಿ ಸಿಗುವ ಸಣ್ಣ ಸಣ್ಣ ಊರುಗಳ ಹತ್ತಿರದ ಕೃಷಿಭೂಮಿಯನ್ನು ನುಂಗಿ, ಮಾಲ್‌ಗಳು, ಹೈಟೆಕ್ ಆಸ್ಪತ್ರೆಗಳು, ವಿಮಾನ ನಿಲ್ದಾಣಗಳು ಮತ್ತು ವಿದೇಶೀ ಬ್ಯಾಂಕುಗಳನ್ನು ಒಳಗೊಂಡ ಸ್ಮಾರ್ಟ್‌ಸಿಟಿಗಳನ್ನು ಸ್ಥಾಪಿಸುವ ಯೋಜನೆಗಳ ಹಿಂದಿರುವುದೂ ಇದೇ ಉದ್ದೇಶ. ತುಂಡು ಭೂಮಿಯ ಒಡೆಯರಿಗೆ ಕೈತುಂಬಾ ಹಣ ಕೊಟ್ಟು ಪಡೆದ ಕೃಷಿ ಭೂಮಿಯನ್ನು ಭಾರಿ ಉದ್ದಿಮೆದಾರರು ತಮ್ಮ ವಶಕ್ಕೆ ತೆಗೆದುಕೊಂಡು ಅದರಲ್ಲಿನ ಕೃಷಿ ಚಟುವಟಿಕೆ, ಆಹಾರ ಸಂಸ್ಕರಣೆ, ದಾಸ್ತಾನು ಮತ್ತು ಮಾರಾಟವನ್ನು ನಿಯಂತ್ರಿಸುವುದು ಇದರಿಂದ ಸಾಧ್ಯವಾಗುತ್ತದೆ. ಇದರ ನೇರ ಪರಿಣಾಮ ಹಳ್ಳಿಗಾಡಿನ ಜನ ನಾ ಮುಂದು, ತಾಮುಂದು ಎಂದು ಕೃಷಿಭೂಮಿಯನ್ನು ಮಾರಿ ತಮ್ಮ ನೆಲದಲ್ಲೇ ಉದ್ದಿಮೆದಾರರ ಗುಲಾಮರಾಗುವುದು. ಅಥವಾ ನಿರ್ಗತಿಕರಾಗಿ ನಗರಗಳ ಕೊಳಚೆ ಪ್ರದೇಶಗಳಲ್ಲಿ ನೆಲಸುವುದು.

'ಗಾಳಿಬೀಜ'ದ ವ್ಯಾಪ್ತಿ

ಗಿಡದ ಶುಷ್ಕ ಕಾಯಿಯಿಂದ ಬಿಡುಗಡೆಗೊಂಡ ದಳಗಳು ಗಾಳ ಬೀಸಿದತ್ತ ಹಾರುತ್ತಾ ಹೋಗುವ ಗಾಳಿಬೀಜದಂತೆ ಏನೆಲ್ಲವನ್ನೂ ಒಳಗೊಳ್ಳುತ್ತಾ ಸಾಗುವ ಈ ಚಿತ್ರ ಮೊದಲ ನೋಟಕ್ಕೆ ಪರಸ್ಪರ ಸಂಬಂಧವಿರದ ಚಿತ್ರಗಳ ಸಂಕಲನ (ಕೊಲಾಜ್) ಎಂಬಂತೆ ತೋರುವುದರಲ್ಲಿ ಆಶ್ಚರ್ಯವೇನಿಲ್ಲ. 'ಗಾಳಿಬೀಜ'ದ ವೀಕ್ಷಣೆ ನಮ್ಮೊಳಗಿನ ಅನುಭವವಾಗಿ ವಿಸ್ತರಣೆಗೊಳ್ಳಲು, ದೃಶ್ಯಮಾಧ್ಯಮದ ಸಾಧ್ಯತೆಗಳ ಕನಿಷ್ಠ ಪರಿಚಯ ಬೇಕು. ಒಂದು ಒಬ್ಬ ಬಿಂಬ ಕಲಾಕರ್ತೃ ಮಾಡುವ ಸಿನಿಮಾಕ್ಕೆ ಏನೆಲ್ಲವನ್ನೂ ಒಳಗೊಳ್ಳುವ ಶಕ್ತಿ ಇದೆ ಎಂಬ ಅರಿವಿರಬೇಕು. ಕಲಾತ್ಮಕತೆಯ ಬಗೆಗಿನ ಸಂವೇದನಾಶೀಲತೆಯ ಜೊತೆ ಜೊತೆಗೆ ಪ್ರಸ್ತುತ ಜಗತ್ತಿನ ಸಾಮಾಜಿಕ ಮತ್ತು ರಾಜಕೀಯದ ತಾತ್ವಿಕ ಗ್ರಹಿಕೆಯೂ ಅತ್ಯಗತ್ಯ. 'ಗಾಳಿಬೀಜ'ದ ಬಿಡಿ ಬಿಡಿಯಾದ ಚಿತ್ರಿಕೆಗಳ ಅಂತಸ್ಸಂಬಂಧದಲ್ಲಿ ಒಳಧಾರೆಯಾಗಿ ಹರಿಯುವ ಮಾನವೀಯತೆಯ ಪರಿಚಯವಾಗಲು ಇಂಥ ಗ್ರಹಿಕೆ ಅವಶ್ಯಕ.

ಸಿನಿಮಾ ಆಗಿ 'ಗಾಳಿಬೀಜ'ದ ಮಿತಿಗಳು

'ಗಾಳಿಬೀಜ' ಒಂದು ಚಿಂತನಶೀಲ ಬಿಂಬಕಲಾಕೃತಿಯಾಗಿ ಅದರ ವಸ್ತುವಿಗೆ ಲಗತ್ತಾಗಿರುವಷ್ಟು ಸಾಂದ್ರವಾಗಿಲ್ಲ ಎನಿಸುತ್ತದೆ. ಅಂ–ದರೆ ಚಿತ್ರದ ಓಟದ ಹೆಣಿಗೆಯಲ್ಲಿ ಕೂಡಿಕೊಳ್ಳುವ ದೃಶ್ಯಗಳು ಅಳ್ಳಕವಾಗಿವೆ. ನಿಂತು ನೋಡಬಹುದಾದ ಒಂದು ಸ್ಥಿರ ದೃಶ್ಯಕಲಾಕೃತಿ ಸಿನಿಮಾ ಆಗುವಾಗ ಜೀವಂತಿಕೆಯ ಚಲನೆಯನ್ನು ಪಡೆದುಕೊಳ್ಳುತ್ತದೆ. ಸ್ಥಿರಚಿತ್ರಗಳನ್ನು ಚಲಿಸಿದಂತೆ ಮಾಡುವುದಕ್ಕೂ ಚಲಿಸುವ ಚಿತ್ರಗಳಿಗೆ ಚಲನೆಯಲ್ಲೇ ಜೀವ ತುಂಬುವುದಕ್ಕೂ ತುಂಬಾ ವ್ಯತ್ಯಾಸವಿದೆ. ಸಿನಿಮಾ ಇತರ ದೃಶ್ಯಮಾಧ್ಯಮಗಳಿಂದ ಬೇರೆಯಾಗುವುದು ಇಲ್ಲೇ. ಜೊತೆಗೆ, ದೃಶ್ಯಗಳನ್ನು ಸಂಯೋಜಿಸುವಾಗ

ಪುಟ 14 ಕ್ಕೆ



ಜನತೆಗೆ ಮತ್ತಷ್ಟು ಪೆಟ್ರೋಲ್, ಡೀಸೆಲ್ ತೆರಿಗೆಗಳ ಹೊರೆ! ಬಂಡವಳಿಗರಿಗೆ ವಿನಾಯ್ತಿ-ರಿಯಾಯ್ತಿಗಳ ಜತೆಗೆ ಸಾಲಮನ್ನಾ!!

ಮೋದಿ ಸರಕಾರ ಜಾಗತಿಕ ತೈಲ ಬೆಲೆಗಳ ಇಳಿಕೆಗಳಲ್ಲಿ ಬಹುಭಾಗವನ್ನು ಅಬಕಾರಿ ಸುಂಕಗಳ ಏರಿಕೆಗಳ ಮೂಲಕ ಕಿತ್ತು-ಕೊಂಡು, ಅದರ ಪ್ರಯೋಜನ ಜನಸಾಮಾನ್ಯರಿಗೆ ದಕ್ಕದಂತೆ ಮಾಡಿದೆ.

ತನ್ನ ಹಣಕಾಸು ಕೊರತೆಯನ್ನು ತುಂಬಲು ಆದಾಯಗಳನ್ನು ಹೆಚ್ಚಿಸಬೇಕೆಂದಿದ್ದರೆ, ಜನತೆಯ ಮೇಲಿನ ತೆರಿಗೆ ಹೊರೆಯನ್ನು ಈ ರೀತಿ ಹೆಚ್ಚಿಸುವ ಬದಲು, ಕಾರ್ಪೊರೇಟ್‌ಗಳಿಗೆ ಮತ್ತು ಶ್ರೀಮಂತ ವಿಭಾಗಗಳಿಗೆ ಕೊಟ್ಟಿರುವ ತೆರಿಗೆ ವಿನಾಯ್ತಿಗಳು ಮತ್ತು ರಿಯಾಯ್ತಿಗಳನ್ನು ಕೊನೆಗೊಳಿಸಬಹುದಿತ್ತು ಮತ್ತು ಕಂಪನಿಗಳು ಮತ್ತು ಶ್ರೀಮಂತರು ಮರುಪಾವತಿ ಮಾಡದೆ ಬಾಕಿ ಇಟ್ಟುಕೊಂಡಿರುವ ಬ್ಯಾಂಕ್ ಸಾಲಗಳನ್ನು ವಸೂಲು ಮಾಡಬೇಕಿತ್ತು.



ಪ್ರಕಾಶ ಕಾರಟ್

ಕೇವಲ ಜನವರಿ ತಿಂಗಳಲ್ಲೇ ಕೇಂದ್ರ ಸರಕಾರ ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಮೇಲಿನ ಅಬಕಾರಿ ಸುಂಕಗಳನ್ನು ಮೂರು ಸುತ್ತುಗಳಲ್ಲಿ ಏರಿಸಿದೆ. ಈ ಏರಿಕೆಗಳ ಒಟ್ಟು ಪ್ರಮಾಣ ಪೆಟ್ರೋಲ್ ಮೇಲೆ ಲೀಟರಿಗೆ ರೂ.2.12, ಡೀಸೆಲ್ ಮೇಲೆ ರೂ.5.5. ನವಂಬರ್ 2014ರಿಂದ ಇದುವರೆಗೆ ಅಬಕಾರಿ ಸುಂಕಗಳನ್ನು ಒಂಭತ್ತು ಬಾರಿ ಏರಿಸಲಾಗಿದೆ. ಇದ-ರಿಂದಾಗಿ ಪೆಟ್ರೋಲ್ ಮೇಲಿನ ಸುಂಕದಲ್ಲಿ ಲೀಟರಿಗೆ ರೂ.11.77 ಹೆಚ್ಚಳವಾಗಿದ್ದರೆ, ಡೀಸೆಲ್ ಮೇಲೆ ರೂ.13.57 ಏರಿಕೆಯಾಗಿದೆ.

ಈ ಏರಿಕೆಗಳು ಅಂತರ್ರಾಷ್ಟ್ರೀಯ ತೈಲ ಬೆಲೆಗಳಲ್ಲಿ ಭಾರೀ ಇಳಿಕೆಯಗಿರುವ ಹಿನ್ನೆಲೆಯಲ್ಲಿ ಬಂದಿವೆ. ಜುಲೈ2014ರಿಂದ ಜನವರಿ 2016ರ ನಡುವೆ ಅಂತರ್ರಾಷ್ಟ್ರೀಯ ತೈಲ ಬೆಲೆಗಳಲ್ಲಿ 75ಶೇ. ದಷ್ಟು ಇಳಿಕೆಯಾಗಿದೆ. ಭಾರತ ತನ್ನ ಇಂಧನದ ಆವಶ್ಯಕತೆಗಳಿಗಾಗಿ 80ಶೇ.ದಷ್ಟು ಆಮದು ಮಾಡಿಕೊಳ್ಳುತ್ತಿರುವುದರಿಂದ ಭಾರತೀಯ ಬಳಕೆದಾರರು ಪೆಟ್ರೋಲ್ ಮತ್ತು ಡೀಸೆಲ್‌ಗೆ ತೆರಬೇಕಾದ ಚಿಲ್ಲರೆ ಬೆಲೆಗಳಲ್ಲಿ ಭಾರೀ ಇಳಿಕೆಯಾಗಬೇಕಿತ್ತು. ಆದರೆ ಹಾಗಾಗಿಲ್ಲ. ಭಾರತದ ಚಿಲ್ಲರೆ ಬೆಲೆಗಳು ಜಾಗತಿಕ ತೈಲ ಬೆಲೆಯ ದುಪ್ಪಟ್ಟು ಆಗಿದೆ.

ಇದಕ್ಕೆ ಕಾರಣ, ಮೋದಿ ಸರಕಾರ ತೈಲ ಬೆಲೆಗಳ ಇಳಿಕೆಗಳಲ್ಲಿ ಬಹುಭಾಗವನ್ನು ಅಬಕಾರಿ ಸುಂಕಗಳ ಏರಿಕೆಗಳ ಮೂಲಕ ಕಿತ್ತುಕೊಂಡು, ಅದರ ಪ್ರಯೋಜನ ಬಳಕೆದಾರರಿಗೆ ದಕ್ಕದಂತೆ ಮಾಡಿದೆ. ಈ ಹಣಕಾಸು ವರ್ಷದಲ್ಲಿ ಸರಕಾರ ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ಅಬಕಾರಿ ಸುಂಕಗಳ ಈ ಸತತ ಏರಿಕೆಗಳಿಂದ ರೂ.17,400 ಕೋಟಿ ಹೆಚ್ಚುವರಿ ಆದಾಯ ಪಡೆದಿದೆ ಎಂದು ಅಂದಾಜು ಮಾಡಲಾಗಿದೆ.

ಜಾಗತಿಕ ತೈಲ ಬೆಲೆಗಳಲ್ಲಿ ಇಳಿಕೆ ಆಗಲಾರಂಭಿಸಿದಂದಿನಿಂದ ಪೆಟ್ರೋಲ್ ಮತ್ತು ಡೀಸೆಲ್ ಚಿಲ್ಲರೆ ಬೆಲೆಗಳಲ್ಲಿ ಆಗಿರುವ ಇಳಿಕೆ ಬಹಳ ಅತ್ಯಲ್ಪ. ಪೆಟ್ರೋಲಿಯಂ ಉತ್ಪನ್ನಗಳ ಆಡಳಿತಾತ್ಮಕ ಬೆಲೆ ನಿಗದಿಯನ್ನು ತೆಗೆದು ಹಾಕಿದ ನಂತರ ಇವುಗಳ ಚಿಲ್ಲರೆ ಬೆಲೆಗಳು ಮಾರುಕಟ್ಟೆ ಬೆಲೆಗಳನ್ನು ಬಿಂಬಿಸುತ್ತವೆ ಎನ್ನಲಾಗಿತ್ತು. ಆದ-ರೆ ಅಬಕಾರಿ ಸುಂಕಗಳನ್ನು ಆಡಳಿತಾತ್ಮಕವಾಗಿ ಏರಿಸುತ್ತಿರುವುದರಿಂದಾಗಿ ತೈಲ ಬೆಲೆಗಳಲ್ಲಿ ಇಳಿಕೆಯ ಪ್ರಯೋಜನ ಸಾರ್ವಜನಿಕ ಮತ್ತು ಖಾಸಗೀ ಈ ಎರಡೂ ವಲಯಗಳ ತೈಲ ಮಾರಾಟ ಕಂಪನಿಗಳಿಗೆ ದಕ್ಕಿದೆ, ಅವುಗಳ ಲಾಭಾಂಶಗಳ ಪ್ರಮಾಣ ಹೆಚ್ಚಿದೆ, ಮತ್ತು ಸರಕಾರ ಹೆಚ್ಚುವರಿ ತೆರಿಗೆಗಳ ಮೂಲಕ ಸೆಳೆದುಕೊಂಡು ಪ್ರಯೋಜನ ಪಡೆದಿದೆ. ಇದೆಲ್ಲದರಲ್ಲಿ ಅತೀ ಹೆಚ್ಚು ತೊಂದರೆ ಅನುಭವಿಸುತ್ತಿರುವವರು ಜನಸಾಮಾನ್ಯರು.

ಜಾಗತಿಕ ಬೆಲೆಗಳಿಗೆ ಅನುಗುಣವಾಗಿ ಪೆಟ್ರೋಲ್ ಮತ್ತು ಡೀಸೆಲಿನ ಚಿಲ್ಲರೆ ಬೆಲೆಗಳೂ ಇಳಿದಿದ್ದರೆ ಅದು ಗಣದುಬ್ಬರ ಮತ್ತು ಬೆಲೆಏರಿಕೆಯ ಬಿಸಿಯನ್ನು ಶಮನ ಮಾಡಬಹುದಿತ್ತು. ಉದಾಹರಣೆಗೆ, ದಿಲ್ಲಿಯಲ್ಲಿ ಡೀಸೆಲ್ ಬೆಲೆ ಲೀಟರಿಗೆ ರೂ.44ರ ಬದಲಾಗಿ ರೂ.32 ಇರುತ್ತಿತ್ತು. ಇದು ಸಾಗಾಣಿಕೆ ವೆಚ್ಚಗಳನ್ನು ಇಳಿಸಿ ಆಹಾರಪದಾರ್ಥಗಳೂ ಸೇರಿದಂತೆ ಆವಶ್ಯಕ ವಸ್ತುಗಳ ಬೆಲೆಗಳನ್ನು ಇಳಿಸಲು ಅನುವು ಮಾಡಿ ಕೊಡಬಹುದಿತ್ತು.

ಆದರೆ ಸರಕಾರ, ಈ ರೀತಿಯಲ್ಲಿ ತೈಲ ಬೆಲೆ ಇಳಿಕೆಯ ಪ್ರಯೋಜನಗಳನ್ನು ಜನಸಾಮಾನ್ಯರಿಗೆ ತಲುಪಿಸುವ ಬದಲು, ತೆರಿಗೆ ಹೆಚ್ಚಳದ ಮೂಲಕ ತನ್ನ ಆದಾಯವನ್ನು ಹೆಚ್ಚಿಸಿಕೊಂಡು ತನ್ನ ಬಜೆಟ್ ಕೊರತೆಯನ್ನು ತುಂಬಲು ಬಳಸಿಕೊಂಡಿದೆ. ಪೆಟ್ರೋಲ್ ಚಿಲ್ಲರೆ ಬೆಲೆಗಳಲ್ಲಿ 57ಶೇ.ದಷ್ಟು ಮತ್ತು ಡೀಸೆಲ್ ಚಿಲ್ಲರೆ ಬೆಲೆಗಳಲ್ಲಿ 55ಶೇ.ದಷ್ಟು ತೆರಿಗೆಗಳೇ ಇವೆ ಎಂಬುದು ಅವು ಎಂತಹ ಅಸಮ ಹೊರೆಯನ್ನು ಹಾಕಿದೆ ಎಂಬುದನ್ನು ತೋರಿಸುತ್ತವೆ.

ಆಹಾರ ಪದಾರ್ಥಗಳ ಬೆಲೆಗಳು ನಾಗಾಲೋಟ ಹೂಡುತ್ತಿರುವಾಗ, ಸತತವಾಗಿ ಎರಡು ಬರದ ವರ್ಷಗಳಿಂದಾಗಿ ಆಹಾರ ಪದಾರ್ಥಗಳ ಬೆಲೆಗಳ ಮೇಲೆ ಇನ್ನಷ್ಟು ಒತ್ತಡ ಬೀಳುವ ಸಾಧ್ಯತೆ ಇರುವ ಸಮಯದಲ್ಲಿ ಜಾಗತಿಕ ತೈಲ ಬೆಲೆಗಳ ಇಳಿಕೆಯ ಪ್ರಯೋಜನವನ್ನು ತನಗೇ ಇಟ್ಟುಕೊಳ್ಳುವ ಸರಕಾರದ ಸ್ವಾರ್ಥದ ನಿಲುವು ಜನ-ವಿರೋಧಿ ಮತ್ತು ಮಂದದೃಷ್ಟಿಯ ಕ್ರಮ. ಕೇಂದ್ರ ಬಜೆಟನ್ನು ಸಲ್ಲಿಸುವ ಮೊದಲು ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಅಬಕಾರಿ ಸುಂಕಗಳಲ್ಲಿ ಸತತವಾಗಿ ಮಾಡಿರುವ ಏರಿಕೆಗಳನ್ನು ಹಿಂತೆಗೆದುಕೊಳ್ಳಬೇಕು, ಮತ್ತು ಸರಕಾರ ತನ್ನ ಆದಾಯ ಹೆಚ್ಚಿಸಿಕೊಳ್ಳಲು ಬೇರೆ ಮಾರ್ಗಗಳನ್ನು ಕಂಡುಕೊಳ್ಳಬೇಕು ಎಂಬ ಬಲವಾದ ಆಗ್ರಹ ಬರಬೇಕಾಗಿದೆ.

ಸರಕಾರದ ಆದಾಯಗಳ ಬಗ್ಗೆ ಹೇಳುವುದಾದರೆ, **ಕೇಂದ್ರದಲ್ಲಿ ಬಂದ ಸರಕಾರಗಳೆಲ್ಲವೂ ಕಾರ್ಪೊರೇಟ್‌ಗಳು ಮತ್ತು ಶ್ರೀಮಂತ ವ್ಯಕ್ತಿಗಳಿಗೆ ತೆರಿಗೆ ರಿಯಾಯ್ತಿಗಳನ್ನು, ವಿನಾಯ್ತಿಗಳನ್ನು ಕೊಡಮಾಡುತ್ತಲೇ ಬಂದಿವೆ. ಅಧಿಕೃತ ಅಂಕೆ-ಸಂಖ್ಯೆಗಳ ಪ್ರಕಾರ, 2014-15 ರ ಒಂದು ವರ್ಷದಲ್ಲೇ ತಾನು ವಸೂಲು ಮಾಡಬೇಕಾದ ರೂ.5.89ಲಕ್ಷ ಕೋಟಿ ರೂ.ಗಳಷ್ಟು ತೆರಿಗೆಗಳನ್ನು ಸರಕಾರ ಬಿಟ್ಟುಕೊಟ್ಟಿದೆ.** ಇವುಗಳಲ್ಲಿ ಬಹು ದೊಡ್ಡ ಪಾಲು ದೊಡ್ಡ ಕಂಪನಿಗಳಿಗೆ ಮತ್ತು ಉದ್ಯಮಿಗಳಿಗೆ ಪ್ರಯೋಜನ ಒದಗಿಸಿರುವಂತವುಗಳು.

ಸಾರ್ವಜನಿಕ ಹಣದ ದುಂದುವೆಚ್ಚದ ಇನ್ನೊಂದು ದಾರಿಯೆಂದರೆ, ರಾಷ್ಟ್ರೀಕೃತ ಬ್ಯಾಂಕುಗಳ 'ಕೆಟ್ಟ ಸಾಲ'ಗಳ ಮನ್ನಾ. 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿ-ಕೆಗೆ ಲಭ್ಯವಾದ ಇತ್ತೀಚಿನ ಮಾಹಿತಿಯ ಪ್ರಕಾರ 2013ರಿಂದ 2015ರ ವರೆಗಿನ ಹಣಕಾಸು ವರ್ಷಗಳಲ್ಲಿ 29 ಸರಕಾರೀ ಒಡೆತನದ ಬ್ಯಾಂಕುಗಳು ಒಟ್ಟು ರೂ. 1.14ಲಕ್ಷ ಕೋಟಿ ಮೊತ್ತದ ಸಾಲಗಳು ಇನ್ನು ಮರುಪಾವತಿಯಾಗುವುದಿಲ್ಲ ಎಂದು ದಾಖಲೆಗಳಿಂದ ತೆಗೆದು ಹಾಕಿವೆ. ಹೀಗೆ ಯಾವ ಕಂಪನಿಗಳ ಸಾಲಗಳು ಮರುಪಾವತಿಯಾಗಲಿಕಿಲ್ಲ ಎಂದು ಬಿಟ್ಟು ಬಿಡಲಾಗಿದೆ ಎಂಬುದರ ವಿವರಗಳನ್ನು ಬ್ಯಾಂಕುಗಳು ಕೊಟ್ಟಿಲ್ಲವಾದರೂ, ಈ ರೀತಿ ಮನ್ನಾ ಆಗುವ ಬಹುಪಾಲು 'ಕಾರ್ಯನಿರ್ವಹಿಸದ ಆಸ್ತಿಗಳು' (ನಾನ್ ಪರ್ಫೋರ್ಮಿಂಗ್ ಅಸೆಟ್ಸ್) ದೊಡ್ಡ ಕಂಪನಿಗಳು ಮತ್ತು ಬಂಡವಾಳಶಾಹಿಗಳದ್ದು ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿ.

ಹಣಕಾಸು ಮಂತ್ರಿಗಳಿಗೆ ಹಣಕಾಸು ಕೊರತೆಯನ್ನು ತುಂಬಲು ಆದಾಯಗಳನ್ನು ಹೆಚ್ಚಿಸಬೇಕೆಂದಿದ್ದರೆ, ಕಾರ್ಪೊರೇಟ್‌ಗಳಿಗೆ ಮತ್ತು ಶ್ರೀಮಂತ ವಿಭಾಗಗಳಿಗೆ ತೆರಿಗೆ ವಿನಾಯ್ತಿಗಳು ಮತ್ತು ರಿಯಾಯ್ತಿಗಳನ್ನು ಕೊನೆಗೊಳಿಸಬೇಕು, ಕಂಪನಿಗಳು ಮತ್ತು ಶ್ರೀಮಂತರ ಸಾಲಗಳನ್ನು ವಸೂಲು ಮಾಡಬೇಕೇ ಹೊರತು, ಪೆಟ್ರೋಲ್, ಡೀಸೆಲ್ ಚಿಲ್ಲರೆ ಬೆಲೆಗಳ ಮೇಲೆ ತೆರಿಗೆಗಳನ್ನು ಸೇರಿಸಿ ಜನತೆಯ ಮೇಲಿನ ಹೊರೆ ಹೆಚ್ಚಿಸುವುದಲ್ಲ.


○

ಅಬಕಾರಿ ಸುಂಕಗಳ(ಪ್ರತಿ ಲೀಟರಿಗೆ) ಏರಿಕೆ, ಸರಕಾರಕ್ಕೆ ಆದಾಯ(ಕೋಟಿ ರೂ.ಗಳಲ್ಲಿ)

	ಪೆಟ್ರೋಲ್	ಡೀಸೆಲ್	ಆದಾಯ
ನವಂಬರ್ 13, 2014	1.50	1.50	6000
ಡಿಸೆಂಬರ್ 2, 2014	2.25	1.00	4000
ಜನವರಿ 1, 2015	2.00	2.00	7000
ಜನವರಿ 16, 2015	2.00	2.00	5500
ನವಂಬರ್ 7, 2015	1.60	0.40	3200
ಡಿಸೆಂಬರ್ 16, 2015	0.30	1.17	2500
ಜನವರಿ 1, 2016	0.37	2.00	4400
ಜನವರಿ 15, 2016	0.75	2.00	3700
ಜನವರಿ 30, 2016	1.00	1.50	3200
ಒಟ್ಟು	11.77	13.57	39500

ಪೆಟ್ರೋಲ್/ಡೀಸೆಲ್ ಬೆಲೆಗಳು (ರೂ. ಪ್ರತಿ ಲೀಟರಿಗೆ), ಕಚ್ಚಾತೈಲ ಬೆಲೆ (ಡಾಲರು ಪ್ರತಿ ಬ್ಯಾರೆಲ್‌ಗೆ)

ದಿನಾಂಕ	ಪೆಟ್ರೋಲ್	ಡೀಸೆಲ್	ಕಚ್ಚಾತೈಲ
ಮೇ 13,, 2014	78.27	61.33	101.70
ಜುಲೈ01, 2014	80.68	62.85	105.34
ಅಕ್ಟೋಬರ್ 01, 2014	74.42	64.07	90.73
ಜನವರಿ 18, 2015	64.72	52.49	48.85
ಏಪ್ರಿಲ್ 02, 2015	66.05	53.15	49.14
ಜೂನ್ 16, 2015	73.77	55.83	59.97
ಸಪ್ಟಂಬರ್ 01, 2015	64.61	47.02	45.41
ಡಿಸೆಂಬರ್ 16, 2015	63.38	48.80	35.52
ಜನವರಿ 1, 2016	62.71	47.69	32.90
ಜನವರಿ 15, 2016	62.38	46.80	26.40
ಫೆಬ್ರುವರಿ 1, 2016	62.33	46.75	31.63



ವ್ಯಂಗ್ಯಚಿತ್ರ: ಅಧ್ವರ್ಯು, ಡೆಕ್ಕನ್ ಕ್ರಾನಿಕಲ್

ಮೂರೇ ವರ್ಷಗಳಲ್ಲಿ ಬಂಡವಳಿಗರ 1.14ಲಕ್ಷ ಕೋಟಿ ರೂ.ಗಳ ಸಾಲಮನ್ನಾ!

2013ರಿಂದ 2015ರ ವರೆಗಿನ ಹಣಕಾಸು ವರ್ಷಗಳಲ್ಲಿ 29 ಸರಕಾರೀ ಒಡೆತನದ ಬ್ಯಾಂಕುಗಳು ಒಟ್ಟು ರೂ. 1.14ಲಕ್ಷ ಕೋಟಿ ಮೊತ್ತದ 'ಕೆಟ್ಟ ಸಾಲ'ಗಳು ಅಂದರೆ ಮರುಪಾವತಿ ನಿಂತು ಹೋಗಿರುವ ಸಾಲಗಳನ್ನು, ಇನ್ನು ಮರುಪಾವತಿಯಾಗುವುದಿಲ್ಲ ಎಂದು ದಾಖಲೆಗಳಿಂದ ತೆಗೆದು ಹಾಕಿವೆ. ಈ ಮಾಹಿತಿಯನ್ನು 'ಇಂಡಿಯನ್ ಎಕ್ಸ್‌ಪ್ರೆಸ್ ದೈನಿಕ ಮಾಹಿತಿ ಹಕ್ಕು ಕಾನೂನಿನ ಅಡಿಯಲ್ಲಿ ಪಡೆದಿದೆ. ಈ ಸಿರಿವಂತರ ಸಾಲಮನ್ನಾದ ಪ್ರಮುಖ ಫಲಾನುಭವಿಗಳು ಯಾರು ಎಂಬ ಮಾಹಿತಿ ಮಾತ್ರ ಅದಕ್ಕೆ ದೊರೆತಿಲ್ಲ. ಬ್ಯಾಂಕುಗಳು ಒಟ್ಟುಸುಸ್ತಿ ಸಾಲಗಳ ಮೊತ್ತವನ್ನಷ್ಟೇ ಕೊಡುತ್ತವೆ ಎಂದು ರಿಝರ್ವ್ ಬ್ಯಾಂಕ್ ಹೇಳಿದೆ. ಆದರೆ ಬಹುಪಾಲು 'ಕಾರ್ಯನಿರ್ವಹಿಸದ ಆಸ್ತಿಗಳು' (ನಾನ್ ಪರ್ಫೋರ್ಮಿಂಗ್ ಅಸೆಟ್ಸ್) ದೊಡ್ಡ ಕಂಪನಿಗಳು ಮತ್ತು ಬಂಡವವಳಿಗರದ್ದು ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿ.

ಮಾರ್ಚ್2012ರ ಹಣಕಾಸು ವರ್ಷ ಕೊನೆಗೊಂಡಾಗ 'ಕೆಟ್ಟ ಸಾಲ'(ಮರುಪಾವತಿಯಾಗುವ ಲಕ್ಷಣಗಳಿಲ್ಲದ ಸಾಲಗಳ ಮೊತ್ತ 15,551 ಕೋಟಿ ರೂ.ಗಳಿತ್ತು. ಮಾರ್ಚ್2015 ರ ವೇಳೆಗೆ ಅದು 52,542 ಕೋಟಿ ರೂ.ಗಳಾಗಿತ್ತು.

2004ರಿಂದ 2015ರ ನಡುವೆ ಮರುಪಾವತಿಯ ನಿರೀಕ್ಷೆಯನ್ನೇ ಕೈಬಿಟ್ಟು ದಾಖಲೆಗಳಿಂದ ತೆಗೆದ ಸಾಲಗಳ ಮೊತ್ತ ರೂ. 2.11ಲಕ್ಷ ಕೋಟಿ ರೂ. ಇದರಲ್ಲಿ ಅರ್ಧಕ್ಕಿಂತಲೂ ಹೆಚ್ಚು, ಅಂದರೆ ಮೇಲೆ ಹೇಳಿದ 1.14ಲಕ್ಷ ಕೋಟಿರೂ. ಕೇವಲ ಕಳೆದ ಮೂರು ವರ್ಷಗಳಲ್ಲೆ ಸುಮಾರಾಗಿ ಮನ್ನಾವೇ ಆಗಿ ಬಿಟ್ಟಿವೆ.

20024ರಿಂದ 2012ರ ನಡುವೆ 'ಕೆಟ್ಟ ಸಾಲ'ಗಳ ಪ್ರಮಾಣ 4ಶೇ.ದಲ್ಲಿ ಏರಿದರೆ, 2013 ರಿಂದ 2015ರಲ್ಲಿ ಅದು ಸುಮಾರು 60ಶೇ.ದರದಲ್ಲಿ ಏರಿತು.

2009ರಿಂದ ,ಅಂದರೆ ಎಡಪಕ್ಷಗಳ ಬೆಂಬಲ ಬೇಕಿಲ್ಲದ ಯುಪಿಎ-2 ಸರಕಾರದ ಅವಧಿ ಆರಂಭವಾದಂದಿನಿಂದ ಅದರ ಅಧಿಕಾರಾವಧಿ ಮುಗಿಯುತ್ತಾ ಬರುವ ವೇಳೆಗೆ ಸಿರಿವಂತ ವ್ಯಕ್ತಿಗಳಿಗೆ ಮತ್ತು ವ್ಯವಹಾರಗಳಿಗೆ ನೀಡಿದ ಸಾಲಗಳ ಪ್ರಮಾಣ ಮತ್ತು 'ಕೆಟ್ಟ ಸಾಲ'ಗಳಾದ ಪ್ರಮಾಣ ಕೂಡ ದ್ವಿಗುಣಗೊಂಡಿತು.

ಇದರಲ್ಲಿ ಅತಿ ದೊಡ್ಡ ಪಾಲು ಸ್ಟೇಟ್ ಬ್ಯಾಂಕ್ ಆಫ್ ಇಂಡಿ-ಯಾದ್ದು. ಮೋದಿ ಸರಕಾರ ಬಂದ ಮೇಲೆ ಇದೇ ಬ್ಯಾಂಕ್ ತಾನೇ ಅವರ ಗುಜರಾತದ ಉದ್ಯಮಿ ಅದಾನಿಗೆ ದೊಡ್ಡ ಮೊತ್ತದ ಸಾಲ ಕೊಡಲು ಮುಂದಾದದ್ದು?

ಈ ಸರಕಾರ ಬಂದ ಮೇಲೆ ಸಾರ್ವಜನಿಕ ವಲಯದ ಬ್ಯಾಂಕುಗಳ 'ಕಾರ್ಯನಿರ್ವಹಿಸದ ಆಸ್ತಿ'ಗಳ ಪ್ರಮಾಣ ಮಾರ್ಚ್ 2015ರಲ್ಲಿ ಒಟ್ಟು ಸಾಲದ 5.20ಶೇ. ಇದ್ದದ್ದು, ಜೂನ್ 2015ರ ವೇಳೆಗೆ 6.03ಶೇ.ಕ್ಕೇ ಏರಿತ್ತು. ನವ-ಉದಾರವಾದಿ ಧೋರಣೆಗಳ ವೇಗ ಹೆಚ್ಚಿದಂತೆ ಬಂಡವಳಿಗರ ಸುಸಿತ ಸಾಲಗಳ ವೇಗವೂ ಹೆಚ್ಚ ಬೇಕಲ್ಲವೇ?

ಚುನಾವಣಾ ಪ್ರಚಾರ

ಮೊದಲ ಹಂತದಲ್ಲಿ (ಫೆ. 13) ಚುನಾವಣೆ ನಡೆಯುವ ಕ್ಷೇತ್ರಗಳಲ್ಲಿ ಭರದಿಂದ

ಪ್ರಚಾರ ನಡೆಯುತ್ತಿದ್ದು, ಸಿಪಿಐ(ಎಂ) ಅಭ್ಯರ್ಥಿಗಳ ಚುನಾವಣಾ ಪ್ರಚಾರದ ಕಿರು ಚಿತ್ರಣ ಇಲ್ಲಿದೆ.

ಚಿಕ್ಕಬಳ್ಳಾಪುರ



ಚಿಕ್ಕಬಳ್ಳಾಪುರ ಜಿಲ್ಲೆಯ 13 ಜಿ.ಪಂ. ಹಾಗೂ 34 ತಾ.ಪಂ. ಕ್ಷೇತ್ರಗಳಲ್ಲಿ ಚುನಾವಣೆಗೆ ಸ್ಪರ್ಧಿಸಿರುವ ಸಿಪಿಐ(ಎಂ) ಅಭ್ಯರ್ಥಿಗಳು ಹಳ್ಳಿ ಹಳ್ಳಿಗೂ ತೆರಳಿ ಪ್ರಚಾರದಲ್ಲಿ ತೊಡಗಿದ್ದಾರೆ. ಪಕ್ಷದ ಕಾರ್ಯಕರ್ತರು ಹಾಗೂ ಜನತೆ ಪಕ್ಷದ ಅಭ್ಯರ್ಥಿಗಳ ಗೆಲುವಿಗಾಗಿ ಶ್ರಮಿಸುತ್ತಿದ್ದಾರೆ. ಜನತೆ ಸಮಸ್ಯೆಗಳಾದ ಕುಡಿಯುವ ನೀರು, ಬೆಲೆ ಏರಿಕೆ, ನಿವೇಶನ, ರೈತರಿಗೆ ಕನಿಷ್ಠ ಬೆಂಬಲ ಬೆಲೆಗಾಗಿ, ನೀರಾವರಿ ಸೇರಿದಂತೆ ಇನ್ನೂ ಹಲವು ಪ್ರಶ್ನೆಗಳನ್ನು ತೆಗೆದುಕೊಂಡ ಅಭ್ಯರ್ಥಿಗಳು ಚುನಾವಣಾ ಪ್ರಚಾರ ನಡೆಸುವ ಮೂಲಕ ಆಳುವ ಸರ್ಕಾರಗಳ ಜನ ವಿರೋಧಿ ನೀತಿಗಳನ್ನು ಜನತೆಗೆ ತಿಳಿಸುತ್ತಿದ್ದಾರೆ.

ಮನೆ ಮನೆಗೆ ತೆರಳುತ್ತಾ ಮತದಾರರನ್ನು ಭೇಟಿ ಮಾಡಲಾಗುತ್ತಿದ್ದು, ಅದೇ ರೀತಿಯಲ್ಲಿ ಕಾರ್ಯಕರ್ತರ ಸಭೆಗಳು, ಬೀದಿ ಬದಿ ಸಭೆಗಳು, ಸಾರ್ವಜನಿಕ ಸಭೆಗಳನ್ನು ಸಹ ನಡೆಸಲಾಗುತ್ತಿದೆ. ಪ್ರಚಾರದಲ್ಲಿ ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಹಾಗೂ ಬಾಗೇಪಲ್ಲಿ ಕ್ಷೇತ್ರದ ಮಾಜಿ ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿ, ಜಿಲ್ಲಾ ಕಾರ್ಯದರ್ಶಿ ಮುನಿವೆಂಕಟಪ್ಪ ಸೇರಿದಂತೆ ಹಲವು ಮುಖಂಡರು ಪ್ರಚಾರದಲ್ಲಿ ನಿರತರಾಗಿದ್ದಾರೆ.

ಬೆಂಗಳೂರು ನಗರ



ಬೆಂಗಳೂರಿನ ಆನೇಕಲ್ ಪ್ರದೇಶ ಸಮಂದೂರು ಜಿಲ್ಲಾ ಪಂಚಾಯತಿ ಕ್ಷೇತ್ರ ವ್ಯಾಪ್ತಿಯಲ್ಲಿ ಸಿಪಿಐ(ಎಂ) ಪಕ್ಷದ ಚುನಾವಣಾ ಪ್ರಚಾರದ ಭಾಗವಾಗಿ ಜಿ.ಪಂ. ಅಭ್ಯರ್ಥಿ ಮಧುರಾಜ್, ತಾ.ಪಂ. ಅಭ್ಯರ್ಥಿ ಶಿವರಾಜ್, ಮಯಸಂದ್ರ ತಾ.ಪಂ. ಅಭ್ಯರ್ಥಿ ಅರ್ಚನ ರವರು ಕ್ಷೇತ್ರದ ಮತದಾರರನ್ನು ಭೇಟಿ ಮಾಡಿ ಜನತೆಯ ಪ್ರಶ್ನೆಗಳ ಪರಿಹಾರಕ್ಕಾಗಿ ಮತ ನೀಡಿ ಗೆಲ್ಲಿಸಬೇಕೆಂದು ಪ್ರಚಾರದಲ್ಲಿ ತೊಡಗಿದರು. ಸಿಪಿಐ(ಎಂ) ಪಕ್ಷದ ಕಾರ್ಯಕರ್ತರು ಉತ್ಸಾಹದಿಂದ ಅಭ್ಯರ್ಥಿಗಳ ಜೊತೆಯಲ್ಲಿ ಪ್ರಚಾರದಲ್ಲಿ ನಿರತರಾಗಿದ್ದಾರೆ.

ಪ್ರಚಾರದ ಭಾಗವಾಗಿ ಕ್ಷೇತ್ರದಲ್ಲಿ ಬೈಕ್ ರ್‍ಯಾಲಿ ನಡೆಸಿದ್ದಾರೆ. ಮನೆ ಮನೆ ತೆರಳುತ್ತಿರುವ ಅಭ್ಯರ್ಥಿಗಳು ಪ್ರತಿ ಮತದಾರರನ್ನು ಭೇಟಿ ಮಾಡುತ್ತಿದ್ದಾರೆ. ಪ್ರಚಾರದಲ್ಲಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಕೆ.ಎನ್.ಉಮೇಶ್, ಜಿಲ್ಲಾ ಮುಖಂಡರಾದ ಬಿ.ಎನ್.ಮಂಜುನಾಥ್, ಮಹದೇಶ್, ಮುಂತಾದವರು ಭಾಗವಹಿಸಿದ್ದಾರೆ.

ತುಮಕೂರು

ತುಮಕೂರಿನ ಪಾವಗಡ ತಾಲ್ಲೂಕಿನ ಅರಸಿಕೆರೆ ಕ್ಷೇತ್ರದಲ್ಲಿ ತಾಲೂಕು ಪಂಚಾಯತಿಗೆ ಸ್ಪರ್ಧಿಸಿರುವ ವೆಂಕಟರವಣಪ್ಪ ಅವರು ಕ್ಷೇತ್ರದಲ್ಲಿ



ಪ್ರಚಾರದಲ್ಲಿ ನಿರತರಾಗಿದ್ದು ಕಾರ್ಯಕರ್ತರ ಜತೆ ಜನರನ್ನು ಭೇಟಿ ಮಾಡುತ್ತಿದ್ದಾರೆ. ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಎನ್.ಕೆ.ಸುಬ್ರಮಣ್ಯ ಸೇರಿದಂತೆ ಹಲವು ಮುಖಂಡರು ಭಾಗವಹಿಸಿದ್ದಾರೆ.

ಕೋಲಾರ



ಕೋಲಾರದ ಹಲವು ಕ್ಷೇತ್ರಗಳಲ್ಲಿ ಸಿಪಿಐ(ಎಂ) ಪಕ್ಷದ ಅಭ್ಯರ್ಥಿಗಳ ಪರವಾಗಿ ನೂರಾರು ಕಾರ್ಯಕರ್ತರು ಚುನಾವಣಾ ಪ್ರಚಾರದಲ್ಲಿ ನಿರತರಾಗಿದ್ದಾರೆ. 16 ತಾಲ್ಲೂಕು ಪಂಚಾಯತಿ ಹಾಗೂ 5 ಜಿಲ್ಲಾ ಪಂಚಾಯತಿ ಕ್ಷೇತ್ರದಲ್ಲಿನ ಮನೆ ಮನೆ ಪ್ರಚಾರದ ಜೊತೆಯಲ್ಲಿ ರೋಡ್ ಶೋ ನಡೆಸುವ ಮೂಲಕ ಮತದಾರರನ್ನು ಭೇಟಿ ಮಾಡುತ್ತಿದ್ದಾರೆ. ಕ್ಷೇತ್ರದ ಸಮಸ್ಯೆಗಳ ಬಗ್ಗೆ ಮತದಾರರಲ್ಲಿ ಮನವರಿಕೆ ಮಾಡಿಕೊಟ್ಟು ಗೆದ್ದ ಪ್ರತಿನಿಧಿಗಳು ಸಮರ್ಪಕವಾಗಿ ಕೆಲಸವನ್ನು ನಿರ್ವಹಿಸದೆ ಇನ್ನೂ ಹಲವು ಸಮಸ್ಯೆಗಳು ಹಾಗೇ ಉಳಿದಿರುವುದನ್ನು ತಿಳಿಸಲಾಗುತ್ತಿದೆ. ಸಮಸ್ಯೆಗಳ ಪರಿಹಾರಕ್ಕಾಗಿ, ಪ್ರಾಮಾಣಿಕವಾಗಿ ಜನತೆಯ ಕೆಲಸ ಮಾಡಲು ಸಿಪಿಐ(ಎಂ) ಪಕ್ಷವನ್ನು ಗೆಲ್ಲಿಸಬೇಕೆಂದು ಮನವಿ ಮಾಡಲಾಗುತ್ತಿದೆ. ಪ್ರಚಾರದಲ್ಲಿ ಜಿ.ಸಿ.ಬಯ್ಯಾರೆಡ್ಡಿ, ಗಾಂಧಿನಗರ ನಾರಾಯಣಸ್ವಾಮಿ, ವಿ.ಗೀತಾ ಸೇರಿದಂತೆ ಹಲವು ಮುಖಂಡರು ಭಾಗವಹಿಸಿದ್ದಾರೆ.

ಉತ್ತರ ಕನ್ನಡ

ಉತ್ತರ ಕನ್ನಡ ಜಿಲ್ಲೆಯಲ್ಲಿ 5 ಜಿಲ್ಲಾ ಪಂಚಾಯತಿ ಹಾಗೂ 1 ತಾಲ್ಲೂಕು ಪಂಚಾಯತಿ ಕ್ಷೇತ್ರಗಳಲ್ಲಿ ಸ್ಪರ್ಧಿಸಿರುವ ಪಕ್ಷದ ಅಭ್ಯರ್ಥಿಗಳ ಪರವಾಗಿ ಪ್ರಚಾರ ನಡೆಸಲಾಗುತ್ತಿದೆ. ಕ್ಷೇತ್ರದ ನಿರ್ದಿಷ್ಟ ಸಮಸ್ಯೆಗಳ ಪರಿಹಾರಕ್ಕಾಗಿ, ತೊಡಗಿರುವ ಅಭ್ಯರ್ಥಿಗಳು. ಬುಡಕಟ್ಟು ಪ್ರದೇಶಗಳು ಹೆಚ್ಚಾಗಿರುವ ಈ ಕ್ಷೇತ್ರಗಳಲ್ಲಿ ಅಭಿವೃದ್ಧಿ ಕಾಣದ ಪ್ರದೇಶಗಳು ಹೆಚ್ಚಾಗಿದೆ. ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷದ ಮುಖಂಡರು ಕೇವಲ ಚುನಾವಣೆ ಸಂದರ್ಭದಲ್ಲಿ ಮಾತ್ರ ಆಶ್ವಾಸನೆಗಳನ್ನು ನೀಡುತ್ತಾರೆ ವಿನಃ ಪರಿಹಾರವನ್ನು ಮಾಡುವುದಿಲ್ಲ ಎಂದು ಜನತೆಗೆ ಮನವರಿಕೆ ಮಾಡುತ್ತಿದ್ದಾರೆ.



ಗೆದ್ದರೆ ಮಾತ್ರ ಕೆಲಸ ಮಾಡುತ್ತೇವೆ ಎನ್ನುವ ಸಚಿವ ದೇಶಪಾಂಡೆ

ರಾಜ್ಯದಲ್ಲಿ ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯತಿ ಚುನಾವಣೆಗಳು ಪ್ರಾರಂಭವಾಗಿದ್ದು ಎರಡು ಹಂತಗಳಲ್ಲಿ ಚುನಾವಣೆ ನಡೆಯುತ್ತಿದೆ. ಎಲ್ಲಾ ರಾಜಕೀಯ ಪಕ್ಷಗಳು ಚುನಾವಣಾ ಪ್ರಚಾರದಲ್ಲಿ ಭಾಗಿಯಾಗಿದ್ದು ಗೆಲ್ಲಲೇ ಬೇಕೆಂದು ಹಲವು ತಂತ್ರಗಳನ್ನು ಅನುಸರಿಸುತ್ತಿದ್ದಾರೆ. ಉತ್ತರ ಕನ್ನಡ ಜಿಲ್ಲೆಯ ರಾಜ್ಯದ ಕಾಂಗ್ರೆಸ್ ಸರ್ಕಾರದ ಉಸ್ತುವಾರಿ ಸಚಿವರಾದ ಆರ್.ವಿ.ದೇಶಪಾಂಡೆರವರು "ಪರೀಕ್ಷೆಗೆ ಕುಳಿತಿದ್ದೇವೆ, ಪಾಸು ಮಾಡದೇ ಇದ್ದಲ್ಲಿ ಕೆಲಸ ಮಾಡೋಲ್ಲ" ಎಂದು ಹೇಳುತ್ತಾರೆ.

ಇದರ ಬಗ್ಗೆ ಪ್ರತಿಕ್ರಿಯಿಸಿದ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಯಮುನಾ ಗಾಂವ್ಕರ್‌ರವರು "ಈ ರೀತಿ ಮತದಾರರಿಗೆ ಹೆದರಿಸುವುದು ಸರಿಯಲ್ಲ, ಜನತೆಯ ಕೆಲಸ ಮಾಡುವುದು ಜನರು ಆಯ್ಕೆ ಮಾಡುವ ಸರ್ಕಾರಗಳಿಂದ ಆದರೆ ಆಳುವ ಸರ್ಕಾರಗಳೇ ಈ ರೀತಿ ಹೇಳುತ್ತಾರೆ. ಅನುದಾನದ ಹಣ ಬಿಡುಗಡೆಯಾಗುವುದು. ಇವರ ಸ್ವಂತ ಹಣವಲ್ಲ, ಜನತೆಯ ಹಣವೇ. ಈ ಹಿಂದೆಯೂ ಸಹ ಚುನಾವಣಾ ಪ್ರಚಾರದಲ್ಲಿ ಇದೇ ರೀತಿಯಲ್ಲಿ ಗೆಲ್ಲಿಸದಿದ್ದರೆ ಕೆಲಸ ಮಾಡುವುದಿಲ್ಲ ಎಂದು ಹೇಳಿದ್ದರು. ಆಗಲೂ ಜಿಲ್ಲೆಯ ಜನತೆಯಿಂದ ವಿರೋಧ ಬಂದಿತ್ತು." ಎಂದು ಹೇಳಿದ್ದಾರೆ

ಉತ್ತರ ಕನ್ನಡ ಜಿಲ್ಲೆಯನ್ನು ದೇಶದ ನಂಬರ್ ಒನ್ ಜಿಲ್ಲೆಯನ್ನಾಗಿ ಮಾಡುವ ಇವರ ಅಭಿಲಾಷೆಗಳು ಕೇವಲ ಚುನಾವಣೆಯಲ್ಲಿ ಮಾತ್ರ ನೆನಪಿಗೆ ಬರುತ್ತದೆ. ಸಿಪಿಐ(ಎಂ)ನಿಂದ ಸ್ಥಳೀಯ ಸಮಸ್ಯೆಗಳ ಪರಿಹಾರಕ್ಕಾಗಿ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತಿ ಚುನಾವಣೆ ಸ್ಪರ್ಧಿಸಿರುವ ಅಭ್ಯರ್ಥಿಗಳು ಪ್ರಚಾರದಲ್ಲಿ ತೊಡಗಿದರೆ, ಆಳುವ ಸರ್ಕಾರದ ಪ್ರತಿನಿಧಿಗಳು ಪ್ರಚಾರ ಸಭೆಗಳಲ್ಲಿ ಚುನಾವಣಾ ಸಂದರ್ಭಕ್ಕೆ ಬೇಕಾದ ಮಾತುಗಳನ್ನು ಆಡುತ್ತಾರೆ ಎಂದಿದ್ದಾರೆ ಯಮುನಾ ಗಾಂವ್ಕರ್.

ಗದಗ

ಗದಗ ಜಿಲ್ಲೆಯ 2 ತಾಲ್ಲೂಕು ಪಂಚಾಯತಿ ಹಾಗೂ 2 ಜಿಲ್ಲಾ ಪಂಚಾಯತಿ ಕ್ಷೇತ್ರಗಳಲ್ಲಿ ಸಿಪಿಐ(ಎಂ) ಪ್ರಚಾರದ ಅತ್ಯಂತ ಉತ್ಸಾಹದಿಂದ ನಡೆದಿದ್ದು, ನಿಡಗುಂದಿ ಜಿಲ್ಲಾ ಪಂಚಾಯತಿ ಅಭ್ಯರ್ಥಿ ಕರಿಯವ್ವ ಮಹಾದೇವಪ್ಪ ಗುರಿಕಾರ ಹಾಗೂ ಗೋಗೇರಿ ತಾಲೂಕಾ ಪಂಚಾಯತ್ ಅಭ್ಯರ್ಥಿ ರೇಣವ್ವ ಹನಮಂತಪ್ಪ ಚವ್ಹಾಣ, ಬೆಳವಣಿಕೆ ಜಿಲ್ಲಾ ಪಂಚಾಯತಿಯ ಮಹೇಶ ಹಿರೇಮಠ, ಬೆಳವಣಿಕೆ ತಾ.ಪಂ. ಅಭ್ಯರ್ಥಿ ವಸವರಾಜ ಮಂತೂರ ಸೇರಿದಂತೆ ಚುನಾವಣಾ ಪ್ರಚಾರದ ಭಾಗವಾಗಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾ॥ನಿತ್ಯಾನಂದಸ್ವಾಮಿ ಅವರು ಭಾಗವಹಿಸಿದ್ದರು.

ಜನತೆಗೆ ಕೊಟ್ಟ ಮಾತನ್ನು ಈಡೇರಿಸುವಲ್ಲಿ ಸತತವಾಗಿ ವಿಫಲವಾಗಿರುವ ಕಾಂಗ್ರೆಸ್, ಬಿಜೆಪಿಯಂತಹ ಪಕ್ಷಗಳ ಬಗ್ಗೆ ಜನರಲ್ಲಿ ಬೇಸರ ವ್ಯಾಪಿಸುತ್ತಿದ್ದು ಜನತ ಪರ್ಯಾಯಕ್ಕಾಗಿ ಹಾತೊರೆಯುತ್ತಿದೆ. ಜನತೆಯನ್ನು ಅವರ ಬೇಡಿಕೆಗಳ ಆಧಾರದಲ್ಲಿ ಸಂಘಟಿಸಿ ಅವರ ಹೋರಾಟಗಳಿಗೆ ನೇತೃತ್ವ ಕೊಡುವ ಸಿಪಿಐ(ಎಂ) ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಿದರೆ ರೈತ ಕಾರ್ಮಿಕರ, ದೀನ ದಲಿತರ, ಹೋರಾಟ ಬಲಗೊಳ್ಳುತ್ತದೆ. ಶೋಷಿತರು, ಅನ್ಯಾಯಕ್ಕೆ ಗುರಿಯಾದವರು ಹೋರಾಟಗಳಿಂದ ಮಾತ್ರ ನ್ಯಾಯ ಪಡೆಯಲು ಸಾಧ್ಯವಿದೆ.



ಸರಕಾರಿ ಭೂಮಿ ಸಾಗುವಳಿ ಸಕ್ರಮಕ್ಕಾಗಿ, ಮನೆ ಇಲ್ಲದ ಬಡವರಿಗೆ ನಿವೇಶನ ವಿತರಿಸಲು, ಸಮರ್ಪಕ ಪಡಿತರ ವ್ಯವಸ್ಥೆಗಾಗಿ, ಮಹಾತ್ಮ ಉದ್ಯೋಗ ಖಾತ್ರಿ ಯೋಜನೆ ಸಮರ್ಪಕ ಜಾರಿಗಾಗಿ, ಕುಡಿಯುವ ನೀರು, ಬರಗಾಲ ಪರಿಹಾರಕ್ಕಾಗಿ, ದನಕರುಗಳಿಗೆ ಮೇವು, ಬಡವರಿಗೆ ಕೈಗೆಟುಕುವ ದರಗಳಲ್ಲಿ ಶಿಕ್ಷಣ ಮತ್ತು ಆರೋಗ್ಯಕ್ಕಾಗಿ, ಭ್ರಷ್ಟಾಚಾರ ವಿರುದ್ಧ ಹೋರಾಡಲು ಜನಪರ ಹೋರಾಟಗಳಿಗೆ ಬದ್ಧರಾದ ಸಿಪಿಐ(ಎಂ)ನ ಅಭ್ಯರ್ಥಿಗಳಿಗೆ ಮತ ನೀಡಬೇಕು ಎಂದು ಅವರು ಮನವಿ ಮಾಡಿದರು.

ಮನೆ ಮನೆ ಪ್ರಚಾರ, ವಾಹನ ಜಾಥಾ ಸೇರಿದಂತೆ ಹಲವು ರೀತಿಯ ಪ್ರಚಾರದಲ್ಲಿ ತೊಡಗಿಕೊಂಡಿದ್ದಾರೆ.

ಎರಡನೇ ಸುತ್ತಿನ ಪಂಚಾಯತಿ ಚುನಾವಣೆ – ಸಿಪಿಐ(ಎಂ) ಸ್ಪರ್ಧೆ

ಫೆಬ್ರುವರಿ 20 ರಂದು ಎರಡನೇ ಹಂತದ ಜಿಲ್ಲಾ ಮತ್ತು ತಾಲೂಕು ಪಂಚಾಯತ್ ಚುನಾವಣೆಗಳು ನಡೆಯಲಿದ್ದು, ಸಿಪಿಐ(ಎಂ) ಒಟ್ಟು 31 ಜಿಲ್ಲಾ ಪಂಚಾಯತ್ ಮತ್ತು 75 ತಾಲೂಕು ಪಂಚಾಯತ್ ಕ್ಷೇತ್ರಗಳಲ್ಲಿ ಸ್ಪರ್ಧಿಸಲಿದೆ. ಎರಡನೇ ಹಂತದಲ್ಲಿ (ಫೆಬ್ರವರಿ 20ರಂದು) ಮತದಾನ ನಡೆಯುವ ಜಿಲ್ಲೆಗಳ ಒಟ್ಟು ಕ್ಷೇತ್ರಗಳ ಸಂಖ್ಯೆ ಮತ್ತು ಸಿಪಿಐ(ಎಂ) ಸ್ಪರ್ಧಿಸಲಿರುವ ಕ್ಷೇತ್ರಗಳ ಸಂಖ್ಯೆ, ಹೆಸರು, ಸ್ಪರ್ಧಿಗಳ ಹೆಸರು ಇತ್ಯಾದಿ ವಿವರಗಳು ಇಲ್ಲಿವೆ. ಹಿಂದಿನ ವಾರ ಮೊದಲನೇ ಸುತ್ತಿನ ಚುನಾವಣೆಯಲ್ಲಿ ಸಿಪಿಐ(ಎಂ) ಸ್ಪರ್ಧೆಯ ಇಂತಹ ವಿವರಗಳನ್ನು ಕೊಡಲಾಗಿತ್ತು.

ಎರಡನೇ ಸುತ್ತಿನಲ್ಲಿ 15 ಜಿಲ್ಲೆಗಳಲ್ಲಿ ಚುನಾವಣೆಗಳು ನಡೆಯಲಿದ್ದು 11 ಜಿಲ್ಲೆಗಳಲ್ಲಿ ಸಿಪಿಐ(ಎಂ) ಸ್ಪರ್ಧಿಸಲಿದೆ. ಸಿಪಿಐ(ಎಂ) ಸ್ಪರ್ಧೆಯ ವಿವರಗಳು ಈ ರೀತಿ ಇವೆ.

		ಜಿಲ್ಲಾ ಪಂಚಾಯತಿ		ತಾಲೂಕು ಪಂಚಾಯತಿ	
	ಜಿಲ್ಲೆ	ಒಟ್ಟು	ಸ್ಪರ್ಧೆ	ಒಟ್ಟು	ಸ್ಪರ್ಧೆ
1	ಚಿಕ್ಕಮಗಳೂರು	33	–	107	–
2	ದಕ್ಷಿಣ ಕನ್ನಡ	36	7	136	23
3	ಉಡುಪಿ	26	4	98	11
4	ಹಾಸನ	40	–	153	–
5	ಕೊಡಗು	29	1	50	1
6	ಮಂಡ್ಯ	41	1	155	5
7	ಮೈಸೂರು	49	1	187	0
8	ಚಾಮರಾಜನಗರ	23	–	89	–
9	ಬೀದರ್	–	–	131	1
10	ಬಳ್ಳಾರಿ	40	3	150	6
11	ರಾಯಚೂರು	–	1	142	5
12	ಕಲಬುರಗಿ	–	7	179	10
13	ಯಾದಗಿರಿ	24	–	94	–
14	ಕೊಪ್ಪಳ	29	3	109	11
15	ವಿಜಯಪುರ	–	3	159	2
	ಒಟ್ಟು ಸ್ಪರ್ಧೆ		31		75

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಿ.ಪಂ. ಅಭ್ಯರ್ಥಿಗಳು

ಮಂಗಳೂರು	2 ಪುತ್ತಿಗೆ	ಕೆ.ಯಾದವ ಶೆಟ್ಟಿ	(ಸಾಮಾನ್ಯ)
	3 ಶಿರ್ತಾಡಿ	ಮೋಹಿನಿ	ಪ.ಜಾ.(ಮ)
	6 ಎಡಪದವು	ಕೆ.ಸದಾಶಿವ ದಾಸ್	ಹಿ.ವ.(ಎ)
	10 ಸೋಮೇಶ್ವರ	ಶಾಲಿನಿ ಎಸ್.ಪೂಜಾರಿ	ಹಿ.ವ.(ಮ
ಬಂಟ್ವಾಳ	16 ಕೋಲ್ನಾಡು	ರಾಮಕೃಷ್ಣ	ಹಿ.ವ.(ಎ)
ಬೆಳ್ತಂಗಡಿ	22 ಲಾಯಿಲ	ರೋಹಿಣಿ	
	24 ಧರ್ಮಸ್ಥಳ	ವಿಠಲ ಮಲೆಕುಡಿಯ	(ಎಸ್‌ಟಿ)



ಎರಡನೆ ಹಂತಹ ಜಿಲ್ಲಾ ಪಂಚಾಯ್ತಿ ಅಭ್ಯರ್ಥಿಗಳ ಪಟ್ಟಿ



ಉಡುಪಿ	ಜಿಲ್ಲಾ ಪಂಚಾಯತ್	ಹೆಸರು
ಕುಂದಾಪುರ ತಾ.	ತ್ರಾಸಿ(ಸಾಮಾನ್ಯ ಮಹಿಳೆ)	ಯಮುನಾ ಶ್ರೀನಿವಾಸ ಪೂಜಾರಿ
	ವಂಡ್ಸೆ(ಸಾಮಾನ್ಯ)	ಸುರೇಶ ಕಲ್ಲಾಗರ
	ಕಾವ್ರಾಡಿ(ಎಸ್.ಸಿ.)	ಪೂರ್ಣಿಮಾ
	ಕೋಟೇಶ್ವರ(ಸಾಮಾನ್ಯ ಮಹಿಳೆ)	ಜ್ಯೋತಿ ಉಪಾಧ್ಯ

ವಿಜಯಪುರ	ಜಿಲ್ಲಾ ಪಂಚಾಯತ್	ಹೆಸರು
ವಿಜಯಪುರ ತಾ	ಶಿವಣಗಿ	ಬಸಲಿಂಗ ಕಪಾಲಿ
ಇಂಡಿ ತಾ	ಹಲಸಂಗಿ	ಅನಿಲ್ ಷಣ್ಮುಖಪ್ಪ
ಸಿಂಧಗಿ ತಾ	ಕಲಕೇರಿ(ಹಿ.(ಮ)–ಎ)	ಫಾತೀಮಾಬೀ

ಕೊಪ್ಪಳ	ಜಿಲ್ಲಾ ಪ.	ಹೆಸರು
ಗಂಗಾವತಿ	ಆನೆಗುಂದಿ	ಮರಿಯಮ್ಮ ದುರ್ಗಪ್ಪ
	ಹೇರೂರು	ಬಸವರಾಜ ಮರಕುಂಬಿ
ಕುಷ್ಟಗಿ	ಕೊರಡಕೇರಾ	ಗಂಗಮ್ಮ ಕಮತರ



ಬಳ್ಳಾರಿ	ಜಿಲ್ಲಾ ಪಂಚಾಯತ್	ಹೆಸರು
ಬಳ್ಳಾರಿ ತಾ.	ಬಾದನಹಟ್ಟಿ	ಲಲಿತಮ್ಮ
ಹೊಸಪೇಟೆ ತಾ.	ಪಾಪಿನಾಯಕನಹಳ್ಳಿ(ಪ.ಜಾ.(ಮ))	ವಿ.ಮಹೇಶ್ವರಿ
ಹ.ಬೊಮ್ಮನಹಳ್ಳಿ ತಾ.	ಹಂಪಾಪಟ್ನ(ಪ.ಜಾ.)	ಬಿ.ಮಾಳಮ್ಮ

ಕಲಬುರಗಿ	ಜಿಲ್ಲಾ ಪಂಚಾಯತ್	ಹೆಸರು
	ಚಿಂಚನಸೂರ	ರೇವಣ್ಣಸಿದ್ದ ಕಲಬುರಗಿ
	ತಡಕಲ	ಪ್ರಕಾಶ ಜಾನಿ
	ಕೋಡ್ಲಿ	ಶರಣಬಸಪ್ಪ ಮಮಶೆಟ್ಟಿ
	ನಿಡಗುಂದಾ	ಕಾತ್ಯಾನಿಯ
	ಫರತಾಬಾದ	ಎಂ.ಜಿ.ಸಜ್ಜನ್
	ಭಂಕೂರ	ಅಶೋಕ ಮೆಗೆರಿ
	ಸೊಂತ	ಶೀಲಾ



ಮೈಸೂರು	ಜಿಲ್ಲಾ ಪಂಚಾಯತ್	ಹೆಸರು
ಹುಣಸೂರು ತಾ	ಹನಗೂಡು	ಜೆ.ಕೆ.ತಿಮ್ಮಣ್ಣ

ಕೊಡಗು	ಜಿಲ್ಲಾ ಪಂಚಾಯತ್	ಹೆಸರು
	ಸಿದ್ದಾಪುರ	ಶಿಜಿ





ರಾಯಚೂರು	ಜಿಲ್ಲಾ ಪಂಚಾಯತ್	ಹೆಸರು
	ಚಂದ್ರಗಂಡ	ಕರಿಯಪ್ಪ ಅಚ್ಚೊಳ್ಳಿ

ಮಂಡ್ಯ	ಜಿಲ್ಲಾ ಪಂಚಾಯತ್	ಹೆಸರು
	ತಳಗವಾದಿ	ಎಂ. ಪುಟ್ಟಮಾದಯ್ಯ

ತಾಲೂಕು ಪಂಚಾಯತ್ ಕ್ಷೇತ್ರಗಳು ಸಿಪಿಐ(ಎಂ)+ಬೆಂಬಲಿತ ಪಕ್ಷೇತರ ಪುಟ 9 ರಿಂದ

ರಾಯಚೂರು	ತಾಲೂಕ್ ಪ.	ಹೆಸರು
ರಾಯಚೂರು ತಾ.	ಚಂದ್ರಗಂಡ	ರಂಗಪ್ಪ
	ಸಿಂಗನೂಡಿ	ಗಂಗಮ್ಮ
	ಡಿ.ರಾಮಪುರ	ಜಯಮ್ಮ
	ಹಾತಕೂರು	ದೊಡ್ಡ ಲಕ್ಷಣ
ದೇವದುರ್ಗಾ ತಾ.	ಜಾಲಹಳಿ	ಶಬೀರ್

ಕೊಡಗು	ತಾಲೂಕ್ ಪಂಚಾಯತ್	ಹೆಸರು
	ಕರಡಿಗೋಡು	ಹೆಚ್.ವಿ. ರಮೇಶ್

ಬೀದರ	ತಾಲೂಕ್ ಪ.	ಹೆಸರು
	ಹುಮ್ನಾಬಾದ್	ಏವಣ್ಣ ಅರ್ಜುನ ಡಾಂಗೆ

ಉಡುಪಿ ಜಿ.	ತಾಲೂಕು ಪಂಚಾಯತ್	ಹೆಸರು
	ತ್ರಾಸಿ(ಎಸ್.ಸಿ.)	ಶೀನ
	ಗಂಗೊಳ್ಳಿ(ಸಾಮಾನ್ಯ)	ಚಿಕ್ಕಮೊಗವೀರ
	ಹೆಮ್ಮಾಡಿ(ಸಾಮಾನ್ಯ)	ಸಂತೋಷ ದೇವಾಡಿಗ
	ತಲ್ಲೂರು(ಹಿಂ.–'ಅ)	ಗೋಪಾಲ ಮಾವಿನಕೆರೆ
	ಮರವಂತೆ	ಸುಬ್ರಮಣ್ಯ ಆಚಾರ್
	ಆಲೂರು	ನಾಗರತ್ನ ನಾಡ
	ನಾಡಾ	ರಾಜೀವ ಪಡುಕೋಣೆ
	ಕರ್ಕುಂಜೆ(ಹಿಂ–ಅ)	ಪಂಜು ಪೂಜಾರಿ
	ಬಸ್ರೂರು(ಹಿಂ.–ಬ)	ರಾಜೀವ ಶೆಟ್ಟಿ
	ಕೋಣಿ	ಕಾಂಚನಮಾಲ
	ಕೋಟೇಶ್ವರ	ಜಯಂತಿ
ಉಡುಪಿ ತಾ.	ಚಾಂತಾರು ತಾ.ಪಂ.	ವಿಠ್ಠಲ್ ಪೂಜಾರಿ ಹೆಚ್.

ಮಂಗಳೂರು	1 ನೆಲ್ಲಿಕಾರು	ಜಲಜಾಕ್ಷಿ ಶೆಟ್ಟಿ	ಜ(ಮ)
	2 ಶಿರ್ತಾಡಿ	ವಿಜಯ	ಪ.ಜಾ.(ಮ)
	3 ಪಡುಮಾರ್ನಾಡು	ನೇಮಿರಾಜ್ ಬಲ್ಲಾಳ್	ಪಕ್ಷೇತರ
	4 ಬೆಳುವಾಯಿ	ಸುಂದರ	ಪಕ್ಷೇತರ (ಪ.ಜಾ)
	5 ಪಾಲಡ್ಕ	ಉಷಾ	ಎಸ್‌ಟಿ (ಮ)
	14 ಬಡಗ ಎಡಪದವು	ಮಾಲತಿ	ಸಾ(ಮ)
	15 ತೆಂಕಮಿಜಾರು	ಲಕ್ಷ್ಮಿ	(ಸಾ)
	16 ಹೊಸಬೆಟ್ಟು	ರಾಧ	ಸಾ(ಮ)
	31 ಪಾವೂರು	ವಿಶ್ವನಾಥ ಪಾವೂರು	
	33 ಮುನ್ನೂರು	ಶಶಿಕಲ	
	36 ಸೋಮೇಶ್ವರ 1	ನವೀನ್ ಕುಮಾರ್	
	37 ಸೋಮೇಶ್ವರ 2	ಜಯಂತ ನಾಯಕ್	
ಬಂಟ್ವಾಳ	22 ಕುರ್ನಾಡು	ರಾಮಚಂದ್ರ	
	24 ಮಂಚಿ	ಆನಂದ ಶೆಟ್ಟಿಗಾರ್	(ಸಾ)
	29 ಕೋಲ್ನಾಡು	ದೇವದಾಸ್	(ಸಾ)
	31 ಕನ್ಯಾನ	ಚನಿಯಪ್ಪ ನಾಯ್ಕ್	(ಸಾ)
	32 ಕರೋಪಾಡಿ	ಅಣ್ಣಿ ಮೂಲ್ಯ	(ಸಾ)
ಬೆಳ್ತಂಗಡಿ	10 ಮಿತ್ತಬಾಗಿಲು	ಚನಿಯಪ್ಪ ಮಲೆಕುಡಿಯ	
	14 ನೆರಿಯ	ವಸಂತ ನಡ	
	15 ಧರ್ಮಸ್ಥಳ	ವೇದಾವತಿ	
	16 ಕೊಕ್ಕಡ	ಮೊಹಮ್ಮದ್ ಅನಾಸ್	
	17 ಕಳೆಂಜ	ದೇವಕಿ	
	18 ಅರಸಿನಮಕ್ಕಿ	ಮಮತ	

ಕಲಬುರಗಿ	ತಾಲೂಕ್ ಪ.	ಹೆಸರು
	ಕೋಡ್ಲಿ	ಮಲ್ಲಮ್ಮ ಮಗಿ
	ಅಂಬಲಗಾ	ಸುರೇಖಾ ಕೆ.ಪಿ.
	ಮಡ್ಕಿ	ಪುತಳಬಾಯಿ
	ಹಲಗೂರು	ಚಿಂಚಣಪ್ಪ ದನ್ನೂರು
	ಚಿಂಚನಸೂರು	ಬಲ್‌ಬೀಲ್ ದನ್ನಿ
	ರಟಕಲ್	ಚಂದ್ರಕಾಂತ್ ರಾಂ
	ವಡೆಬೀರನಹಳ್ಳಿ	ನಾದಪ್ಪ ಮಾಸ್ತರ್
	ಮಾಗಿ	ಗುಂಡಪ್ಪ
	ತಡಕಲ್	ಮಹಾನಂದ ಕಲ್ಯಾಣಿ
	ಬೆಳಮಗಿರಿ	ಮಹಾನಂದ ಕಲಮಟಗಿ

ಗಂಗಾವತಿ	1	ಆನೆಗುಂದಿ	ಶೇಷಪ್ಪ
	2	ಚಿಕ್ಕಜಂತಕಲ್	ಶೇಕಮ್ಮ
	3	ಹೇರೂರು	ಗಾಳೆಪ್ಪ
	4	ಹಣವಾಳ	ಹುಸೇನಪ್ಪ ಕೆ.
	5	ಕೆಸರಟ್ಟಿ	ಪಾರ್ವತಿ
	6	ವಡ್ಡರಹಟ್ಟಿ	ರಾಮಣ್ಣ
	7	ಜಿರಾಳ	ಈಶಪ್ಪ
ಕುಷ್ಟಗಿ	1	ತಳವಗೇರಾ	ಮಲ್ಲಿಕಾರ್ಜುನಗೌಡ ಸಿದ್ಧಪ್ಪಗೌಡ
	2	ಕೊರಡಕೇರಾ	ಮಳಿಯಪ್ಪ ವಜ್ರಬಂಡಿ
	3	ಕಂದಕೂರ	ದೇವಮ್ಮ ಅಮಾಜಿ
	4	ಬಿಜಕಲ್	ರಾಮಮ್ಮ ಗೌಂಡಿ

ಬಳ್ಳಾರಿ	ತಾಲೂಕ್ ಪಂಚಾಯತ್	ಹೆಸರು
	ಬಾದನಹಟ್ಟಿ(ಪ.ಪಂ.)	ಗಾಳಿ ಬಸವರಾಜ
ಹ. ಬೊಮ್ಮನಹಳ್ಳಿ ತಾ.	ಕಡಲಬಾಳು	ಮಂಜುನಾಥ
	ಮರಬ್ಬಿಹಾಳು	ನಾಗಮ್ಮ
	ತಂಬ್ರಳ್ಳಿ	ಕೊಟ್ಟಿಗಿ ಮಲ್ಲಿಕಾರ್ಜುನ
ಸಂಡೂರು ತಾ.	ತೋರಣಗಲ್ಲು	ಎಂ.ಗೀತಾ
ಶಿರಗುಪ್ಪ ತಾ.	ದೇಶನೂರು (ಪ.ಜಾ(ಮ))	ಈರಮ್ಮ

ಮಂಡ್ಯ	ತಾಲೂಕ್ ಪ.	ಹೆಸರು
ಮಳವಳ್ಳಿ ತಾ.	ಹುಸ್ಕೂರು	ಸರೋಜಮ್ಮ
	ಅಗಸನಪುರ	ಮಂಜುಳಾ
	ನೆಲಮಾಕನಹಳ್ಳಿ(ಬಿಸಿಎಂ–ಎ)	ಸುಶೀಲಾ
	ಹೊಸಹಳ್ಳಿ	ತಿಮ್ಮೇಗೌಡ
	ತಳಗವಾದಿ(ಬಿಸಿಎಂ–ಬಿ)	ನವೀನಾ ದೇವರಾಜ್
ಮದ್ದೂರು ತಾ.	ತೊರೆಶೆಟ್ಟಿಹಳ್ಳಿ (ಸಾ.ಮ)	ಪದ್ಮಾ

ವಿಜಯಪುರ	ತಾಲೂಕ್ ಪಂಚಾಯತ್	ಹೆಸರು
ವಿಜಯಪುರ ತಾ.	ಅರಿಕೇರಿ(ಪ.ಜಾ.(ಮ)	ಸುಮಿತ್ರಾ
ಬಸವನ ಬಾ. ತಾ	ಹುಣಶ್ಯಾಳು	ಸವಿತಾ

ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಅಭ್ಯರ್ಥಿಗಳ ಪರಿಚಯ

ಕೆ.ಯಾದವ ಶೆಟ್ಟಿ:

ಪುತ್ತಿಗೆ ಜಿಲ್ಲಾ ಪಂಚಾಯತ್ ಕ್ಷೇತ್ರಕ್ಕೆ ಸ್ಪರ್ಧಿಸಿರುವ ಕೆ.ಯಾದವ ಶೆಟ್ಟಿ ಕರಾವಳಿಯ ಜನಪ್ರಿಯ ಸಮಾಜ ಸೇವಕ ಮತ್ತು ಹೋರಾಟಗಾರ. ಡಿವೈಎಫ್‌ಯ ದ.ಕ.ಜಿಲ್ಲಾಧ್ಯಕ್ಷರಾಗಿ ಬಳಿಕ ಮೂಡಬಿದ್ರೆ ಸಿಪಿಐ(ಎಂ) ವಲಯ ಸಮಿತಿ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಸಿಪಿಐ(ಎಂ) ಪಕ್ಷದ ರಾಜ್ಯ ಸಮಿತಿ ಸದಸ್ಯ. ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿಯಾಗಿ ಜಿಲ್ಲೆಯಲ್ಲಿ ನಿವೇಶನ ರಹಿತರ ಬಲಿಷ್ಟ ಹೋರಾಟವನ್ನು ಮುನ್ನಡೆಸುತ್ತಿದ್ದಾರೆ. ಕಸ್ತೂರಿರಂಗನ್ ವರದಿಯನ್ನು ವಿರೋಧಿಸಿ ಹೋರಾಟ ಮುನ್ನಡೆಸಿದ್ದಾರೆ. ಅರಣ್ಯಭೂಮಿ ನಿವಾಸಿಗಳ ಭೂಮಿಗಾಗಿಯೂ ಹೋರಾಟ ಮುನ್ನಡೆಸಿದ್ದಾರೆ. ಬಜಾಲು ಮಂಡಲ ಪಂಚಾಯತು, ಗ್ರಾಮ ಪಂಚಾಯತು ಸದಸ್ಯರಾಗಿ 3 ಅವಧಿಗಳಲ್ಲಿ ಕಾರ್ಯನಿರ್ವಹಿಸಿ ಜನಪ್ರೀತಿ ಗಳಿಸಿದ ನಾಯಕ ಇವರು.

ಕೆ.ಸದಾಶಿವ ದಾಸ್:

ಎಡಪದವು ಜಿಲ್ಲಾ ಪಂಚಾಯತ್ ಕ್ಷೇತ್ರಕ್ಕೆ ಸ್ಪರ್ಧಿಸಿರುವ ಸದಾಶಿವದಾಸ್ ಸಿಪಿಐ(ಎಂ) ಗುರುಪುರ ವಲಯ ಸಮಿತಿಯ ಕಾರ್ಯದರ್ಶಿ. ಎಳೆಯ ಪ್ರಾಯದಿಂದಲೇ ಸಿಪಿಐ(ಎಂ) ಪಕ್ಷದೊಂದಿಗೆ ಒಡನಾಟ ಬೆಳೆಸಿಕೊಂಡು ಬೀಡಿ ಕಾರ್ಮಿಕ ಸಂಘಟನೆಯಲ್ಲಿಯೂ ರೈತ ಸಂಘದಲ್ಲಿಯೂ ಪಕ್ಷದಲ್ಲಿಯೂ ನಿಷ್ಠೆಯಿಂದ ಕೆಲಸ ಮಾಡುವ ಮುಖಂಡರು. ಕುಪ್ಪೆಪದವು ಬೀಡಿ ಕಾರ್ಮಿಕ ಸಂಘಟನೆಯ ಪ್ರಧಾನ ಕಾರ್ಯದರ್ಶಿ. ಸಿಐಟಿಯು ಕರ್ನಾಟಕ ರಾಜ್ಯ ಸಮಿತಿ ಸದಸ್ಯರು. ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ ಸದಸ್ಯರು.

ಶಾಲಿನಿ ಎಸ್.ಪೂಜಾರಿ:

ಸೋಮೇಶ್ವರ ಜಿಲ್ಲಾ ಪಂಚಾಯತ್ ಕ್ಷೇತ್ರಕ್ಕೆ ಸ್ಪರ್ಧಿಸಿರುವ ಶಾಲಿನಿ ಎಸ್.ಪೂಜಾರಿಯವರು ಅಂಬ್ಲಮೊಗರು ಗ್ರಾಮದವರಾಗಿದ್ದು 2006–11ರ ಅವಧಿಯಲ್ಲಿ ಮಂಗಳೂರು ತಾಲೂಕು ಪಂಚಾಯತಿನಲ್ಲಿ ಸಿಪಿಐ(ಎಂ) ಪಕ್ಷದ ಸದಸ್ಯರಾಗಿ ಪಕ್ಷವನ್ನು ಪ್ರತಿನಿಧಿಸಿದ್ದರು. ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಅಂಬ್ಲಮೊಗರು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಉತ್ತಮ ಮುನ್ನಡೆಗೆ ಕಾರಣ–ರಾಗಿದ್ದಾರೆ.

ವಿಠಲ ಮಲೆಕುಡಿಯ:

ಧರ್ಮಸ್ಥಳ ಜಿಲ್ಲಾ ಪಂಚಾಯತ್ ಕ್ಷೇತ್ರಕ್ಕೆ ಸ್ಪರ್ಧಿಸಿರುವ ವಿಠಲ ಮಲೆಕುಡಿಯ ಪತ್ರಿಕೋದ್ಯಮ ಪದವೀಧರ. ಸ್ನಾತ–ಕೋತ್ತರ ವಿದ್ಯಾರ್ಥಿಯಾಗಿದ್ದಾಗ ನಕ್ಸಲ್ ಸಂಪರ್ಕ ಹೊಂದಿದ್ದಾರೆಂಬ ಸುಳ್ಳು ಆರೋಪ ಹೊರೆಸಿ ಇವರನ್ನು ಜೈಲಿನಲ್ಲಿರಿಸಲಾಗಿತ್ತು. ಇದರಿಂದ ಅವರ ವಿದ್ಯಾಭ್ಯಾಸ ಅವಧಿ 2 ವರ್ಷ ಮುಂದುವರೆಯಿತು. ವಿದ್ಯಾರ್ಥಿ ಸಂಘಟನೆಯಲ್ಲೂ, ಇದೀಗ ಬೆಳ್ತಂಗಡಿ ತಾಲೂಕು ಡಿವೈಎಫ್‌ಐ ಸಂಘಟನೆ ಹಾಗೂ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯಲ್ಲೂ ಸಕ್ರೀಯ ಕಾರ್ಯಕರ್ತ. ರಾಜ್ಯ ಸರಕಾರವು ಇನ್ನೂ ಕೂಡಾ ಅವರ ಮೇಲಿನ ಪ್ರಕರಣವನ್ನು ಕೈ ಬಿಟ್ಟಿಲ್ಲ.

ಜಯಂತ ನಾಯಕ್:

ಮಂಗಳೂರು ತಾಲೂಕು ಸೋಮೇಶ್ವರ 2ನೇ ತಾಲೂಕು ಪಂಚಾಯತ್ ಕ್ಷೇತ್ರಕ್ಕೆ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಜಯಂತ ನಾಯಕ್ ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ ಸದಸ್ಯ. ಹಂಚಿನ ಕಾರ್ಖಾನೆ ಕಾರ್ಮಿಕ ಸಂಘಟನೆಯಿಂದ ಆರಂಭವಾದ ಅವರ ಕಾರ್ಮಿಕ ಸಂಘಟನೆಯ ಕೆಲಸ ಬಳಿಕ ಬೀಡಿ ಕಾರ್ಮಿಕ ಹಾಗೂ ಕಟ್ಟಡ ಕಾರ್ಮಿಕ ಸಂಘಟನೆಯಲ್ಲಿ ಮುಂದುವರಿದಿದೆ. ಪ್ರಕೃತ ಕೋಟೆಕಾರ್ ಸರ್ಕಲ್ ಬೀಡಿ ಕಾರ್ಮಿಕ ಸಂಘಟನೆ ಹಾಗೂ ಉಳ್ಳಾಲ ವಲಯ ಕಟ್ಟಡ ಕಾರ್ಮಿಕರ ಸಂಘಟನೆ ಎರಡಲ್ಲೂ ಕಾರ್ಯದರ್ಶಿಯಾಗಿದ್ದಾರೆ. ಸಿಐಟಿಯು ರಾಜ್ಯ ಸಮಿತಿ ಸದಸ್ಯರು.

ಪ್ರಶ್ನೆ: ಇತ್ತೀಚೆಗೆ ಕೇರಳದಲ್ಲಿ ನಡೆದ ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ಟ್ವೆಂಟಿ 20 ಎಂಬ ಕಾರ್ಪೊರೆಟ್ ಪ್ರಾಯೋಜಿತ ಸಂಘಟನೆಯೊಂದು ಸಾಧಿಸಿದ ಗೆಲುವಿನ ಬಗ್ಗೆ ಸಿಪಿಐ(ಎಂ) ನಿಲುವೇನು?




ಕೈಟೆಕ್ಸ್ ಎಂಬ ಖಾಸಗಿ ಎಂಬ ಎನ್‌ಜಿಓ ವನ್ನು ಸ್ಥಾಪಿಸಿ ಎರ್ನಾಕುಲಂ ಜಿಲ್ಲೆಯ ಕೀಳ್‌ಕ್ಕಂಬಲಂ ಗ್ರಾಮ ಪಂಚಾಯಿತಿಗೆ ತನ್ನ ಅಭ್ಯರ್ಥಿಗಳನ್ನು ನಿಲ್ಲಿಸಿತು. ಈ ಗುಂಪು ಪಂಚಾಯತ್‌ನ ಎಲ್ಲ 19 ವಾರ್ಡುಗಳಲ್ಲಿ ಅಭ್ಯರ್ಥಿಗಳನ್ನು ನಿಲ್ಲಿಸಿ 17 ರಲ್ಲಿ ಜಯಗಳಿಸಿತು. ಜನರ ಬೆಂಬಲ ಗಳಿಸಲು ಟ್ವೆಂಟಿ 20 ಗುಂಪಿನ ಮುಖಾಂತರ ಕೈಟೆಕ್ಸ್ ಹಲವಾರು ಯೋಜನೆಗಳಿಗೆ ಮತ್ತು ಸೌಕರ್ಯಗಳನ್ನು ಒದಗಿಸಲು ಗ್ರಾಮದಲ್ಲಿ ಸಾಷ್ಟು ಹಣ ಚೆಲಿದೆ.

ಸ್ಥಳೀಯ ಚುನಾವಣೆಯಲ್ಲಿ ಕಂಪನಿ ಸ್ಥಾಪಿಸಿದ ಎನ್‌ಜಿಒ ಸ್ವರ್ಧಿಸಿರುವುದುಇದೇ ಮೊದಲ ಬಾರಿ. ಕಾರ್ಪೊರೇಟ್ ವಲಯಚುನಾವಣೆ ಪ್ರಕ್ರಿಯೆಯಲ್ಲಿ ಪ್ರವೇಶಿಸುವುದರಿಂದ ಹಲವಾರು ಪ್ರಶ್ನೆಗಳು ಏಳುತ್ತವೆ? ದೊಡ್ಡ ಕಂಪನಿಗಳು ಹಣ ಮತ್ತು ಸಂಪನ್ಮೂಲಗಳನ್ನು ಬಳಸಿ ಗ್ರಾಮ ಮತ್ತು ಗ್ರೂಪ್ ಪಂಚಾಯತ್ ಗಳ ಚುನಾವಣೆಗಳನ್ನು ಗೆಲ್ಲಬಹುದಾಗಿದೆ. ಹಿಂದಿನ ಗ್ರಾಮ ಪಂಚಾಯತ್ ಕೀಳ್‌ಕ್ಕಂಬಲಂ ಕೈ–ಟೆಕ್ಸ್ ಗುಂಪಿಗೆ ಮಾಲಿನ್ಯದ ಕಾರಣ ಕೈಗಾರಿಕಾ ಘಟಕವನ್ನು ಸ್ಥಾಪಿಸಲು ನಿರಾಕರಿಸಿರುವುದು ವರದಿಯಾಗಿದೆ.

ಕೀಳ್‌ಕ್ಕಂಬಲಂ ಉದಾಹರಣೆ ಕಂಪನಿಗಳು ತಾವೇ ಸ್ಥಾಪಿಸಿದ ಎನ್‌ಜಿಓಗಳ ಪಂಚಾಯತುಗಳ ನಿಯಂತ್ರಣ ಪಡೆಯಬಹುದಾದ ಅಪಾಯಕಾರಿ ಸಾಧ್ಯತೆಯನ್ನು ತೋರಿಸುತ್ತದೆ. ಕಾಡಿನ ಮತ್ತು ಬುಡಕಟ್ಟು ಜನ ವಾಸಿಸುವ ಪ್ರದೇಶಗಳಲ್ಲಿ ಕೈಗಾರಿಕಾ ಘಟಕಗಳನ್ನು ಸ್ಥಾಪಿಸಲು ಗ್ರಾಮ ಸಭೆಗಳನ್ನು ವಶಪಡಿಸಿಕೊಂಡರೆ ಅವುಗಳ "ಒಪ್ಪಿಗೆ" ಪಡೆಯಬೇಕು ಎಂಭ ಕಾನೂನು ತೊಡಕನ್ನು ಸುಲಭವಾಗಿ ನಿವಾರಿಸಿಕೊಳ್ಳಬಹುದು ಎಂಬ ಲೆಕ್ಕಾಚಾರ ಇದರ ಹಿಂದೆಅಡಗಿದೆ.

ಕಾರ್ಪೊರೇಟ್‌ಗಳು ಎನ್‌ಜಿಒ ಅಥವಾ ಇನ್ನ್ಯಾವುದಾದರೂ ಪ್ರಾಕ್ಸಿ ಸಂಘಟನೆಗಳ ಮೂಲಕ ಚುನಾವಣೆಯಲ್ಲಿ ಸ್ವರ್ಧಿಸಬಹುದೇ ಎಂಬ ಮತ್ತೊಂದು ಗಂಭೀರ ಪ್ರಶ್ನೆ ಏಳುತ್ತದೆ. ಈ ವಿಚಾರವನ್ನು ಆಳವಾಗಿ ಮತ್ತು ಕೂಲಕುಷವಾಗಿ ಪರಿಶೀಲಿಸಿ ಕಾರ್ಪೊರೇಟ್‌ಗಳು ಸ್ಥಳೀಯ ಸಂಸ್ಥೆಗಳನ್ನು ವಶಪಡಿಸಿಕೊಳ್ಳುವ ಕ್ರಮಕ್ಕೆ ಕಡಿವಾಣ ಹಾಕುವ ಕಾನೂನು ತರಬೇಕಿದೆ.

ಕ್ಯಾಸ್ಟ್ರೋ ಕಥೆ 3



ಮೂಲ: ಇಗ್ನೇಶಿಯಸ್ ರಾಮೊನೆಟ್
ಸಂಗ್ರಹಾನುವಾದ : ಕೆ. ಪ್ರಕಾಶ್

ಮತ್ತೊಂದು ಕಡೆ ಸ್ಯಾಂಟಿಯಾಗೋದಲ್ಲಿ ನಂತರ ಹವಾನಾದಲ್ಲಿ ಫಿಡೆಲ್ ಹೆಚ್ಚಿನ ಸವಲತ್ತುಗಳ ಶ್ರೀಮಂತರ ಶಾಲೆಗಳಿಗೆ ಹೋಗುತ್ತಾರೆ. ಅಲ್ಲೆಲ್ಲಾ ಖಚಿತವಾಗಿ ಜಮೀನ್ದಾರರ ಮಕ್ಕಳೇ. ಹಣವಂತರ ಕುಟುಂಬಗಳಿಂದ ಬಂದವರು. ಇಂತಹ ಮಕ್ಕಳ ಜೊತೆ ಸ್ನೇಹವಿತ್ತು. ಜೊತೆಯಲ್ಲಿ ಆಟಗಳನ್ನೂ ಆಡಿದರು. ಆದರೆ ಅವರ ಶ್ರೀಮಂತ ನೆರೆಹೊರೆಯಲ್ಲಿ 'ಬದುಕಲು' ಆಗಲಿಲ್ಲ ಎನ್ನುತ್ತಾರೆ. ಫಿಡೆಲ್‌ಗಿದ್ದ ಎರಡು ಸ್ವಯಂಸ್ಫೂರ್ತಿಯ ಪ್ರವೃತ್ತಿಗಳೆಂದರೆ ವಿಪರೀತವಾದ ಕ್ರೀಡೆಗಳನ್ನು ಆಡುವುದು ಮತ್ತು ಬೆಟ್ಟಗಳನ್ನು ಹತ್ತುವುದು. ಇವರಿಗಿದ್ದ ಸಾಹಸ ಪ್ರವೃತ್ತಿಯ ಒಂದು ಪ್ರಸಂಗ ಹೀಗಿದೆ; ಇವರ ಶಾಲೆಗೆ ಸೇರಿದ್ದ ಈಜುವ ಕೊಳದಲ್ಲಿ ವಿವಿಧ ಹಂತದ ಡೈವಿಂಗ್ ಬೋರ್ಡ್‌ಗಳಿದ್ದವು. ಇವರು ಇತರ ಹುಡುಗರಿಗೆ ಸವಾಲ್ ಹಾಕುವ ರೀತಿಯಲ್ಲಿ ಮೊದಲ ಬಾರಿಗೇ ಅತ್ಯಂತ ಮೇಲ್‌ಸ್ತರದ ಬೋರ್ಡ್‌ನಿಂದ ಡೈವ್ ಮಾಡಿದ್ದರು. ಭಯ ಎಂಬುದನ್ನು ಹತ್ತಿರ ಸುಳಿಯಗೊಡದ ಇಂತಹ ಪ್ರವೃತ್ತಿಗಳಿಗೆ ಫಿಡೆಲ್ ಹೆಸರಾಗಿದ್ದರು.

ಇದೆಲ್ಲಾ ಮಾಡುವಾಗಲೂ ಫಿಡೆಲ್ ಬಂಡವಾಳಶಾಹಿ–ಶ್ರೀಮಂತ ಸಂಸ್ಕೃತಿಯನ್ನು ಮೈಗೂಡಿಸಿಕೊಳ್ಳಲಿಲ್ಲ. ಫಿಡೆಲ್‌ನ ತಂದೆ–ತಾಯಿ ಹೆಚ್ಚಾಗಿ ಹೊರಗೆ ಓಡಾಡುತ್ತಿರಲಿಲ್ಲ. ಅದೇ ರೀತಿ ಮನೆಗೆ ಭೇಟಿ ನೀಡುವವರೂ ಸಹ ವಿರಳವಾಗಿದ್ದರು. ಅವರಿಗೆ ಶ್ರೀಮಂತ ವರ್ಗದ ಕುಟುಂಬಗಳಿಗಿರುವ ಸಂಸ್ಕೃತಿ ಅಥವಾ ಸಂಪ್ರದಾಯಗಳು ಇರಲಿಲ್ಲ. ಎಲ್ಲ ಸಮಯವೂ ದುಡಿಯುತ್ತಿದ್ದರು.

ಸ್ಯಾಂಟಿಯಾಗೋ ಸ್ಕೂಲಿಗೆ

ಫಿಡೆಲ್ ಆರು ವರ್ಷದವರಿದ್ದಾಗ ತನಗಿಂತ ಮೂರೂವರೆ ವರ್ಷ ಹಿರಿಯಳಾದ ಅಕ್ಕ ಏಂಜೆಲಿಟಾ ಜೊತೆ ದೂರದ ಸ್ಯಾಂಟಿಯಾಗೋದಲ್ಲಿ ಯೂಫ್ರೇಷಿಯಾ ಫೆಲಿಯಾ ಎಂಬ ಶಿಕ್ಷಕಿಯ ಮನೆಯಲ್ಲಿದ್ದುಕೊಂಡು ಶಾಲೆಗೆ ಹೋಗುವ ವ್ಯವಸ್ಥೆಯನ್ನು ಫಿಡೆಲ್‌ನ ಪೋಷಕರು ಮಾಡಿದರು. ಹಳ್ಳಿಯಿಂದ ನಗರಕ್ಕೆ ಬಂದಾಗ ಅಲ್ಲಿನ ಬೃಹತ್ ಕಟ್ಟಡಗಳು, ನಗರ ಜೀವನ ಇವರ ಮೇಲೆ ಪರಿಣಾಮ ಬೀರಿತು. ಮೊದಲ ಬಾರಿಗೆ ಇಲ್ಲಿ ಸಮುದ್ರವನ್ನು ಕಂಡರು. ಇವರು ವಾಸಿಸುತ್ತಿದ್ದ ದುಃಸ್ಥಿತಿಯ ಮರದ ತುಂಡುಗಳಿಂದ ಮಾಡಿದ್ದ ಮನೆಯ ಸಮೀಪ 'ಇನ್ಸ್‌ಟಿಟ್ಯೂಟ್' ಎಂದು ಕರೆಯಲಾಗುತ್ತಿದ್ದ ಪ್ರೌಢಶಾಲೆಯಿತ್ತು. ಫಿಡೆಲ್ ಅಲ್ಲಿದ್ದಾಗ ಆ ಶಾಲೆಯಲ್ಲಿ ಕೆಲವು ಪ್ರಮುಖ ಸಂಗತಿಗಳು ಜರುಗಿದವು. ಆ ಶಾಲೆಯನ್ನು ಸೈನಿಕರು ವಶಪಡಿಸಿಕೊಂಡಿದ್ದರು. ಏಕೆಂದರೆ ಶಾಲೆಯ ಎಲ್ಲಾ ವಿದ್ಯಾರ್ಥಿಗಳೂ ಮಚಾಡೋನ ವಿರುದ್ಧವಿದ್ದರು. ಶಾಲಾ ಕಟ್ಟಡದಲ್ಲಿ ಕೆಲವರಿಗೆ ಸೈನಿಕರು ನೀಡುತ್ತಿದ್ದ ಹಿಂಸೆಯನ್ನು ಬಾಲಕ ಫಿಡೆಲ್ ಸ್ವತಃ ಕಣ್ಣಾರೆ ನೋಡಲು ಸಾಧ್ಯವಾಗಿತ್ತು. ಇಡೀ ಪ್ರದೇಶ ಬಿಗುವಿನ ವಾತಾವರಣದಿಂದ ಕೂಡಿತ್ತು. ಬೈರನ್‌ನಲ್ಲಿ ಮೆಕ್ಯಾನಿಕ್ ಆಗಿದ್ದ ಆಂಟೋನಿಯೊ ಎಂಬಾತನನ್ನು ಆಗ ಅಲ್ಲಿ ಬಂಧಿಸಿಡಲಾಗಿತ್ತು. ಅವನ ಮೇಲೆ ಕಮ್ಯುನಿಸ್ಟ್ ಎಂಬ ಆರೋಪವಿತ್ತೆಂದು ನಂತರ ತಿಳಿಯಿತು. ಈತನ ಹೆಂಡತಿ ಒಮ್ಮೆ ಬಾಲಕ ಫಿಡೆಲ್‌ನನ್ನು ತನ್ನೊಂದಿಗೆ ಗಂಡನನ್ನು ನೋಡುವ ಸಂಬಂಧದಲ್ಲಿ ಕರೆದು–ಕೊಂಡು ಹೋಗಿದ್ದರು. ಜೈಲಿನ ಆ ವಾತಾವರಣ, ಜೈಲರ್‌ಗಳು, ಕಂಬಿಗಳು, ಖೈದಿಗಳು ಫಿಡೆಲ್‌ನಲ್ಲಿ ಭಯವನ್ನುಂಟು ಮಾಡಿತ್ತು.



ಫಿಡೆಲ್ ಕ್ಯಾಸ್ಟ್ರೋ (ಲಾಲಿ ಪಾಪ್ ಚೀಪುತ್ತಿರುವ ಹುಡುಗ) ಸ್ಯಾಂಟಿಯಾಗೋ ಸ್ಕೂಲಲ್ಲಿ

ಹಸಿವಿನ ಅನುಭವ

ಚೆನ್ನಾಗಿ ಓದಿಸಬೇಕೆಂಬ ಪೋಷಕರ ಮಹತ್ವಾಕಾಂಕ್ಷೆಯ ಭಾಗವಾಗಿ ದೂರದ ಸ್ಯಾಂಟಿಯಾಗೋದಲ್ಲಿ ಶಿಕ್ಷಕಿಯೊಬ್ಬರ ಮನೆಯಲ್ಲಿರುವ ವ್ಯವಸ್ಥೆ ಫಿಡೆಲ್‌ಗೆ ಹೊಂದಿಕೆಯಾಗಲೇ ಇಲ್ಲ. ಬಹುತೇಕ ಏನನ್ನೂ ಕಲಿಯದ ಆ ವರ್ಷಗಳು ಫಿಡೆಲ್ ಪಾಲಿಗೆ ಕಷ್ಟದ ವರ್ಷಗಳೂ ಹೌದು. ಹಸಿವು ಎಂದರೇನೆಂದೆ ಅರಿಯದ ಫಿಡೆಲ್‌ಗೆ ಈ ಅವಧಿ ಅದರ ಹಲವು ಆಯಾಮಗಳನ್ನು ಅನುಭವಿಸುವಂತೆ ಮಾಡಿತು. ಮಚಾಡೋ, ಬಟಿಸ್ಟಾ ಸರ್ವಾಧಿಕಾರ, ಸಾರ್ಜೆಂಟ್ ದಂಗೆಯ ಅವಧಿಗಳಲ್ಲಿ ಫಿಡೆಲ್ ಸ್ಯಾಂಟಿಯಾಗೋ ಸ್ಕೂಲಿನಲ್ಲಿ ಇದ್ದರು.

ಮಚಾಡೊ, ಬಟಿಸ್ಟಾ ಸರ್ವಾಧಿಕಾರದಲ್ಲಿ

ಮಚಾಡೋನ ಸರ್ವಾಧಿಕಾರವು ಕ್ಯೂಬಾದ ತುಂಬೆಲ್ಲಾ ಬಡತನ ಮತ್ತು ಹಸಿವನ್ನು ವ್ಯಾಪಕಗೊಳಿಸಿತು. 1929ರ ಜಾಗತಿಕ ಬಿಕ್ಕಟ್ಟು, ಅಮೇರಿಕ ಕ್ಯೂಬಾದ ಮೇಲೆ ಹಾಕಿದ ನಿರ್ಬಂಧಗಳು ಸೇರಿ ಕ್ಯೂಬನ್ನರ ಪರಿಸ್ಥಿತಿಯನ್ನು ತಳಮುಟ್ಟಿಸಿತ್ತು. ಜನತೆಯ ವ್ಯಾಪಕ ಪ್ರತಿರೋಧ ಬೆಳೆಯುತ್ತಿತ್ತು. ಮುಖ್ಯವಾಗಿ ವಿದ್ಯಾರ್ಥಿಗಳಿಂದ ಸಂಘಟಿತ ವಿರೋಧ ಹುಟ್ಟಿತು. ಈ ಸಂದರ್ಭದ ಬಹುಮುಖ್ಯವಾದ ಒಂದು ಹೆಸರನ್ನು ಫಿಡೆಲ್ ನೆನಪಿಸಿಕೊಳ್ಳುತ್ತಾರೆ; ಅದು, ತನ್ನ 20 ಅಥವಾ 21ನೇ ವಯಸ್ಸಿನಲ್ಲಿ 1922ರಲ್ಲಿ ಕ್ಯೂಬಾದ ಮೊದಲ ಕಮ್ಯುನಿಸ್ಟ್ ಪಕ್ಷವನ್ನು ಸ್ಥಾಪಿಸಿದ ಜೂಲಿಯೋ ಆಂಟೊನಿಯೋ ಮೆಲ್ಲಾ. ಕ್ಯೂಬನ್ ಯುವಕರ ಮಧ್ಯೆ ಈತ ಹೀರೋ ಆಗಿದ್ದ. 1923ರಲ್ಲಿ ಯೂನಿವರ್ಸಿಟಿ ಸ್ಟೂಡೆಂಟ್ಸ್ ಫೆಡರೇಷನ್‌ನನ್ನು ಸ್ಥಾಪಿಸಿದ. ಮಚಾಡೋನ ಸೈನ್ಯದಿಂದ ಬಂಧನವಾಗಿ ನಂತರ ಬಿಡುಗಡೆಯಾದ ಮೆಲ್ಲಾನನ್ನು 1929 ರಲ್ಲಿ ಮೆಕ್ಸಿಕೋದಲ್ಲಿ ಕೊಂದುಹಾಕಿದರು.

ಫಿಡೆಲ್ ಏಳು ವರ್ಷವಿದ್ದಾಗ 1933ರಲ್ಲಿ ಮಚಾಡೊ ಪದಚ್ಯುತಗೊಂಡ. ಅದೇ ವರ್ಷದಲ್ಲಿ "ಸಾರ್ಜೆಂಟ್ಸ್ ದಂಗೆ" (ಖಜಡಿರಜಚಿಟಿಣ ಗಿಡಿ–ಢುಟಿರ) ನಡೆದು ಹವಾನಾ ವಿಶ್ವವಿದ್ಯಾಲಯದ ಪ್ರೊ.ರೇಮನ್ ಗ್ರೌ ಸ್ಯಾನ್ ಮಾರ್ಟಿನ್ ಮುಂದೆ ಕ್ಯೂಬಾದ ಅಧ್ಯಕ್ಷನಾಗಿ ಚುನಾಯಿತನಾದ. ಗ್ವಿತೆರಾಸ್ ಎಂಬಾತ ಕಾರ್ಯದರ್ಶಿಯಾಗಿ ನೇಮಕಗೊಂಡರು. ಗ್ವಿತೆರಾಸ್ ನೂತನ ಕಾನೂನುಗಳನ್ನು ತಂದು ಯಾಂಕಿಗಳ ಟೆಲಿಫೋನ್ ಕಂಪನಿ ಮತ್ತಿತರೆ ವ್ಯವಹಾರಗಳನ್ನು ವಶಪಡಿಸಿಕೊಂಡರು. ಎಂಟು ಗಂಟೆ ಕೆಲಸದ ಘೋಷಣೆಯನ್ನು ಮಾಡಿದರು. ಇವೆಲ್ಲವೂ ಕ್ಯೂಬಾದಲ್ಲಿ ಕಂಡು–ಕೇಳರಿಯದ ಸಂಗತಿಗಳಾಗಿದ್ದವು. ಆದರೆ ಈ ಸರ್ಕಾರ ಮೂರು ತಿಂಗಳಿಗೂ ಹೆಚ್ಚು ಕಾಲ ಉಳಿಯಲಿಲ್ಲ. 1934 ರಲ್ಲಿ ಅಮೇರಿಕದ ಬೆಂಬಲದೊಂದಿಗೆ ಫುಲ್ಗೆನ್ಸಿಯೋ ಬಟಿಸ್ಟಾ ಅಧಿಕಾರವನ್ನು ಕಬಳಿಸಿದ. ಗ್ವಿತೆರಾಸ್‌ನನ್ನು 1935 ರಲ್ಲಿ ಕೊಲ್ಲಲಾಯಿತು. ಇಡೀ ಸೈನ್ಯದ ನಾಯಕತ್ವವನ್ನು ಬಟಿಸ್ಟಾ ವಹಿಸಿಕೊಳ್ಳುವಲ್ಲಿ ಯಶಸ್ವಿಯಾದ. ಈ ಎಲ್ಲಾ ಬೆಳವಣಿಗೆಗಳು ನಡೆಯುವಾಗ ಫಿಡೆಲ್ ಸ್ಯಾಂಟಿಯಾಗೋದಲ್ಲಿದ್ದರೂ, 1942 ರಲ್ಲಿ ದೇಶದ ಅತ್ಯುತ್ತಮ ಶಾಲೆಯೆಂದು ಹೆಸರಾಗಿದ್ದ ಹವಾನಾದ ಕಾಲೇಜಿಯೋ ಡಿ ಬೆಲೆನ್‌ಗೆ ಹೋದರು.

ಬಂಡಾಯಗಾರನಾಗಿ ರೂಪುಗೊಂಡದ್ದು

ಚೆನ್ನಾಗಿ ಓದಿಸಬೇಕೆಂಬ ಪೋಷಕರ ಮಹತ್ವಾಕಾಂಕ್ಷೆಯ ಭಾಗವಾಗಿ ದೂರದ ಸ್ಯಾಂಟಿಯಾಗೋದಲ್ಲಿ ಶಿಕ್ಷಕಿಯೊಬ್ಬರ ಮನೆಯಲ್ಲಿರುವ ವ್ಯವಸ್ಥೆ ಫಿಡೆಲ್‌ಗೆ ಹೊಂದಿಕೆಯಾಗಲೇ ಇಲ್ಲ. ಇವರು ಏನನ್ನೂ ಕಲಿಸಲಿಲ್ಲ. ಒಂದೇ ಒಂದು ಪಾಠವನ್ನೂ ಹೇಳಿಕೊಡಲಿಲ್ಲ. ಯಾವುದೇ ಶಾಲೆಗೂ ಇವರನ್ನು ಕಳುಹಿಸಲಿಲ್ಲ. ಅವರ ಮನೆಯಲ್ಲಿ ಇದ್ದುದಷ್ಟೇ. ಆ ಮನೆಯಲ್ಲಿ ರೇಡಿಯೋ ಕೂಡಾ ಇರಲಿಲ್ಲ. ದಿನದಲ್ಲಿ ಹಲವಾರು ಗಂಟೆಗಳು ಪಿಯಾನೋ ಸಂಗೀತವಿರುತ್ತಿತ್ತು. ಅದನ್ನು ಕೇಳುತ್ತಾ ಕೂರಬೇಕಿತ್ತು. ಹಾಗೆಂದು ಫಿಡೆಲ್ ಸಂಗೀತಗಾರನೇನೂ ಆಗಲಿಲ್ಲ. ಪಿಯಾನೋ ವಾದಕಿಯಾಗಿದ್ದ ಶಿಕ್ಷಕಿಯ ಸಹೋದರಿ ಪ್ರಾಥಮಿಕ ಪಾಠಗಳನ್ನು ಹೇಳಿಕೊಡಬೇಕಿತ್ತು. ಇವರು ಯಾವುದನ್ನೂ ಹೇಳಿಕೊಡದಿದ್ದರಿಂದ ಫಿಡೆಲ್ ಸ್ವಂತವಾಗಿಯೇ ಕಲಿಕೆ ಮಾಡಬೇಕಾಯ್ತು.

ಹಸಿವಿನ ಅನುಭವ

ಕೆಂಪು ಹೊದಿಕೆಯ ಶಾಲಾ ನೋಟ್‌ಬುಕ್‌ಗಳ ಹಿಂಬದಿಯಲ್ಲಿದ್ದ ಕೂಡು, ಕಳೆ, ಗುಣಿಸು, ಭಾಗಿಸು – 'ಇವನ್ನು ಸ್ವತಃ ಕಲಿತೆ, ಕಂಠಪಾಠ ಮಾಡುತ್ತಲೇ ಅಂಕಗಣಿತ ಕಲಿತೆ, ಮತ್ತು ಕಲಿತದ್ದು ಅದು ಮಾತ್ರ, ಇಂತಹ ಪರಿಸ್ಥಿತಿಯಲ್ಲಿ ಆ ಮನೆಯಲ್ಲಿ ಎರಡು ವರ್ಷಗಳನ್ನು ಹಾಳುಮಾಡಿಕೊಂಡೆ' ಎನ್ನುತ್ತಾರೆ ಫಿಡೆಲ್. ಬಹುತೇಕ ಏನನ್ನೂ ಕಲಿಯದ ಆ ವರ್ಷಗಳು ಫಿಡೆಲ್ ಪಾಲಿಗೆ ಕಷ್ಟದ ವರ್ಷಗಳೂ ಹೌದು. ಹಸಿವು ಎಂದರೇನೆಂದೆ ಅರಿಯದ ಫಿಡೆಲ್‌ಗೆ ಈ ಅವಧಿ ಅದರ ಹಲವು ಆಯಾಮಗಳನ್ನು ಅನುಭವಿಸುವಂತೆ ಮಾಡಿತು. ಮನೆಯಿಂದ ದೂರವಿರುವ ವಸತಿ ಶಾಲೆಗೆಂದು ಹೊರಗೆ ಕಳುಹಿಸಿದ್ದನ್ನು ಫಿಡೆಲ್ ಹೇಳುವುದು ಹೀಗೆ: 'ಏನಾಯಿತೆಂದರೆ, ನನ್ನನ್ನು ಗಡೀಪಾರು ಮಾಡಿದರು, ಹಸಿವನ್ನು ಆಹಾರದ ಬಯಕೆಯನ್ನಾಗಿ ತಪ್ಪಾಗಿ ಗ್ರಹಿಸುವಂತೆ ಮಾಡಿ ಉಪವಾಸಕ್ಕೀಡು ಮಾಡಿದರು!' ಇಂತಹ ಸ್ಥಿತಿಗಾಗಿ ಫಿಡೆಲ್ ಯಾರನ್ನೂ ದೂಷಿಸುವುದಿಲ್ಲ. ಏಕೆಂದರೆ ತನ್ನ ಸುತ್ತ ಏನಾಗುತ್ತಿದೆ ಎಂದು ತಿಳಿಯುವ ಅಥವಾ ಅರ್ಥೈಸುವ ಪರಿಸ್ಥಿತಿಯಲ್ಲಿ ಇವರು ಇರಲಿಲ್ಲ. ಬೈರನ್‌ನಲ್ಲಿರುವಾಗ ಸಂತೋಷವಾಗಿದ್ದ ಮತ್ತು ತಾನು ಅತಿಯಾಗಿ ಪ್ರೀತಿಸುತ್ತಿದ್ದ ಮನೆ, ಕುಟುಂಬ, ನಿಸರ್ಗ ಸುಂದರ ಹಳ್ಳಿ ಎಲ್ಲದರಿಂದ ಇದ್ದಕ್ಕಿದ್ದಂತೆ ದೂರ ಕಳಿಸಿದ್ದರ ಬಗ್ಗೆ ಮತ್ತು ತನ್ನ ಸಂಬಂಧಿಕರಿಲ್ಲದ ಜನ ತರವಲ್ಲದ ರೀತಿಯಾಗಿ ನಡೆಸಿಕೊಂಡಿದ್ದರ ಬಗ್ಗೆ ಮಾತ್ರ ತಿಳಿದಿತ್ತು.

ಅದೃಷ್ಟವಶಾತ್ ತನ್ನ ಶಿಕ್ಷಕಿಯ ಕುಟುಂಬವಿದ್ದ ಮನೆಯ ಬಳಿ ಒಬ್ಬ ಸ್ನೇಹಿತನ ಒಡನಾಟವಿತ್ತು. ಆತನ ಹೆಸರು ಗೇಬ್ರಿಯಲಿಟೊ ಪಲೊ. ಪ್ಲಾಜಾದ ಹತ್ತಿರವೇ ಅವನ ಮನೆಯಿತ್ತು. ಪ್ಲಾಜಾದ ಇಕ್ಕೆಲಗಳ ರಸ್ತೆಯಲ್ಲಿ ಆತನೊಂದಿಗೆ ಆಟವಾಡುತ್ತಿದ್ದರು. ಈತ ಕ್ರಾಂತಿಯ ನಂತರವೂ ಅದೇ ಸ್ಥಳದಲ್ಲಿ ಉಳಿದಿದ್ದ ಮತ್ತು ನಂತರ ಟೆಲಿವಿಷನ್‌ನಲ್ಲಿ ಕೆಲಸ ಮಾಡುತ್ತಿದ್ದ. ಉಳಿದಂತೆ ಸಮಯ ಕಳೆಯುವುದು ಬಲು ಕಷ್ಟವಾಗಿತ್ತು. ಕ್ರಮೇಣ ಆ ಜೀವನ, ಆ ಮನೆ, ಅವರ ನಿಯಮಗಳು ಎಲ್ಲವೂ ತೀರಾ ಬೇಸರ ತರಿಸಿದವು. ಆ ಕುಟುಂಬ ಫ್ರೆಂಚ್ ರೀತಿನೀತಿಗಳನ್ನು ಹೊಂದಿತ್ತು. ಅತ್ಯಂತ ಕಟ್ಟುನಿಟ್ಟಾದ ಫ್ರೆಂಚ್ ಮಾತನಾಡುತ್ತಿದ್ದರು. ಉತ್ತಮ ವಿದ್ಯಾಭ್ಯಾಸದ ಅವರು ಅತಿಯಾದ ಶಿಷ್ಟಾಚಾರದ ಜನ. ಅತ್ಯಂತ ವಿನಯ ಪೂರ್ವಕವಾಗಿ ಮಾತನಾಡಬೇಕಿತ್ತು. ಧ್ವನಿಯೇರಿಸಿ ಮಾತನಾಡುವುದು ನಿಷಿದ್ಧ ಮತ್ತು ಒಂದೇ ಒಂದು ಸರಿಯಿಲ್ಲದ ಶಬ್ದವನ್ನೂ ಬಳಸುವಂತಿರಲಿಲ್ಲ. ಅವರು ತಿಳಿದ ರೀತಿಯನ್ನು ಕಾಪಾಡಲು ಒಮ್ಮೊಮ್ಮೆ ಹೊಡೆಯುತ್ತಿದ್ದರು ಕೂಡಾ. ಶಿಸ್ತು ಪಾಲಿಸದಿದ್ದರೆ ವಸತಿ ಶಾಲೆಗೆ ಕಳುಹಿಸಿ ಬಿಡುವುದಾಗಿ ಹೆದರಿಸುತ್ತಿದ್ದರು. ಆದರೂ ಇವನ್ನೆಲ್ಲಾ ಉಪಶಮನ ಮಾಡುವ ಕೆಲ ಅಂಶಗಳಿದ್ದವು. ಶಿಕ್ಷಕಿಯ ಕುಟುಂಬ ಬಡತನದಿಂದ ಕೂಡಿತ್ತು. ಆಕೆಯ ಸಂಬಳದ ಮೇಲೆ ಕುಟುಂಬ ಅವಲಂಬಿಸಿತ್ತು. ಆದರೆ ಸರ್ಕಾರ ಕೆಲವು ಬಾರಿ ಮೂರು ತಿಂಗಳು ಅಥವಾ ಅದಕ್ಕೂ ಹೆಚ್ಚು ಕಾಲ ಸಂಬಳವನ್ನೇ ನೀಡುತ್ತಿರಲಿಲ್ಲ. ಅವರ ಅನಿಶ್ಚತತೆಗೆ ಇದು ಕಾರಣವಾಗಿತ್ತು. ಅವರು ಖರ್ಚು ಮಾಡುವ ಪ್ರತಿ ಪೈಸೆ(ಸೆಂಟಾವೊ)ಯೂ ಜೀವನ್ಮರಣದ ಪ್ರಶ್ನೆಯೆಂಬಂತಿತ್ತು.

ಅಣ್ಣ ರೆಮೋನ್ ಆಗಮವ

ಸ್ಯಾಂಟಿಯಾಗೊದಲ್ಲಿ ಆಹಾರ ತುಂಬಾ ಇಷ್ಟವಾಗುತ್ತಿತ್ತು. ಇದ್ದಕ್ಕಿದ್ದಂತೆ ಅನ್ನ ತುಂಬಾ ರುಚಿಕರವಾಗಿರುವುದನ್ನು ಕಂಡುಕೊಂಡರು. ಕೆಲವೊಮ್ಮೆ ಅನ್ನದ ಜೊತೆ ಸಿಹಿ ಆಲೂಗಡ್ಡೆ ಅಥವಾ ಪಿಕ್ಯಾಡಿಲ್ಲೋ1 ನೀಡುತ್ತಿದ್ದರು. ಸಮಸ್ಯೆ ಏನೆಂದರೆ ಆ ಸ್ವಲ್ಪ ಆಹಾರವನ್ನೇ ಮಧ್ಯಾಹ್ನ–ರಾತ್ರಿ ಕೂಡಾ ನಿಭಾಯಿಸಬೇಕಾಗಿತ್ತು. ಊಟದ ಪ್ರಮಾಣ ಹೇಗಿರುತ್ತಿತ್ತೆಂದರೆ ತನ್ನ ತಟ್ಟೆಯಲ್ಲಿದ್ದ ಕೊನೆಯ ಅಗುಳನ್ನೂ ಮುಳ್ಳು ಚಮಚದಿಂದ ಚುಚ್ಚಿ ತಿನ್ನುವ ಪರಿಸ್ಥಿತಿಯಲ್ಲಿತ್ತು. ಇಂತಹ ಪರಿಸ್ಥಿತಿಯಲ್ಲಿ ಫಿಡೆಲ್‌ನ ಅಣ್ಣ ರೇಮೊನ್‌ನನ್ನೂ ಸಹ ಇದೇ ಮನೆಗೆ ಕಳುಹಿಸಿಬಿಟ್ಟರು.

ಈತ ತನ್ನ ಜೊತೆಯಲ್ಲಿ ಸಾಕಷ್ಟು ನಾಣ್ಯಗಳಿದ್ದ ಕೈಚೀಲವನ್ನು ತಂದಿದ್ದ. ಫಿಡೆಲ್‌ಗೆ ಇದರಿಂದ ಖುಷಿಯಾಯಿತು. ಇದರಲ್ಲಿ ಕೆಲವು ಪೆಸೆಟಾಸ್ (20 ಸೆಂಟಾವೊ), ರಿಯೇಲ್ಸ್ (10 ಸೆಂಟಾವೊ), ಐದು ಸೆಂಟಾವೊ ನಾಣ್ಯಗಳು ಮತ್ತು ಒಂದು ಸೆಂಟಾವೊ ನಾಣ್ಯಗಳು ಇದ್ದವು. ಆ ಕಾಲದಲ್ಲಿ ಒಂದು ಪಾಪ್ಸಿಕಲ್2 ಒಂದು ಸೆಂಟಾವೊಗೆ, ಕೊಬ್ಬರಿ ಮಿಠಾಯಿ ಒಂದು ಸೆಂಟಾವೊಗೆ ಸಿಗುತ್ತಿತ್ತು. ಅಲ್ಲಿನ ನೆರೆಹೊರೆಯ ಮಕ್ಕಳು ಬಡವರಾಗಿದ್ದರೂ ಒಂದೆರೆಡು ಸೆಂಟಾವೊಗಳನ್ನು ಇದಕ್ಕಾಗಿ ಖರ್ಚು ಮಾಡುತ್ತಿದ್ದರು. ಇದರಿಂದ ಬಾಲಕ ಫಿಡೆಲ್‌ಗೆ ಅಸೂಯೆಯಾಗುತ್ತಿತ್ತು. ಆದರೆ ಫ್ರೆಂಚ್ ಮಾದರಿಯ ರೀತಿನೀತಿಗಳು ಇವೆಲ್ಲದರಿಂದ ಕಟ್ಟಾಕಿದಂತಾಗಿತ್ತು. ಹೀಗಾಗಿ ರೇಮೊನ್ ಬಂದಾಗ ಅವನು ತಂದಿದ್ದ ನಾಣ್ಯಗಳನ್ನು ನೋಡಿ ಎಷ್ಟು ಪೆಪ್ಸಿಕಲ್‌ಗಳು ಎಷ್ಟು ಕೊಬ್ಬರಿ ಮಿಠಾಯಿಗಳನ್ನು ತಿನ್ನಬಹುದೆಂದು ಅಂದಾಜು ಮಾಡಿದ್ದ. ಆದರೆ ಊಟಕ್ಕೆ ಮತ್ತೊಂದು ಬಾಯಿ ಹೆಚ್ಚಾಗಿ ಆಹಾರದ ಬಡತನ ತೀವ್ರಗೊಂಡಿತು. □

---

1. ಪಿಕ್ಯಾಡಿಲ್ಲೋ : ಮಾಂಸ ರಸಾಯನ – ತುಂಡರಿಸಿದ ಮಾಂಸದ ಚೂರುಗಳ ಜೊತೆ ಟೊಮ್ಯಾಟೊ ಸಾಸ್, ಈರುಳ್ಳಿ, ಬೆಳ್ಳುಳ್ಳಿ ಮತ್ತು ಇತರೆ ಪದಾರ್ಥಗಳಿಂದ ತಯಾರು ಮಾಡಿದ ಅಡುಗೆ.

2. ಪಾಪ್ಸಿಕಲ್ : ಹಣ್ಣುಗಳಿಂದ ಮಾಡಿದ ಘನೀಕೃತ ಐಸ್. ಕೆಲವೊಮ್ಮೆ ವಾಣಿಜ್ಯದ ದೃಷ್ಟಿಯಿಂದ ಕರಕುಶಲತೆಯಿಂದ ಮಾಡಿ ಖಾಸಗಿ ಮನೆಗಳಲ್ಲಿ ಮಾರುತ್ತಿದ್ದರು.

ದೇಶದ ಆಸ್ತಿಗಳ 'ಆಯಕಟ್ಟಿನ ಮಾರಾಟ' ಮಾಡಬೇಕಾದ ಕೆಟ್ಟ ಆರ್ಥಿಕ ಪರಿಸ್ಥಿತಿ ನಿರ್ಮಾಣವಾಗಿದೆಯೇ?

ಶೇರು ಮಾರುಕಟ್ಟೆ ಕುಸಿಯುತ್ತಿರುವಾಗ 'ಒಳ್ಳೆಯ ದಿನಗಳ' ಸರಕಾರ ದೇಶದ ಆಸ್ತಿಗಳಾದ ಕೆಲವು ಅತ್ಯಂತ ದಕ್ಷ ಮತ್ತು ಲಾಭದಲ್ಲಿರುವ ಸಾರ್ವಜನಿಕ ವಲಯದ ಉದ್ದಿಮೆಗಳ 'ಆಯಕಟ್ಟಿನ ಮಾರಾಟ'ದ ಯೋಚನೆ ಮಾಡುತ್ತಿದೆ ಎಂದು ವರದಿಯಾಗಿದೆ.

ಇದು ದೇಶದ ಮೂಲಭೂತ ಆರ್ಥಿಕ ಶಕ್ತಿಯನ್ನು ಅಗ್ಗದಲ್ಲಿ ಮಾರಿ ಬಿಡುವ ಕ್ರಮ ಎಂದು ದೇಶದ ಪ್ರಮುಖ ಕಾರ್ಮಿಕ ಸಂಘಟನೆ ಸಿಐಟಿಯು ಅಭಿಪ್ರಾಯ ಪಟ್ಟಿದೆ.

'ಆಯಕಟ್ಟಿನ ಮಾರಾಟ'ದ ಪಟ್ಟಿಯಲ್ಲಿ ಜಗದ್ವಿಖ್ಯಾತ ಬಿಹೆಚ್ಇಎಲ್, ಭಾರೀ ಲಾಭ ಗಳಿಸುತ್ತಿರುವ ತೈಲ ಮಾರಾಟ ಕಂಪನಿಗಳಾದ ಹೆಚ್‌ಪಿಸಿಎಲ್, ಬಿಪಿಸಿಎಲ್ ಮತ್ತು ಐಒಸಿ ಇವೆ. ಅಲ್ಲದೆ ಒಎನ್‌ಜಿಸಿ, ರಕ್ಷಣಾ ವಲಯದ ಬಿಇಎಂಎಲ್, ಹೆಚ್‌ಎಎಲ್ ಮುಂತಾದವುಗಳು ಸೇರಿವೆ ಎಂದು ವರದಿಯಾಗಿದೆ. ಅಂದರೆ ಇಡೀ ದೇಶವನ್ನೇ ಮಾರಾಟಕ್ಕಿಟ್ಟಂತೆ ಎಂದು ಸಿಐಟಿಯು ವರ್ಣಿಸಿದೆ. ದೇಶದ ಆರ್ಥಿಕ ನಮ್ಮ ಆಸ್ತಿಗಳನ್ನು ಮಾರಿ ಬಿಡಬೇಕಾದಂತಹ ಕೆಟ್ಟ ಪರಿಸ್ಥಿತಿಯನ್ನು ತಲುಪಿದೆಯೇ, ಹಾಗಿದ್ದರೆ ದಿನ ಬೆಳಗಾದರೆ ದೇಶದ ಆರ್ಥಿಕ ಜಗತ್ತಿನಲ್ಲೇ ಅತಿ ವೇಗದಲ್ಲಿ ಬೆಳೆಯುತ್ತಿರುವಂತದ್ದು ಎಂದುಬೆನ್ನು ತಟ್ಟಿಕೊಳ್ಳುವ ದಾವೆಗಳು ಹೇಗೆ ಸಾಧ್ಯ ಎಂದು ಸಿಐಟಿಯು ಪ್ರಶ್ನಿಸಿದೆ.

ದೇಶದ ಆಸ್ತಿಗಳನ್ನು ಮಾರಿ ಜಾಗತಿಕ ಬಂಡವಳಿಗರಿಗೆ 'ಒಳ್ಳೆಯ ದಿನ'ಗಳನ್ನು ಕೊಡಮಾಡುವುದು ದೇಶಪ್ರೇಮವೇ ಎಂದು ಮೋದಿ ಸರಕಾರದ ಧೋರಣೆಗಳನ್ನು ಟೀಕಿಸುವವರನ್ನೆಲ್ಲ ರಾಷ್ಟ್ರದ್ರೋಹಿಗಳು ಎನ್ನುವವರನ್ನು ಕೇಳಬೇಕಾಗಿದೆ. ಬಿಜೆಪಿ ಕೇಂದ್ರ ಸರಕಾರದ ಈ ವಿನಾಶಕಾರಿ ಆಟವನ್ನು ದೇಶಪ್ರೇಮಿ ಜನಗಳು ಸಹಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಸಿಐಟಿಯು ಎಚ್ಚರಿಸಿದೆ.

ತಮ್ಮ ಸ್ವಂತ ಸಂಪನ್ಮೂಲಗಳಿಂದ ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಹೂಡಿಕೆ ಮಾಡುತ್ತಿರುವ, ದೇಶದ ಬೊಕ್ಕಸಕ್ಕೆ ಭಾರೀ ಕೊಡುಗೆಗಳನ್ನು ನೀಡುತ್ತಿರುವ ಈ ಉದ್ದಿಮೆಗಳ 'ಆಯಕಟ್ಟಿನ ಮಾರಾಟ'ದ ವಿನಾಶಕಾರೀ ಕ್ರಮವನ್ನು ಕೈಬಿಡಬೇಕು ಎಂದು ಸಿಐಟಿಯು ಸರಕಾರವನ್ನು ಆಗ್ರಹಿಸಿದೆ.

ತಕ್ಷಣವೇ ಈಕ್ರಮವನ್ನು ಪ್ರತಿಭಟಿಸಬೇಕು, ಕೇಂದ್ರ ಹಣಕಾಸು ಮಂತ್ರಿಗಳು ಮತ್ತು ಪ್ರಧಾನ ಮಂತ್ರಿಗಳಿಗೆ "ಸಾರ್ವಜನಿಕ ವಲಯದ ಉದ್ದಿಮೆಗಳ ಶೇರು ಮಾರಾಟವನ್ನು ನಿಲ್ಲಿಸಿ, ಆಯಕಟ್ಟಿನ ಮಾರಾಟ ಬೇಡವೇ ಬೇಡ" ಎಂದು ಫ್ಯಾಕ್ಸ್ ಅಥವ ಇ–ಮೇಲ್‌ಗಳನ್ನು ಕಳಿಸಬೇಕು ಎಂದು ಸಿಐಟಿಯು ಎಲ್ಲ ಕಾರ್ಮಿಕ ಸಂಘಗಳಿಗೆ ಕರೆ ನೀಡಿದೆ.

ಅಲಿಗಡ ಮುಸ್ಲಿಂ ವಿಶ್ವವಿದ್ಯಾಲಯ ಮತ್ತು ಜಾಮಿಯ ಮಿಲಿಯ 'ಅಲ್ಪಸಂಖ್ಯಾತರ ಸಂಸ್ಥೆಗಳು' ಅಲ್ಲ ಎನ್ನುವಾಗ ಜಾತ್ಯಾತೀತ ಸಂವಿಧಾನದ ನೆನಪು!

ಅಲಿಗಡ ಮುಸ್ಲಿಂ ವಿಶ್ವವಿದ್ಯಾಲಯ ಮತ್ತು ದಿಲ್ಲಿಯ ಜಾಮಿಯ ಮಿಲಿಯ ಇಸ್ಲಾಮಿಯ ಸಂಸತ್ತಿನ ಶಾಸನದ ಪ್ರಕಾರ ರಚಿಸಲ್ಪಟ್ಟವುಗಳು, ಅವುಗಳನ್ನು 'ಅಲ್ಪಸಂಖ್ಯಾತರ ಸಂಸ್ಥೆಗಳು' ಎಂದು ಪರಿಗಣಿಸುವಂತಿಲ್ಲ, ಏಕೆಂದರೆ ಭಾರತದ ಜಾತ್ಯತೀತ ಸಂವಿಧಾನ ಉನ್ನತ ಶಿಕ್ಷಣ ಸಂಸ್ಥೆಗಳಿಗೆ, ಅದರಲ್ಲೂ ಅಲ್ಪಸಂಖ್ಯಾತರ ಶಿಕ್ಷಣ ಮತ್ತು ಸಂಸ್ಕೃತಿಯ ಪ್ರೋತ್ಸಾಹಕ್ಕೆ ಸರಕಾರ ನಿಧಿಗಳನ್ನು ಕೊಡುವುದಕ್ಕಾಗಲೀ, ಅವನ್ನು ರಚಿಸಲು ಕೂಡ ಅನುಮತಿ ಕೊಡುವುದಿಲ್ಲ ಎಂದು ಮೋದಿ ಸರಕಾರದ ಪರವಾಗಿ ವಾದಿಸುತ್ತ ಅಟೊರ್ನಿ ಜನರಲ್ ಅವರು ಸುಪ್ರಿಂ ಕೋರ್ಟ್‌ನಲ್ಲಿ ವಾದ ಮಂಡಿಸಿದ್ದಾರೆ. ಅಂದರೆ ಭಾರತದಲ್ಲಿ ಮುಸ್ಲಿಮ್ ಅಲ್ಪಸಂಖ್ಯಾತರ ಆಧುನೀಕರಣಕ್ಕಾಗಿಯೆಂದೇ ಸ್ಥಾಪನೆಗೊಂಡ ಈ ಶಿಕ್ಷಣ ಸಂಸ್ಥೆಗಳು ಸರಕಾರದಿಂದ ಏನೂ ಸಹಾಯ ನಿರೀಕ್ಷಿಸಬಾರದು, ಇಲ್ಲವೇ 'ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಗಳು' ಎಂಬ ತಮ್ಮ ವೈಶಿಷ್ಟ್ಯವನ್ನು ಬಿಟ್ಟುಕೊಡಬೇಕು ಎಂಬುದು 'ಒಳ್ಳೆಯ ದಿನ'ಗಳ ಮಂದಿಯ ವಾದ.

ಕಳೆದ ವರ್ಷ ಜನವರಿ 15 ರಂದು ಭಾರತದ ಸರ್ವೋಚ್ಚ ನ್ಯಾಯಾಲಯ "ಒಂದು ಸಂಸ್ಥೆಗೆ ಅಲ್ಪಸಂಖ್ಯಾತ ಸ್ಥಾನಮಾನವನ್ನು ನೀಡುವ ಅಧಿಕಾರ ಸಂಪೂರ್ಣವಾಗಿ ಕೇಂದ್ರ ಸರಕಾರಕ್ಕೆ ಸೇರಿದ್ದು. ಅದು ಸಂಬಂಧಪಟ್ಟ ಮಾಹಿತಿಗಳ ಆಧಾರದಲ್ಲಿ ನಿರ್ಧಾರ ಕೈಗೊಳ್ಳಬಹುದು" ಎಂದಿತ್ತು. .ಮೋದಿ ಸರಕಾರ ಈ ಎರಡು ಸಂಸ್ಥೆಗಳಿಗೆ ಆ ಸ್ಥಾನಮನ ಕೊಡಬಾರದು ಎಂದು ನಿರ್ಧರಿಸಿದೆ. ಆದರೆ ಅದಕ್ಕೆ ಆಧಾರ ಈ ಸಂಸ್ಥೆಗಳಿಗೆ ಸಂಬಂಧಪಟ್ಟ ವಿಷಯಗಳಲ್ಲ, ನಮ್ಮ ಸಂವಿಧಾನ ಜಾತ್ಯಾತೀತ ಎಂಬ ಕಾರಣಕ್ಕೆ!

ಈ ಎರಡು ಶಿಕ್ಷಣ ಸಂಸ್ಥೆಗಳು ಬ್ರಿಟಿಶರ ವಸಾಹತುಶಾಹೀ ಆಳ್ವಿಕೆಯ ವಿಶೇಷ ಚಾರಿತ್ರಿಕ ಸಂದರ್ಭದಲ್ಲಿ ಸ್ಥಾಪನೆಯಾದವುಗಳು. ಸ್ವತಂತ್ರ ಭಾರತದ ಸಂವಿಧಾನದ ಕಲಮು 30 ಎಲ್ಲ ಅಲ್ಪಸಂಖ್ಯಾತರು ತಮ್ಮ ಆಯ್ಕೆಯ ಶೈಕ್ಷಣಿಕ ಸಂಸ್ಥೆಗಳನ್ನು ಸಥಪಿಸಬಹುದು, ಅವಕ್ಕೆ ಭಾರತದ ಪ್ರಭುತವ ಹಣ ಸಹಾಯ ನೀಡುತ್ತದೆ ಎಂದಿದೆ ಎಂಬ ಸಂಗತಿಯತ್ತ ಪರಿಣಿತರು ಗಮನ ಸೆಳೆದಿದ್ದಾರೆ.

ಅದಿರಲಿ, ಮೋದಿ ಸರಕಾರ ನಮ್ಮದು ಜಾತ್ಯಾತೀತ ಸಂವಿಧಾನವಾದ್ದರಿಂದ ಧಾರ್ಮಿಕ ಅಧಾರದಲ್ಲಿ ವರ್ತಿಸಲು ಸಾಧ್ಯವಿಲ್ಲ ಎಂದು ನಿಜವಾಗಿಯೂ ನಂಬಿದೆಯೇ ಎಂಬ ಪ್ರಶ್ನೆಯನ್ನು ಹಲವರು ಎತ್ತಿದ್ದಾರೆ.

ಬಿಜೆಪಿ ಆಳ್ವಿಕೆಯ ಮಧ್ಯಪ್ರದೇಶದಲ್ಲಿ ಸಂಪೂರ್ಣವಾಗಿ ಸರಕಾರದ ಬೊಕ್ಕಸದಿಂದಲೇ ನಡೆಯುವ ಶಾಲೆಗಳಲ್ಲಿ 'ಸೂರ್ಯ ನಮಸ್ಕಾರ' , 'ಗಾಯತ್ರಿ ಮಂತ್ ರಪಠನ' ಮತ್ತು 'ಓಂ' ಪಠಣವನ್ನು ಕಡ್ಡಾಯ ಗೊಳಿಸಿದೆ. ಛತ್ತೀಸ್‌ಗಡದ ಬಿಜೆಪಿ ಸರಕಾರ ಕ್ರಿಶ್ಚಿಯನ್ ಮಿಶನರಿ ಶಾಲೆಗಳಲ್ಲಿ ವಿದ್ಯಾರ್ಥಿಗಳು ತಮ್ಮ ಪ್ರಿನ್ಸಿಪಾಲರನ್ನು 'ಫಾದರ್' ಎಂದು ಸಂಬೋಧಿಸಬಾರದು, 'ಆಚಾರ್ಯ' ಎನ್ನಬೇಕು ಎಂದು ವಿಧಿಸಿದೆ ಎಂಬ ಸಂಗತಿಯತ್ತ ಶಿಕ್ಷಣವೇತ್ತ ಸಿ.ಪಿ.ಬಾಂಬ್ರಿಯವರು ಗಮನ ಸೆಳೆದಿದ್ದಾರೆ. ಇಂತಹ ಹಲವು ಉದಾಹರಣೆಗಳನ್ನು ಕೊಡಬಹುದು ಎಂದು ಅವರು ಹೇಳುತ್ತಾರೆ. ಈ ಸರಕಾರಗಳನ್ನು ನಡೆಸುವ ಬಿಜೆಪಿ ಮಂದಿಗೆ ಭಾರತದ್ದು ಜಾತ್ಯಾತೀತ ಸಂವಿಧಾನ ಎಂದು ತಿಳಿದಿರಲಿಕ್ಕಿಲ್ಲವೇ?

ಸ್ವತಃ ಪ್ರಧಾನ ಮಂತ್ರಿಗಳೇ ಮುಖ್ಯಸ್ಥರಾಗಿರುವ ಉನ್ನತ ಅಧಿಕಾರದ ಸಮಿತಿ ಶಾಲಾ, ಕಾಲೇಜು ಮತ್ತು ವಿಶ್ವವಿದ್ಯಾಲಯದಗಳಲ್ಲಿ 'ಯೋಗ ಕಲೆ ಮತ್ತು ವಿಜ್ಞಾನ'ವನ್ನು ಕಲಿಸಲು ನಿರ್ಧರಿಸಿದೆಯಂತೆ, ಇದರ ಪಠ್ಯಕ್ರಮವನ್ನು ಪ್ರಧಾನ ಮಂತ್ರಿಗಳ ಯೋಗ ಶಿಕ್ಷಕರೇ ರೂಪಿಸುತ್ತಿದ್ದಾರೆ ಎಂದು ವರದಿಯಾಗಿದೆ. ಬಹುಶಃ ಇದು 'ಜಾತ್ಯಾತೀತ' ಕ್ರಮ ಎಂದು 'ಅಚ್ಛೇ ದಿನ್'ವಾಲಾಗೂ ವಾದಿಸಬಹುದು. ಆದರೆ ಧಾರ್ಮಿಕ ಅಲ್ಪಸಂಖ್ಯಾತರಿಗೆ, ಮುಸ್ಲಿಮರಿಗೂ, ಕ್ರೈಸ್ತರಿಗೂ ಇದು ಶಿಕ್ಷಣ ವ್ಯವಸ್ಥೆಯ ಮೂಲಕ 'ಹಿಮದೂಕರಣ'ದ ಪ್ರಯತ್ನ, ತಮ್ಮ ಸಾಂಸ್ಕೃತಿಕ ವೈಶಿಷ್ಟ್ಯತೆಯನ್ನು ನಿರಾಕರಿಸುವ ಕ್ರಮ ಎಂದು ಅನಿಸಿದರೆ ಆಸ್ಚರ್ಯವೇನಿಲ್ಲ. ಈ ಹಿನ್ನೆಲೆಯಲ್ಲಿ ಅಲಿಗಡ ವಿಶ್ವವಿದ್ಯಾಲಯ ಮತ್ತು ಜಾಮಿಯ ಮಿಲಿಯ 'ಅಲ್ಪಸಂಖ್ಯಾತ ಸಂಸ್ಥೆಗಳು 'ಅಲಲ್ ಎಂಬ ಮೋದಿ ಸರಕಾರದ ವಾದ ಅವರಲ್ಲಿ ಭೀತಿ ಹುಟ್ಟಿಸುವುದು ಸಹಜ.

ಇಂತಹ ಭೀತಿ, ಸಂದೇಹ ಮೋದಿ ಸರಕಾರದ ಅಟೊರ್ನಿ ಜನರಲ್ ಅವರೇ ಹೇಳಿದಂತೆ ಜಾತ್ಯಾತೀತ ಸಂವಿಧಾನವನ್ನು ಹೊಂದಿರುವ ಭಾರತದ ಪ್ರಜಾಪ್ರಭುತ್ವಕ್ಕೆ ಒಳ್ಳೆಯದಲ್ಲ ಎಂದು ಪ್ರಜಾಪ್ರಭುತ್ವವಾದಿಗಳ ಆತಂಕ. ಏಕೆಂದರೆ ತಮ್ಮ ಭಾಷೆ, ಸಂಸ್ಕೃತಿಯನ್ನು ರಕ್ಷಿಸಿಕೊಳ್ಳುವ ಹಕ್ಕನ್ನು ಒಂದು ಪ್ರಜಾಪ್ರಭುತ್ವ ನೀಡುತ್ತದೆ, ಮತೀಯ ಪ್ರಭುತ್ವದಲ್ಲಿ ಮಾತ್ರ ಆ ಹಕ್ಕನ್ನು ನಿರಾಕರಿಸಲಾಗುತ್ತದೆ.

ಈ ವಿದ್ಯಮಾನದ ಸಾರಾಂಶವೆಂದರೆ ಕೇಂದ್ರದ ಸರಕಾರದ 'ಪ್ರಸ್ತುತ' ಸೈದ್ಧಾಂತಿಕ ನಂಬಿಕೆಗಳನ್ನು ಈಡೇರಿಸಲು ಇತಿಹಾಸದ ಸಂಗತಿಗಳನ್ನು ಉಪೇಕ್ಷಿಸಲಾಗುತ್ತಿದೆ ಎಂದು ಸಿ.ಪಿ. ಬಾಂಬ್ರಿಯವರು ಅಭಿಪ್ರಾಯ ಪಡುತ್ತಾರೆ.

ಅಚ್ಛೇ ದಿನ್ ದೋಸೆ ರೆಸ್ಟೋರೆಂಟ್



ವ್ಯಂಗ್ಯಚಿತ್ರ ಕೃಪೆ: ಸತೀಶ್ ಆಚಾರ್ಯ



ಮಾಲೆಗಾಂವ್ ಸ್ಫೋಟ ಕೇಸನ್ನೂ ಹುಸಿಗೊಳಿಸುವ ಹುನ್ನಾರ?

ಫೆಬ್ರುವರಿ 3ರಂದು ರಾಷ್ಟ್ರೀಯ ತನಿಖಾ ಸಂಸ್ಥೆ(ಎನ್‌ಐಎ) 2008ರ ಮಾಲೇಗಾಂವ್ ಸ್ಫೋಟಗಳ ಹನ್ನೊಂದು ಆಪಾದಿತರ ವಿರುದ್ಧ ಆಪಾದನೆಗಳನ್ನು ಪಟ್ಟಿ ಮಾಡುವುದನ್ನು ಮಹಾರಾಷ್ಟ್ರ ಸಂಘಟಿತ ಅಪರಾಧ ಹತೋಟಿ ಕಾಯ್ದೆ(ಎಂಕೊಕ)ಯ ಅಡಿಯಲ್ಲಿ ಆಪಾದನೆಗಳನ್ನು ಕೈಬಿಡಬಹುದೇ ಎಂದು ಅಟೊರ್ನಿ ಜನರಲ್ ಅವರ ಅಭಿಪ್ರಾಯ ಬರುವ ವರೆಗೆ ಮುಂದೂಡಬೇಕು ಎಂದು ವಿಶೇಷ ನ್ಯಾಯಾಲಯವನ್ನು ಕೇಳಿಕೊಂಡಿದೆಯಂತೆ.

ಆದರೆ ಅಟೊರ್ನಿ ಜನರಲ್‌ಗೂ ಈ ಕೇಸಿಗೂ ಏನು ಸಂಬಂಧ? ಇದೆಲ್ಲ ಕೇವಲ ರಾಜಕೀಯ, ಅವರು ಪ್ರತಿಯೊಬ್ಬರಿಗೂ ಮೋಸ ಮಾಡುತ್ತಿದ್ದಾರೆ ಎಂದು ಈ ಕೇಸಿನಲ್ಲಿ ಎನ್‌ಐಎ ಪರ ವಕೀಲರಾಗಿದ್ದ ರೋಹಿಣಿ ಸಾಲ್ಯಾನ್ ಹೇಳಿದ್ದಾರೆ.

ಕೇಂದ್ರದಲ್ಲಿ ಮೋದಿ ಸರಕಾರ ಬಂದ ಮೇಲೆ ಇವರನ್ನು ಈ ಕೇಸಿನಲ್ಲಿ ನಿಧಾನವಾಗಿ ಸಾಗಿ ಎಂದು ಹೇಳಲಾಗಿತ್ತು, ಅದಕ್ಕೆ ಒಪ್ಪದ ಅವರು ಈ ಕೇಸಿನಿಂದ ಹಿಂದೆ ಸರಿದಿದ್ದರು ಎಂಬುದನ್ನು ನೆನಪಿಸಿಕೊಳ್ಳಬಹುದು. ಆಗ ಎನ್‌ಐಎ ಹಾಗೇನೂ ಹೇಳಿಲ್ಲ ಎಂದು ಹೇಳಿತ್ತು. ಆದರೆ ಈಗ ಎಂಕೋಕದ ಅಡಿಯಲ್ಲಿ ಆಪಾದನೆಗಳನ್ನು ಹಿಂತೆಗೆದುಕೊಳ್ಳುವ ಸೂಚನೆ ರೋಹಿಣಿ ಸಾಲ್ಯಾನ್ ಹೇಳಿದ್ದು ನಿಜ ಎಂಬುದನ್ನು ಸಾಬೀತು ಮಾಡಿದೆ.

ಸಾಧ್ವಿ ಪ್ರಜ್ಞಾ ಸಿಂಗ್ ಠಾಕುರ್ ಮತ್ತು ಲೆಫ್ಟಿನೆಂಟ್ ಕರ್ನಲ್ ಶ್ರೀಕಾಂತ ಪುರೋಹಿತ್ ಕೂಡ ಈ ಕೇಸಿನ ಹನ್ನೊಂದು ಆಪಾದಿತರಲ್ಲಿ ಸೇರಿದ್ದಾರೆ.

ಎಂಕೋಕ ಒಂದು ಕಠಿಣವಾದ ಕಾಯ್ದೆ. ಅದರ ಅಡಿಯಲ್ಲಿ ಆಪಾದನೆಗಳನ್ನು ಕೈಬಿಟ್ಟರೂ ಈ ಕೇಸ್ ಕುಸಿಯುವುದಿಲ್ಲ, ಸಾಕ್ಷಿಗಳು ಹೇಳಿರುವ ವಿವಿಧ ಪಿತೂರಿ ಸಭೆಗಳ ಮೇಲೂ ನಾಲ್ವರನ್ನು ಬಲಿ ತೆ–ಗೆದುಕೊಂಡು 70ಕ್ಕೂ ಹೆಚ್ಚು ಮಂದಿಯನ್ನು ಗಾಯಗೊಳಿಸಿದ ಸ್ಫೋಟದ ಈ ಕೇಸ್ ನಿಲ್ಲುತ್ತದೆ ಎಂದು ಮುಂದುವರೆದು ರೋಹಿಣಿ ಸಾಲ್ಯಾನ್ ಹೇಳುತ್ತಾರೆ.

ಆದರೆ ಆಪಾದತರ ಪರವಾದ ವಕೀಲರು ಹಾಗೆ ಭಾವಿಸುತ್ತಿಲ್ಲ.

ಈ ಕೇಸನ್ನು ಮೊದಲಿಗೆ ಹೇಮಂತ ಕರ್ಕರೆ ನೇತೃತ್ವದ ಮಹಾರಾಷ್ಟ್ರ ಭಯೋತ್ಪಾದನಾ–ನಿರೋಧಕ ತಂಡ ಕೈಗೆತ್ತಿಕೊಂಡಾಗ ತನಿಖೆ ಸಾಧ್ವಿ ಪ್ರಜ್ಞಾ ಠಾಕುರ್‌ಳತ್ತ ಒಯ್ಯಿತು. ನಂತರ ಕರ್ನಲ್ ಪುರೋಹಿತ್ ಈ ಸ್ಫೋಟಗಳಿಗೆ ಆರ್‌ಡಿಎಕ್ಸ್ ಒದಗಿಸಿದ್ದ ಎಂಬ ಆಪಾದನೆ ಬಂತು. ಎಪ್ರಿಲ್ 13, 2011ರಲ್ಲಿ ಕೇಂದ್ರ ಗ್ರಹ ಮತ್ರಾಲಯದ ನಿರ್ದೇಶನದ ಮೇರೆಗೆ ಈ ಕೇಸನ್ನು ಎನ್‌ಐಎಗೆ ವಹಿಸಲಾಯಿತು.

ಮೋದಿ ಸರಕಾರ ಬಂದ ಮೇಲೆ 'ಹಿಂದುತ್ವ ಭಯೋತ್ಪಾದಕರು' ನಡೆಸಿದರೆನ್ನಲಾದ ಇನ್ನೆರಡು ಸ್ಫೋಟಗಳ ಕೇಸ್‌ಗಳಲ್ಲಿ, 2007ರ ಅಜ್ಮೇರ್ ಮತ್ತು ಸಮಝೌತ ಎಕ್ಸ್‌ಪ್ರೆಸ್ ಸ್ಫೋಟ ಕೇಸ್‌ಗಳಲ್ಲಿ ಸಾಕ್ಷಿಗಳು ಹಿಂದೇಟು ಹಾಕಿ ಕೇಸ್‌ಗಳು ದುರ್ಬಲಗೊಂಡವು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

'ಕನಿಷ್ಟ ಸರಕಾರ, ಗರಿಷ್ಟ ಆಳ್ವಿಕೆ' ಎಂಬುದರ ನಿಜವಾದ ಅರ್ಥ ಇದೇ ಇರಬಹುದೇ?

ಸುಮಾರು 74 ಔಷಧಿಗಳ ಮೇಲಿನ ಸೀಮಾಸುಂಕ ವಿನಾಯ್ತಿಯನ್ನು ಹಿಂತೆಗೆದುಕೊಳ್ಳಲು ಮೋದಿ ಸರಕಾರ ನಿರ್ಧರಿಸಿದೆ. ಇದ–ರಿಂದ ಈ ಔಷಧಿಗಳ ಬೆಲೆಗಳು ಏರಲಿವೆ. ಇವುಗಳಲ್ಲಿ ಕ್ಯಾನ್ಸರ್ ಔಷಧಿಗಳು, ಇತರ ಜೀವವುಳಿಸುವ ಔಷಧಿಗಳೂ ಸೇರಿವೆ ಎನ್ನಲಾಗಿದೆ. ಚೀನಾದಿಂದ ಅಗ್ಗದ ಆಮದುಗಳನ್ನು ತಡೆಯಲು ಮತ್ತು ಈ ಔಷಧಿಗಳನ್ನು ಭಾರತದಲ್ಲೇ ಉತ್ಪಾದಿಸಲಿಕ್ಕೆ ಉತ್ತೇಜನೆ ಕೊಡಲು ಈ ಕ್ರಮ ಕೈಗೊಳ್ಳಲಾಗಿದೆ ಎಂದು ಸರಕಾರದ ವಕ್ತಾರರು ಸಮರ್ಥಿಸಿ ಕೊಂಡಿದ್ದಾರೆ. ಆದರೆ ಭಾರತದ ಔಷಧಿ ಉತ್ಪಾದಕರ ಸಂಘಟನೆಯ ಮುಖ್ಯಸ್ಥರು ಈ ಬಗ್ಗೆ ತಮ್ಮೊಡನೇ ಸಮಾಲೋಚನೆಗಳನ್ನು ನಡೆಸಿಲ್ಲ. ಈ ಕ್ರಮದಿಂದ ಭಾರತೀಯ ರೋಗಿಗಳಿಗೆ ತೊಂದರೆಯಾಗುತ್ತದೆ ಎಂದಿದ್ದಾರೆ

–ಸುದ್ದಿ



ವ್ಯಂಗ್ಯಚಿತ್ರ ಕೃಪೆ: ಪಿ.ಮಹಮ್ಮದ್, ವಿಜಯ ಕರ್ನಾಟಕ

ಲ್ಯಾಟಿನ್ ಅಮೆರಿಕಾದ ಎಡ ಶಕ್ತಿಗಳ ಮುಂದಿರುವ ಸವಾಲುಗಳು



ಕೆ.ಎಂ.ನಾಗರಾಜ್

ಲ್ಯಾಟಿನ್ ಅಮೆರಿಕಾ ದೇಶಗಳಲ್ಲಿ ಬಹಳ ವರ್ಷಗಳಿಂದ ಸತತವಾಗಿ ಏರುತ್ತಿದ್ದ ಎಡ ಶಕ್ತಿಗಳ ಪ್ರಭಾವ ಇತ್ತೀಚೆಗೆ ಕಡಿಮೆಯಾದಂತೆ ಕಾಣುತ್ತದೆ. ಅಕ್ಟೋಬರ್ 2015ರಲ್ಲಿ, ಗ್ವಾಟೆಮಾಲದ ಅಧ್ಯಕ್ಷೀಯ ಚುನಾವಣೆಯಲ್ಲಿ ಕನ್ಸರ್ವೆಟಿವ್ ಪಕ್ಷದ ಜಿಮ್ಮಿ ಮೊರೆಲ್ಸ್ ಎಡ ಪಂಥೀಯ ಒಲವುಳ್ಳ ಅಭ್ಯರ್ಥಿಯನ್ನು ಸೋಲಿಸಿದ್ದಾರೆ. ಅರ್ಜೆಂಟೈನಾದಲ್ಲಿ, ಅಧ್ಯಕ್ಷ ಪದವಿಗೆ ನವೆಂಬರ್ 2015ರಲ್ಲಿ ನಡೆದ ಚುನಾವಣೆಯಲ್ಲಿ, ಬಹಳ ವರ್ಷಗಳಿಂದ ಅಧಿಕಾರದಲ್ಲಿರುವ, ಎಡಪಂಥೀಯ ನಿಲುವಿನ ಪೆರೋನಿಸ್ಟ್ ಪಕ್ಷದ ಡೇನಿಯಲ್ ಸ್ಕಾಲಿಯವರನ್ನು ಕನ್ಸರ್ವೆಟಿವ್ ಪಕ್ಷದ ಮರಿಷಿಯೊ ಮಾಕ್ರಿ ಅಲ್ಪ ಮತಗಳ ಅಂತರದಿಂದ ಸೋಲಿಸಿದ್ದಾರೆ. ಅರ್ಜೆಂಟೈನಾದಲ್ಲಿ, ಎಡ ಪಕ್ಷದ ಆಧಿಪತ್ಯ ಸ್ಥಾಪಿಸುವಲ್ಲಿ ಹಿಂದೆ ಅಧ್ಯಕ್ಷರಾಗಿದ್ದ ನೆಸ್ಟರ್ ಕಿರ್ಚ್‌ನರ್ ಮತ್ತು ಅವರ ನಂತರ ಅವರ ಪತ್ನಿ ಕ್ರಿಸ್ಟೀನಾ ಶ್ರಮಿಸಿದ್ದರು. ಅದೀಗ ಕೊನೆಗೊಂಡಿದೆ. ವೆನಿಝುವೆಲಾದಲ್ಲಿ, ಡಿಸೆಂಬರ್ 6 ರಂದು ಪಾರ್ಲಿಮೆಂಟಿಗೆ ನಡೆದ ಚುನಾವಣೆಯಲ್ಲಿ, ಬೊಲಿವಾರಿಯನ್ ಕ್ರಾಂತಿಯ ನಾಯಕ ಹ್ಯೂಗೊ ಚವೇಝ್‌ರವರ ನಿಧನದ ನಂತರ ಅಧಿಕಾರಕ್ಕೆ ಬಂದ ನಿಕೊಲಸ್ ಮ್ಯಾಡುರೊರವರ ಪಕ್ಷ, ಹದಿನೇಳು ವರ್ಷಗಳ ನಂತರ, ಬಹುಮತ ಕಳೆದುಕೊಂಡಿದೆ. ಬ್ರೆಸಿಲ್‌ನಲ್ಲಿ, ಅಧ್ಯಕ್ಷೆ ದಿಲ್ಮಾ ರೂಸೆಫ್ ಅವರನ್ನು ಅಧಿಕಾರದಿಂದ ಕೆಳಗಿಳಿಸುವ ಪ್ರಕ್ರಿಯೆ ಜಾರಿಯಲ್ಲಿದೆ. ದೋಷಾರೋಪಣೆಗಳನ್ನು ಎದುರಿಸಿತ್ತಿರುವ ಅವರ ಜನಪ್ರಿಯತೆ ಬಹಳವಾಗಿ ತಗ್ಗಿದೆ.

ಎಡ ವಿಚಾರಗಳು ಲ್ಯಾಟಿನ್ ಅಮೆರಿಕಾ ಖಂಡವನ್ನು ಪ್ರಭಾವಿಸಿವೆ. ಎಡ ವಿಚಾರಧಾರೆಗಳತ್ತ ವಾಲಿದ ಎಲ್ಲ ಲ್ಯಾಟಿನ್ ಅಮೆರಿಕನ್ ದೇಶಗಳು ಒಂದೇ ತೆರನಾದ ಅಭಿಪ್ರಾಯಗಳನ್ನು ಹೊಂದಿಲ್ಲ. ಕ್ಯೂಬಾ ಸಂಪೂರ್ಣವಾಗಿ ವಿಭಿನ್ನವಾಗಿದೆ. ಬ್ರೆಸಿಝಿಲ್ ಮತ್ತು ಅರ್ಜೆಂಟೈನಾ ದೇಶಗಳಿಗೆ ಹೋಲಿಸಿದರೆ, ಬೊಲಿವಿಯಾ, ಈಕ್ವೆಡಾರ್ ಮತ್ತು ವೆನಿಝುವೇಲಾ ದೇಶಗಳು ಸ್ಪಷ್ಟವಾದ ದೃಷ್ಟಿಕೋನ ಹೊಂದಿವೆ. ಮೆಕ್ಸಿಕೊ ಸೇರಿದಂತೆ ಕೆಲವು ಲ್ಯಾಟಿನ್ ಅಮೆರಿಕ ದೇಶಗಳಲ್ಲಿ ಬಲಪಂಥೀಯ ಸರ್ಕಾರಗಳಿವೆ. ಈ ಸರ್ಕಾರಗಳೂ ಸಾಮಾಜಿಕ–ರಾಜಕೀಯ–ಆರ್ಥಿಕ ಬಿಕ್ಕಟ್ಟಿಗೆ ಒಳಗಾಗಿವೆ. ಆದಾಗ್ಯೂ, ಎಡ ಶಕ್ತಿಗಳ ಪ್ರಭಾವ ಕಡಿಮೆಯಾಗುತ್ತಿರುವುದು ಸಮಾಧಾನ ತರುವ ವಿಷಯವಲ್ಲ.



> ಲ್ಯಾಟಿನ್ ಅಮೆರಿಕದಲ್ಲಿ, ಪ್ರಜಾಪ್ರಭುತ್ವದ ಪುನರ್‌ಸ್ಥಾಪನೆ ಮತ್ತು ನವ–ಉದಾರವಾದ ನೀತಿಗಳಿಂದ ನರಳುತ್ತಿದ್ದ ಜನತೆಯ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸಿದ ಕೀರ್ತಿ ಎಡ ಶಕ್ತಿಗಳಿಗೆ ಸಲ್ಲುತ್ತದೆ.
>
> ಲ್ಯಾಟಿನ್ ಅಮೆರಿಕದ ಜನತೆಯ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿದ ಎಡ ಶಕ್ತಿಗಳ ಸಾಧನೆಗೆ, ಜಾಗತಿಕವಾಗಿ, ಸರಕುಗಳ ಬೆಲೆ ಏರುತ್ತಿದ್ದ ಪರಿಸ್ಥಿತಿಯೂ ನೆರವಿಗೆ ಬಂತು.
>
> ಎಡ ಶಕ್ತಿಗಳು ಮಾಡದೆ ಉಳಿದ ಕೆಲಸವೆಂದರೆ, ಸರಕುಗಳ ಬೆಲೆ ಮುಂದೆ ಒಮ್ಮೆ ಇಳಿದ ಸಂದರ್ಭದಲ್ಲಿ ಜನರಿಗೆ ಅದರಿಂದ ಹಾನಿ ತಟ್ಟದಂತೆ ಅರ್ಥವ್ಯವಸ್ಥೆಯ ರಾಚನಿಕ ಬದಲಾವಣೆಗಳು.

ಬಂಡವಾಳಶಾಹಿಯ ಜಾಗತಿಕ ಬಿಕ್ಕಟ್ಟು, ಎಡ ಅಥವಾ ಬಲ ಎನ್ನುವ ಭೇದವಿಲ್ಲದೆ ಎಲ್ಲ ಲ್ಯಾಟಿನ್ ಅಮೆರಿಕನ್ ದೇಶಗಳನ್ನು ಬಲವಾಗಿ ತಟ್ಟಿದೆ. ಆದರೆ, ಬಂಡವಾಳಶಾಹಿಯ ಆಚೆಗೂ ನೋಡುವ ಸಾಮರ್ಥ್ಯವುಳ್ಳ ಎಡ ಪಕ್ಷಗಳು, ಈ ಬಿಕ್ಕಟ್ಟನ್ನು ಸರಿಯಾಗಿ ಗುರುತಿಸಿ ಅದಕ್ಕೆ ಪ್ರತಿ–ಕ್ರಮಗಳನ್ನು ಮತ್ತು ಸೂಕ್ತವಾದ ಸಾಂಸ್ಥಿಕ ಬದಲಾವಣೆಗಳನ್ನು ಮಾಡಿಕೊಳ್ಳಬೇಕಿತ್ತು. ಈ ಪಕ್ಷಗಳು ಹಾಗೆ ಮಾಡದಿರುವುದು ಚಿಂತೆಯ ವಿಷಯ. ಆದ್ದರಿಂದ, ಲ್ಯಾಟಿನ್ ಅಮೆರಿಕದಲ್ಲಿ ಎಡ ಶಕ್ತಿಗಳ ಪ್ರಭಾವದ ಇತಿ–ಮಿತಿಗಳತ್ತ ಗಮನಹರಿಸುವುದು ಬಹಳ ಮುಖ್ಯವಾಗುತ್ತದೆ.

ಲ್ಯಾಟಿನ್ ಅಮೆರಿಕದ ದೇಶಗಳಲ್ಲಿ ನವ–ಉದಾರವಾದವು, ಮಿಲಿಟರಿ ಸರ್ವಾಧಿಕಾರದ ಸರ್ಕಾರಗಳ ಮೂಲಕ ಅಥವಾ ಸರ್ವಾಧಿಕಾರಿ ಧೋರಣೆಗಳ ರಾಜಕೀಯ ಆಡಳಿತಗಳ ಮೂಲಕ ತಳವೂರಿತು. ನವ–ಉದಾರವಾದವು ಅಲ್ಲಿನ ಬಹುದೊಡ್ಡ ಜನಸಮೂಹದ ಮೇಲೆ ಉಂಟುಮಾಡಿದ ಅಡ್ಡಪರಿಣಾಮವು ಜಾಗತಿಕ ಬಂಡವಾಳಶಾಹಿ ಬಿಕ್ಕಟ್ಟಿನ ಕಾರಣದಿಂದ ಆದದ್ದಲ್ಲ. ಅದನ್ನು ಉಂಟುಮಾಡಿದವರು ಲ್ಯಾಟಿನ್ ಅಮೆರಿಕದ ದೇಶಗಳ ಗಣ್ಯವ್ಯಕ್ತಿಗಳು. ಈ ಶ್ರೀಮಂತರು, ಹೊಸದಾಗಿ ಅಳವಡಿಸಿಕೊಂಡ "ಆರ್ಥಿಕ ಉದಾರೀಕರಣ" ನೀತಿಗಳನ್ನು ಬಳಕೆಮಾಡಿಕೊಂಡು ತಮ್ಮ ಸಂಪತ್ತನ್ನು ಅಮೆರಿಕದ ಬ್ಯಾಂಕ್‌ಗಳಿಗೆ ವರ್ಗಾಯಿಸಿದರು. ತೀರ ಸಾಮಾನ್ಯವಾಗಿ ಕಾಣುವ ಈ ವ್ಯವಹಾರ ಲ್ಯಾಟಿನ್ ಅಮೆರಿಕದ ದೇಶಗಳ ಸಾಲ ಬಿಕ್ಕಟ್ಟಿನ ಮೂಲ ಕಾರಣವಾಯಿತು. ಏಕೆಂದರೆ, ಅದೇ ಹಣವನ್ನು ಅಮೆರಿಕದ ಬ್ಯಾಂಕುಗಳಿಂದ ವಾಪಸ್ ತರಲು, ಅದೇ ಬ್ಯಾಂಕುಗಳಿಂದ ಆ ದೇಶಗಳು ಸಾಲ ಮಾಡಬೇಕಾಗಿ ಬಂತು! ಮತ್ತು ಆ ಸಾಲದ 60% ಭಾಗ ಇದೊಂದೇ ಕಾರಣದಿಂದ ಆಗಿತ್ತು. ಸಾಲ ಬಿಕ್ಕಟ್ಟಿನಿಂದ ಹೊರ ಬರಲು ಆ ದೇಶಗಳ ಮೇಲೆ ಸಾಲದಾತರು ವಿಧಿಸಿದ "ಶರತ್ತುಗಳು" ಬಡವರು ಮತ್ತು ಮಧ್ಯಮ ವರ್ಗದವರ ಜೀವನವನ್ನು ದುರ್ಭರಗೊಳಿಸಿದವು. ಇದನ್ನೇ ಬೇರೆ ಮಾತುಗಳಲ್ಲಿ ಹೇಳುವುದಾದರೆ, ಲ್ಯಾಟಿನ್ ಅಮೆರಿಕದಲ್ಲಿ, ನವ–ಉದಾರವಾದವು ಸರ್ವಾಧಿಕಾರಿ ಧೋರಣೆಗಳ ರಾಜಕೀಯಕ್ಕೂ ಮತ್ತು ಜನತೆಯ ಆರ್ಥಿಕ ಸಂಕಷ್ಟಗಳಿಗೂ ಕಾರಣವಾಯಿತು. ಕೆಲವು ದೇಶಗಳಲ್ಲಿ ಮಾರಣಾಂತಿಕವಾಗಿಯೂ ಇತ್ತು.

ಚಾರಿತ್ರಿಕ ಕರ್ತವ್ಯ ನಿರ್ವಹಿಸಿದ ಎಡ ಶಕ್ತಿಗಳು

ಲ್ಯಾಟಿನ್ ಅಮೆರಿಕದಲ್ಲಿ, ಪ್ರಜಾಪ್ರಭುತ್ವದ ಪುನರ್‌ಸ್ಥಾಪನೆ ಮತ್ತು ನವ–ಉದಾರವಾದ ನೀತಿಗಳಿಂದ ನರಳುತ್ತಿದ್ದ ಜನತೆಯ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸಿದ ಕೀರ್ತಿ ಎಡ ಶಕ್ತಿಗಳಿಗೆ ಸಲ್ಲುತ್ತದೆ. ಈ ಎರಡು ಚಾರಿತ್ರಿಕ ಜವಾಬ್ದಾರಿಗಳನ್ನು ನಿರ್ವಹಿಸುವ ಸಾಮರ್ಥ್ಯವಿದ್ದದ್ದು ಎಡ ಶಕ್ತಿಗಳಿಗೆ ಮಾತ್ರ. ಸಾವಿರಾರು ಮಂದಿ ಎಡ ಕ್ರಿಯಾಶೀಲರು, ಚಿತ್ರಹಿಂಸೆ, ಜೈಲುವಾಸ ಅನುಭವಿಸಿದರು ಮತ್ತು ಹಲವರು ಕೊಲೆಗೀಡಾದರು. ಈ ಕಾರಣದಿಂದಲೇ ಎಡ ಶಕ್ತಿಗಳು ಅಲ್ಲಿ ಪ್ರವರ್ಧಮಾನಕ್ಕೆ ಬಂದವು. ಎಡ ಶಕ್ತಿಗಳು ಎಂತಹ ವಿಶ್ವಾಸ ಸಂಪಾದಿಸಿವೆ ಎಂದರೆ, ಈಗ ಅಧಿಕಾರದಲ್ಲಿರುವ ಬಲಪಂಥೀಯ ಸರ್ಕಾರಗಳು ಮತ್ತೊಮ್ಮೆ ಹಿಂದಿದ್ದ ಪರಿಸ್ಥಿತಿ ನಿರ್ಮಾಣ ಮಾಡುವುದು ಅಷ್ಟು ಸುಲಭವಲ್ಲ.

ಅದೇ ರೀತಿಯಲ್ಲಿ, ಎಡ ಸರ್ಕಾರಗಳು, ಲ್ಯಾಟಿನ್ ಅಮೆರಿಕದ ಉದ್ದಗಲಕ್ಕೂ ಬಡಜನರಿಗೆ ಪರಿಹಾರ ಒದಗಿಸಿವೆ. ಬ್ರೆಝಿಲ್‌ನಲ್ಲಿ, ಲೂಲ ಡಿ ಸಿಲ್ವ ಅಧ್ಯಕ್ಷರಾಗಿದ್ದ ಕಾಲದಲ್ಲಿ ಬಡವರಿಗೆ ನೇರ ನಗದು ವರ್ಗಾವಣೆ ಆರಂಭಿಸಿದ್ದರು. ನಂತರ ಅದು ಅರ್ಜೆಂಟೈನಾ ಮತ್ತು ಗ್ವಾಟೆಮಾಲಾದಲ್ಲಿ ಜಾರಿಗೆ ಬಂತು. ವರಮಾನಗಳಲ್ಲಿ ತೀವ್ರ ಪ್ರಮಾಣದ ಅಸಮತೆ ಹೊಂದಿದ್ದ ಲ್ಯಾಟಿನ್ ಅಮೆರಿಕದ ದೇಶಗಳಲ್ಲಿ, ಎಡಶಕ್ತಿಗಳು ಆಧಿಕಾರಕ್ಕೆ ಬಂದನಂತರ ಬಡತನ ಗಣನೀಯವಾಗಿ ತಗ್ಗಿದೆ.

ಮರುಹಂಚಿಕೆಯ ಕಾರ್ಯಯೋಜನೆ

ಲ್ಯಾಟಿನ್ ಅಮೆರಿಕದ ಜನತೆಯ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿದ ಎಡ ಶಕ್ತಿಗಳ ಸಾಧನೆಗೆ, ಜಾಗತಿಕವಾಗಿ, ಸರಕುಗಳ ಬೆಲೆ ಏರುತ್ತಿದ್ದ ಪರಿಸ್ಥಿತಿಯೂ ನೆರವಿಗೆ ಬಂತು. ಖನಿಜಗಳ ರಫ್ತಿನಿಂದ ಅರ್ಜೆಂಟೈನಾ, ಬ್ರೆಝಿಲ್, ಹಾಗೂ, ತೈಲಗಳ ರಫ್ತಿನಿಂದ ಈಕ್ವೆಡಾರ್, ಬೊಲಿವಿಯಾ ಮತ್ತು ವೆನಿಝುವೇಲಾ ದೇಶಗಳು ಈ ಶತಮಾನದ ಆದಿ ಭಾಗದಲ್ಲಿ ಲಾಭ ಪಡೆದವು. ಹಿಂದೆ, ಅಂತಹ ಲಾಭವನ್ನು ಶ್ರೀಮಂತರು ನುಂಗುತ್ತಿದ್ದರು. ಆದರೆ, ಎಡ ಸರ್ಕಾರಗಳು, ಮರುಹಂಚಿಕೆ ಮಾಡುವ ರೀತಿಯಲ್ಲಿ, ಆ ಲಾಭವನ್ನು ಬಡವರ ಏಳಿಗೆಗೆ ಬಳಸಿದವು. ಇದೇನೂ ಸಾಮಾನ್ಯ ಸಾಧನೆಯಲ್ಲ. ಅದನ್ನು ಗೇಲಿಮಾಡುವಂತಿಲ್ಲ. ಎಡ ಶಕ್ತಿಗಳು ಮಾಡದೆ ಉಳಿದ ಕೆಲಸವೆಂದರೆ, ಸರಕುಗಳ ಬೆಲೆ ಮುಂದೆ ಒಮ್ಮೆ ಇಳಿದ ಸಂದರ್ಭದಲ್ಲಿ ಜನರಿಗೆ ಅದರಿಂದ ಹಾನಿ ತಟ್ಟದಂತೆ ಅರ್ಥವ್ಯವಸ್ಥೆಯ ರಾಚನಿಕ ಬದಲಾವಣೆಗಳು.

ತೈಲ ಬೆಲೆಗಳು ತೀವ್ರವಾಗಿ ಕುಸಿದಂತೆ, ಇತರೆ ಮೂಲ ಸರಕುಗಳ ಬೆಲೆಗಳೂ ಕುಸಿದ ಪರಿಣಾಮವಾಗಿ, ಲ್ಯಾಟಿನ್ ಅಮೆರಿಕ ದೇಶಗಳ ಅರ್ಥವ್ಯವಸ್ಥೆ ಬಿಕ್ಕಟ್ಟಿಗೆ ಒಳಗಾಗಿದೆ. ಜನರು, ಅದರ ಹೊಣೆಯನ್ನು ಈಗ ಅಧಿಕಾರದಲ್ಲಿರುವ ಸರ್ಕಾರದ ಮೇಲೆ ಹೊರಿಸುತ್ತಿದ್ದಾರೆ. ಇದು, ಜನರನ್ನು ರಾಜಕೀಯವಾಗಿ ಅಣಿನೆರಸುವಲ್ಲಿ ಎಡ ಶಕ್ತಿಗಳ ಅಸಮರ್ಥತೆಯ ಸೂಚನೆ. ಜನತೆಗೆ ಸರ್ಕಾರದಿಂದ ದೊರೆಯಬೇಕಾದ ಸವಲತ್ತುಗಳನ್ನು ಒದಗಿಸಿ ಅವರನ್ನು ಆರ್ಥಿಕವಾಗಿ ಬಲಗೊಳಿಸುವುದರ ಜೊತೆಗೆ ಜನರನ್ನು ಚರಿತ್ರೆಯ ಪ್ರಜ್ಞೆಯುಳ್ಳ ಪ್ರಜೆಗಳನ್ನಾಗಿ ಮಾಡುವುದೂ ಎಡ ಶಕ್ತಿಗಳ ಉದ್ದೇಶವಾಗಿಬೇಕು.

ಬದಲಾದ ಸನ್ನಿವೇಶದಲ್ಲಿ ಎಡ ಶಕ್ತಿಗಳು, ಅಧಿಕಾರ ಕಳೆದುಕೊಂಡಿರುವ ದೇಶಗಳಲ್ಲಿ ಮತ್ತು ಅಧಿಕಾರದಲ್ಲಿ ಮುಂದುವರೆಯುತ್ತಿರುವ ದೇಶಗಳಲ್ಲಿ ದೊಡ್ಡ ಸವಾಲುಗಳನ್ನು ಎದುರಿಸುತ್ತಿವೆ. ಈ ಸನ್ನಿವೇಶದಲ್ಲಿ ಎಡ ಶಕ್ತಿಗಳು, ನೈಜ ಪರಿಸ್ಥಿತಿಯನ್ನು ಜನರಿಗೆ ವಿವರಿಸುವ ರಾಜಕೀಯ ಕೆಲಸ ಮಾಡಬೇಕು. ಮತ್ತು ತಮ್ಮ ಸಕಾರಗಳ ವಿರುದ್ಧ ಭ್ರಷ್ಟಾಚಾರದ ದೂರುಗಳು ಎದ್ದಿರುವ ಪರಿಸ್ಥಿತಿಯಲ್ಲಿ, ಜನಶಕ್ತಿಯು ಅವುಗಳ ಮೇಲೆ ನಿಯಂತ್ರಣ ಹೊಂದಿರುವಂತಹ ವ್ಯವಸ್ಥೆ ಮಾಡಬೇಕು.

ಲ್ಯಾಟಿನ್ ಅಮೆರಿಕದ ಅರ್ಥವ್ಯವಸ್ಥೆಯು ಬಿಕ್ಕಟ್ಟಿಗೆ ಒಳಗಾಗಿರುವ ಪರಿಸ್ಥಿತಿಯಲ್ಲಿ, ಅಲ್ಲಿರುವ ಎಡ ಸರ್ಕಾರಗಳು, ಅವಶ್ಯಕ ವಸ್ತುಗಳನ್ನು ಆಮದು ಮಾಡಿಕೊಳ್ಳಲು ಅನುವಾಗುವಂತೆ ವಿದೇಶಿ ವಿನಿಮಯದ ಸಂರಕ್ಷಣೆ ಮಾಡಬೇಕು. ಈ ಗುರಿ ಸಾಧಿಸಲು, ಬ್ಯಾಂಕ್‌ಗಳನ್ನು ಮತ್ತು ವಿದೇಶ ವ್ಯಾಪಾರವನ್ನು ರಾಷ್ಟ್ರೀಕರಣ ಮಾಡಬೇಕೆಂದು ಕೆಲವರು ಪ್ರತಿಪಾದಿಸುತ್ತಿದ್ದಾರೆ. ಇದು ಬಹಳ ಕಷ್ಟದ ಕೆಲಸ. ಲ್ಯಾಟಿನ್ ಅಮೆರಿಕದ ಸರ್ಕಾರಗಳಿಗೆ ಇದು ಪರೀಕ್ಷೆಯ ಕಾಲ. ಅದು ನಿರ್ಣಾಯಕ ತೀರ್ಮಾನಗಳನ್ನು ಬಯಸುತ್ತದೆ.

ಅಮೆರಿಕವು ವೆನಿಝುವೇಲಾದ ಮೇಲೆ "ಆರ್ಥಿಕ ಸಮರ"ದಲ್ಲಿ ತೊಡಗಿದೆ ಎಂದು ನಿಕೊಲಾಸ್ ಮ್ಯಡುರೊ ಆಪಾದಿಸಿದ್ದರು. ತೈಲ ಉತ್ಪಾದನೆ ತಗ್ಗಿಸುವಂತೆ ಒಪೆಕ್ ಮಾಡಿದ್ದ ಸಲಹೆಯನ್ನು ಅಮೆರಿಕದ ಮಿತ್ರ ದೇಶ ಸೌದಿ ಅರೇಬಿಯಾ ನಿರಾಕರಿಸಿದೆ. ಹಾಗಾಗಿ, ತೈಲ ಉತ್ಪಾದಿಸುವ ಮತ್ತು ಎಡ ಸರ್ಕಾರಗಳಿರುವ ಲ್ಯಾಟಿನ್ ಅಮೆರಿಕನ್ ದೇಶಗಳನ್ನು ಹಾಗೂ ರಷ್ಯಾ ದೇಶವನ್ನು ಮಣಿಸಲು ಅಮೆರಿಕ ಹವಣಿಸುತ್ತಿದೆ ಎಂಬ ವಾದವನ್ನು ಅಲ್ಲಗಳೆಯುವಂತಿಲ್ಲ. ಅದನ್ನಲ್ಲದೆ, ಸಾಮ್ರಾಜ್ಯಶಾಹಿಗಳಿಂದ ಬೇರೇನನ್ನು ನಿರೀಕ್ಷಿಸಬಹುದು? ಅವರ ದಬ್ಬಾಳಿಕೆಯ ವಿರುದ್ಧ ಪ್ರತಿರೋಧ ಒಡ್ಡಲೇಬೇಕು. ಬಹಳ ವರ್ಷಗಳಿಂದಲೂ ಕ್ಯೂಬಾ ಅದನ್ನು ಮಾಡುತ್ತಿದೆ.

(ಆಧಾರ: ಪ್ರೊ. ಪ್ರಭಾತ್ ಪಟ್ನಾಯಕ್ ಅವರ ಲೇಖನ)

ಅಭ್ಯರ್ಥಿಗಳ ಸಂಖ್ಯೆಯನ್ನು ಕಾಲುಭಾಗಕ್ಕೆ ಇಳಿಸಿದ ಹರ್ಯಾಣ ಪಂಚಾಯತ್ ತಿದ್ದುಪಡಿ

ಹರ್ಯಾಣದ ಪಂಚಾಯತ್ ರಾಜ್ಯ ಕಾನೂನಿನ ತಿದ್ದುಪಡಿ ಅಲ್ಲಿ ಬುಡಮಟ್ಟದ ಪ್ರಜಾಪ್ರಭುತ್ವವನ್ನು ದಉರ್ಬಲಗೊಳಿಸಿದೆ ಎಂಬುದನ್ನು ಚುನಾವಣೆ ಅಂಕಿ–ಅಂಶಗಳೇ ಈಗ ಸಾಬೀತು ಪಡಿಸಿವೆ.

2010ರಲ್ಲಿ ನಾಮಪತ್ರಗಳು–290547

2015ರಲ್ಲಿ ನಾಮಪತ್ರಗಳು–195339

ಸ್ವೀಕರಿಸಲ್ಪಟ್ಟ ನಾಮಪತ್ರಗಳು

2010– 170504

2015– 41264

ಇವುಗಳಲ್ಲಿ 54.4ಶೇ. ಅವಿರೋಧ ಆಯ್ಕೆಗಳು, 19.5ಶೇ. ಖಾಲಿ ಉಳಿದಿವೆ.

ಅಂದರೆ 30962 ಸ್ಥಾನಗಳಿಗೆ ಅಭ್ಯರ್ಥಿಗಳ ಸಂಖ್ಯೆ 41264, ಸರಾಸರಿ ಒಂದು ಸ್ಥಾನಕ್ಕೆ ಕೇವಲ 1.33 ಅಭ್ಯರ್ಥಿಗಳು. 1898 ಪಂಚರು, 5 ಸರಪಂಚರು, ಮತ್ತು 2 ಬ್ಲಾಕ್ ಸಮಿತಿ ಸ್ಥಾನಗಳು ಭರ್ತಿಯಾಗಿಲ್ಲ. ಇದು ಶಿಕ್ಷಣ ಮತ್ತು ಇತರ ಶರತ್ತುಗಳಿಂದ ದಲಿತರು ಮತ್ತು ಮಹಿಳೆಯರನ್ನು ಸ್ಪರ್ಧೆಯಿಂದ ಹೊರಗಿಟ್ಟುದರ ಫಲ ಎಂದು ವಿಶ್ಲೇಷಿಸಲಾಗಿದೆ. ಇದು ಸಂವಿಧಾನದ 73ನೇ ತಿದ್ದುಪಡಿಯ ಆಶಯಕ್ಕೆ ತದ್ವಿರುದ್ಧವಾದದ್ದು ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಎಐಡಿಡಬ್ಲ್ಯುಎ ಹೇಳಿದೆ. ಆದರೆ ಬಹುಶಃ ಹಿಂದುತ್ವವಾದಿಗಳ ಆಶಯ ಇದೇ ಆಗಿತ್ತು.

ಸ್ಪರ್ಧಿಗಳ ಸಂಖ್ಯೆ ಕಾಲು ಭಾಗಕ್ಕೆ ಇಳಿದಿರುವುದು, ಹಲವು ಸೀಟುಗಳು ಭರ್ತಿಯಾಗದಿರುವುದು, ಜತೆಗೆ ಅಪಾರ ಸಂಖ್ಯೆಯ 'ಅವಿರೋಧ ಆಯ್ಕೆ'ಗಳ ಕಣ್ಕಟ್ಟು ಇಡೀ ಪ್ರಜಾಪ್ರಭುತ್ವದ ವಿಧಾನವನ್ನು ದುರ್ಬಲಗೊಳಿಸರುವುದನ್ನು ತೋರಿಸುತ್ತದೆ ಎಂದು ಎಐಡಿಡಬ್ಲ್ಯುಎ ಆತಂಕ ವ್ಯಕ್ತಪಡಿಸಿದೆ. 'ಅವಿರೋಧ ಆಯ್ಕೆ' ಎಂಬುದಕ್ಕೆ ಸರಕಾರದ ಬೊಕ್ಕಸದಿಂದಲೇ ಉತ್ತೇಜನೆ ಸಿಕ್ಕಿದೆ, ಅಂದರೆ ಸಾರ್ವಜನಿಕ ಹಣದ ಆಮಿಷ ತೋರಿಸಿ ಮತದಾರರಿಗೆ ಆಯ್ಕೆಯ ಅವಕಾಶವನ್ನು ವಂಚಿಸಲಾಗಿದೆ.

ಈ ರೀತಿ ಹರ್ಯಾಣ ಸರಕಾರದ ತಿದ್ದುಪಡಿ ಬುಡಮಟ್ಟದಲ್ಲಿ ಪ್ರಜಾಪ್ರಭುತ್ವ ಪ್ರಕ್ರಿಯೆಯನ್ನು ದುರ್ಬಲಗೊಳಿಸುತ್ತದೆ ಎಂಬ ಭೀತಿಯನ್ನು ಸಾಬೀತುಡಿಸಿದೆ, ಇದರ ಸರಿಯಾದ ಪರಾಮರ್ಶೆ ಆಗಬೇಕು, ಇಂತಹ ಪ್ರಜಾಪ್ರಭುತ್ವ–ವಿರೋಧಿ ಕ್ರಮಗಳನ್ನು ಹಿಂತೆಗೆದುಕೊಳ್ಳುವಂತೆ ಮಾಡಬೇಕು ಎಂದು ಎಐಡಿಡಬ್ಲ್ಯುಎ ಅಭಿಪ್ರಾಯಪಟ್ಟಿದೆ.

PEÁ½ZÀAÝ

ಹೊಸ ಆವಿಷ್ಕಾರಗಳು, ತಂತ್ರಜ್ಞಾನಗಳು,
ಜಾಗತಿಕ ರಂಗದಲ್ಲಿ ಸ್ಪರ್ಧಿಸಬಲ್ಲ ಉತ್ಪನ್ನಗಳು
ಅಂತಿಮವಾಗಿ ಹೊಸ ಸಂಶೋದನೆಗಳು,
ಪ್ರಕೃತಿಯ ನಡೆಯ ಬಗ್ಗೆ ಹೊಸ ತಿಳಿವನ್ನು
ಆಧರಿಸಿರುತ್ತವೆ– ಇದನ್ನು ನಾವು ಮೂಲ
ವಿಜ್ಞಾನಗಳು ಎನ್ನುತ್ತೇವೆ. ಇವೇ ಅಂತಿಮವಾಗಿ
ಆನ್ವಯಿಕ ವಿಜ್ಞಾನಗಳಾಗಿ, ತಂತ್ರಜ್ಞಾನಗಳಾಗಿ
ಮಾರ್ಪಡುತ್ತವೆ. ಆದ್ದರಿಂದ ನನ್ನ
ಸೂಚನೆಯೆಂದರೆ, ನೀವು 'ಭಾರತದಲ್ಲಿ ಮಾಡಿ'
ಎಂಬ ಘೋಷಣೆಯ ಸ್ಥಾನದಲ್ಲಿ 'ಸಂಶೋಧಿಸಿ,
ಆವಿಷ್ಕರಿಸಿ, ಭಾರತದಲ್ಲಿ ಮಾಡಿ' ಎಂಬ
ಘೋಷಣೆ ಕೊಡಿ.

–ಡೇವಿಡ್ ಗ್ರೋಸ್, 2004 ರ ಭೌತಶಾಸ್ತ್ರ ನೊಬೆಲ್ ಪ್ರಶಸ್ತಿ ವಿಜೇತ

ರಾಜ್ಯಗಳ ಸುತ್ತ

ವಿಶ್ವಾಸ್

ಪಿಯರ್‌ಲೆಸ್ ಕಂಪನಿ ರಾಷ್ಟ್ರೀಕರಣಕ್ಕೆ ಆಗ್ರಹ

ಪಿಯರ್‌ಲೆಸ್ ಎಂದೇ ಖ್ಯಾತವಾದ ದೇಶದ ಪ್ರಖ್ಯಾತ ಸಣ್ಣ ಉಳಿತಾಯ ಸಂಸ್ಥೆ ದಿ ಪಿಯರ್‌ಲೆಸ್ ಜನರಲ್ ಫೈನಾನ್ಸ್ ಲಿಮಿಟೆಡ್‌ಅನ್ನು ರಾಷ್ಟ್ರೀಕರಿಸುವ ಮೂಲಕ ಅದರ ಸಾವಿರಾರು ನೌಕರರು ಮತ್ತು ಲಕ್ಷಾಂತರ ಠೇವಣಿದಾರರ ಹಿತವನ್ನು ಕಾಪಾಡಬೇಕು ಎಂಬ ಕೂಗು ಬಲವಾಗಿದೆ. ಅಖಿಲ ಭಾರತ ಪಿಯರ್‌ಲೆಸ್ ನೌಕರರ ಸಂಘ ಈ ಬಗ್ಗೆ ದನಿ ಎತ್ತಿದೆ. ಇದು ರಿಸರ್ವ್ ಬ್ಯಾಂಕ್‌ನ ನಿರ್ದೇಶನಗಳ ಅನ್ವಯ ತನ್ನ ವ್ಯವಹಾರಗಳನ್ನು ನಡೆಸುತ್ತಿತ್ತು. ಆದರೆ 2011 ಎಪ್ರಿಲ್ 1 ರಿಂದ ಅದರ ವ್ಯವಹಾರಗಳನ್ನು ರಿಸರ್ವ್ ಬ್ಯಾಂಕ್ ಏಕಾಏಕಿ ನಿಲ್ಲಿಸಿತು. ಇದರಿಂದಾಗಿ ಲಕ್ಷಾಂತರ ಠೇವಣಿದಾರರು ಕಂಗಾಲಾಗಿದ್ದಾರೆ, ನೌಕರರ ಭವಿಷ್ಯ ಅತಂತ್ರವಾಗಿದೆ. ಇದರಿಂದಾಗಿ ಠೇವಣಿದಾರರು ಮತ್ತು ಸಾರ್ವಜನಿಕರಿಗೆ ವಂಚಿಸಿ ಕೋಟ್ಯಂತರ ರೂಪಾಯಿಗಳನ್ನು ಕೊಳ್ಳೆ ಹೊಡೆಯುವ ಶಾರದಾ ಚಿಟ್ಸ್‌ನಂಥ ಚಿಟ್‌ಫಂಡ್ ಸಂಸ್ಥೆಗಳು ತಲೆಯೆತ್ತಲು ಸಹಾಯವಾಗಿದೆ.

ಪಿಯರ್‌ಲೆಸ್‌ನ ವ್ಯವಹಾರಗಳು ಕಾನೂನು ಬದ್ಧವಾಗಿವೆ ಎಂದು ಸುಪ್ರೀಂಕೋರ್ಟ್ 1987ರಲ್ಲೇ ತೀರ್ಪು ನೀಡಿತ್ತು. ಅಂದಿನಿಂದಲೂ ಪಿಯರ್‌ಲೆಸ್ ಕಂಪೆನಿಯು ಆರ್‌ಬಿಐಗೆ ನೊಂದಾಯಿಸಿದ ಒಂದು ರೆಸಿಡುವರಿ ನಾನ್ ಬ್ಯಾಂಕಿಂಗ್ ಕಂಪೆನಿ (ಆರ್‌ಎನ್‌ಬಿಸಿ) ಯಾಗಿ ವ್ಯವಹಾರಗಳನ್ನು ನಡೆಸಿಕೊಂಡು ಬಂದಿತ್ತು.

ಮೆಚುರಿಟಿ ಆದ ಠೇವಣಿಗಳ ಬಾಬ್ತು ಪಿಯರ್‌ಲೆಸ್ ಕಂಪೆನಿ ಠೇವಣಿದಾರರಿಗೆ 20 ಸಾವಿರ ಕೋಟಿ ರೂಪಾಯಿಗಳನ್ನು ಪಾವತಿ ಮಾಡಿತ್ತು. ಈ ಕಾರಣದಿಂದಾಗಿಯೇ ಠೇವಣಿದಾರರು ವಿಶ್ವಾಸವಿಟ್ಟು ಮರು ಹೂಡಿಕೆಗೆ ಮುಂದಾಗಿದ್ದರು. ಹೀಗಾಗಿ, ಪಿಯರ್‌ಲೆಸ್‌ನ ವ್ಯವಹಾರಗಳನ್ನು ಸ್ಥಗಿತಗೊಳಿಸಲು ಆರ್‌ಬಿಐ ನೀಡಿದ ನಿರ್ದೇಶನವು ನೌಕರ ವಿರೋಧಿಯಾದುದು, ಠೇವಣಿದಾರರ ಹಿತ–ಕ್ಕೆ ವಿರುದ್ಧವಾದುದು ಎಂದು ಅಭಿಪ್ರಾಯಪಟ್ಟಿರುವ

Peerless MUTUAL FUND

ಸಂಘ, ರಿಸರ್ವ್ ಬ್ಯಾಂಕ್ ತಕ್ಷಣವೇ ತನ್ನ ನಿರ್ದೇಶನವನ್ನು ವಾಪಸ್ ಪಡೆಯಬೇಕು ಹಾಗೂ ಪಿಯರ್‌ಲೆಸ್ ಒಂದು ಆರ್‌ಎನ್‌ಬಿಸಿಯಾಗಿ ಮುಂದುವರಿಯಲ ಅನುಮತಿ ನೀಡಬೇಕು ಎಂದು ಒತ್ತಾಯಿಸಿದೆ.

ತನ್ನ ನಿಯಮ ಮತ್ತು ನಿರ್ದೇಶನಗಳನ್ನು ಪಾಲಿಸದ ಹಣಕಾಸು ಸಂಸ್ಥೆಗಳ ವ್ಯವಹಾರಗಳನ್ನು ಸ್ಥಗಿತಗೊಳಿಸುವ ಅಧಿಕಾರ ಆರ್‌ಬಿಐಗೆ ಇದೆ. ಆದರೆ, ಪಿಯರ್‌ಲೆಸ್ ಎಂದೂ ನಿಯಮಗಳನ್ನು ಉಲ್ಲಂಘಿಸಿಲ್ಲ.

ಪಿಯರ್‌ಲೆಸ್‌ನ ವ್ಯವಹಾರಗಳನ್ನು ನಿಯಂತ್ರಿಸಲು ನಿಯಮಗಳನ್ನು ರೂಪಿಸುವಾಗ ನೌಕರರ ಹಿತಗಳನ್ನು ರಕ್ಷಿಸಬೇಕು ಎಂದು ಸುಪ್ರೀಂಕೋರ್ಟ್ ತನ್ನ 1987ರ ತೀರ್ಪಿನಲ್ಲಿ ಸ್ಪಷ್ಟವಾಗಿ ಹೇಳಿತ್ತು. ಆದರೆ ಆರ್‌ಬಿಐನ ಪ್ರಸ್ತುತ ನಿರ್ದೇಶನವು ನೌಕರರ ಹಿತಗಳಿಗೆ ಮಾರಕವಾಗಿದ್ದು ಅವರ ಜೀವನೋಪಾಯಕ್ಕೇ ಗಂಡಾಂತರ ತಂದೊಡ್ಡಿದೆ. ಹೀಗಾಗಿ, ಸಂಘವು ಪಿಯರ್‌ಲೆಸ್ ವ್ಯವಹಾರಗಳ ಪುನಾರಂಭಕ್ಕೆ ಅನುಮತಿ ನೀಡುವಂತೆ ಒತ್ತಾಯಿಸಿದೆ.

ಸಂಘದ ಪ್ರತಿನಿಧಿಗಳು ಮಾಜಿ ಪ್ರ ಧಾನಿ ಮನಮೋಹನ್ ಸಿಂಗ್, ಮಾಜಿ ಹಣಕಾಸು ಸಚಿವರುಗಳಾದ ಪ್ರಣಬ್ ಮುಖರ್ಜಿ ಹಾಗೂ ಪಿ. ಚಿದಂಬರಂ ಮತ್ತು ಹಿಂದಿನ ಯುಪಿಎ ಸರಕಾರದ ಸಚಿವರನ್ನು ಭೇಟಿಯಾಗಿದ್ದರು. ಪಕ್ಷಭೇದ ಮರೆತು ಸಂಸತ್ ಸದಸ್ಯರನ್ನೂ ಭೇಟಿಯಾಗಿ ಸಮಸ್ಯೆಯನ್ನು ಬಗೆಹರಿಸಲು ಮನವಿ ಮಾಡಿದ್ದಾರೆ. ಎಲ್ಲಾ ಕೇಂದ್ರೀಯ ಟ್ರೇಡ್ ಯೂನಿಯನ್‌ಗಳ ಮುಖಂಡರನ್ನು ಕೂಡ ಕಂಡು ಆರ್‌ಬಿಐ ಜತೆ ಈ ವಿಷಯವನ್ನು ಪ್ರಸ್ತಾಪಿಸುವಂತೆ ಮನವಿ ಮಾಡಿದ್ದಾರೆ.

ಗವರ್ನರ್ ಮತ್ತು ಡೆಪ್ಯುಟಿ ಗವರ್ನರ್ ಆದಿಯಾಗಿ ರಿಸರ್ವ್ ಬ್ಯಾಂಕ್‌ನ ಹಿರಿಯ ಅಧಿಕಾರಿಗಳನ್ನು ಹಲವು ಬಾರಿ ಭೇಟಿಯಾಗಿ ಮನವಿ ಸಲ್ಲಿಸಿದರೂ ಬ್ಯಾಂಕ್‌ನಿಂದ ಇದುವರೆಗೆ ಯಾವುದೇ ಸಕಾರಾತ್ಮಕ ಉತ್ತರ ಸಿಕ್ಕಿಲ್ಲ. ●

ದೆಹಲಿ ಮಹಾನಗರ ಪಾಲಿಕೆ: ಮತ್ತೆ ಪೌರಕಾರ್ಮಿಕರ ಮುಷ್ಕರ

ರಾಷ್ಟ್ರ ರಾಜಧಾನಿ ದೆಹಲಿ ಮಹಾನಗರ ಪಾಲಿಕೆಯ ಪೌರ ಕಾರ್ಮಿಕರು ಮತ್ತೆ ಮುಷ್ಕರದ ಹಾದಿ ಹಿಡಿದಿದ್ದಾರೆ. ಕಳೆದ ವರ್ಷ ಜೂನ್ ತಿಂಗಳಲ್ಲಷ್ಟೇ 10 ದಿನಗಳ ಕಾಲ ಸಂಪು ಹೂಡಿದ್ದ ಕಾರ್ಮಿಕರು ಮತ್ತೆ ಆ ಹಾದಿ ತುಳಿದಿರುವುದು ದೆಹಲಿಯ ನಿವಾಸಿಗಳು ಮಾತ್ರವಲ್ಲದೆ ಈ ವಿಚಾರದಲ್ಲಿ ಕಾಳಜಿ ಇರುವ ಎಲ್ಲರಲ್ಲೂ ಆತಂಕ ತಂದೊಡ್ಡಿದೆ. ಮುಷ್ಕರ ಹೂಡಲು ಹೊಸ ಕಾರಣವೇನೂ ಇಲ್ಲ, ಹೊಸ ಬೇಡಿಕೆಯೂ ಇಲ್ಲ– ಕೂಲಿ ಪಾವತಿ ಮಾಡದಿರುವುದೇ ಮುಷ್ಕರಕ್ಕೆ ಕಾರಣ ಎನ್ನುವುದು ಆಶ್ಚರ್ಯದ ವಿಷಯವಾಗಿದೆ. ಈ ಬಾರಿಯ ಒಂದು ಬದಲಾವಣೆ ಏನೆಂದರೆ ಪೌರ ಕಾರ್ಮಿಕರಂತೆ ಮಹಾನಗರ ಪಾಲಿಕೆಯ ಇತರ ಉದ್ಯೋಗಿಗಳಾದ ಶಿಕ್ಷಕರು, ವೈದ್ಯರು ಮತ್ತು ನರ್ಸ್‌ಗಳು ಕೂಡ ಹೋರಾಟದ ಹಾದಿ ಹಿಡಿಯುವುದಾಗಿ ಎಚ್ಚರಿಸಿದ್ದಾರೆ. ಅವರ ಬೇಡಿ–ಕೆ ಕೂಡ ಅಸಹಾಯಕ ಪೌರ ಕಾರ್ಮಿಕರದ್ದಕ್ಕಿಂತ ಭಿನ್ನವೇನೂ ಅಗಿಲ್ಲ.

ತ್ರಿಭಜನೆಯ ಪರಿಣಾಮವಾಗಿ ರಚನೆಗೊಂಡ ಮೂರೂ ದೆಹಲಿ ನಗರಸಭೆ ಸಂಸ್ಥೆಗಳು ಬಿಜೆಪಿಯ ನಿಯಂತ್ರಣದಲ್ಲಿವೆ. ಕೇಂದ್ರದಲ್ಲಿ ಕೂಡ ಅದೇ ಪಕ್ಷ ಆಡಳಿತದಲ್ಲಿದೆ. ಈ ಎರಡು ಸ್ತರಗಳ ಆಡಳಿತದ ನಡುವೆ ಆಮ್ ಆದ್ಮಿ ಪಕ್ಷ ನೇತೃತ್ವದ ರಾಜ್ಯ ಸರಕಾರ ಇದೆ. ಮೂರರ ಪೈಕಿ ಎರಡರಲ್ಲಿ ಅಂದರೆ ಪೂರ್ವ ದೆಹಲಿ ಮತ್ತು ಉತ್ತರ ದೆಹಲಿ ಪಾಲಿಕೆಗಳಲ್ಲಿ ಮುಷ್ಕರ ನಡೆಯುತ್ತಿದೆ. ಇವೆರಡೂ ಆರ್ಥಿಕ ಮುಗ್ಗಟ್ಟಿನಿಂದ ನಲುಗುತ್ತಿರುವ ಮಹಾನಗರ ಪಾಲಿಕೆಗಳಾಗಿವೆ. ಮೂರನೆಯದಾದ ದಕ್ಷಿಣ ಮಹಾನಗರಪಾಲಿಕೆ ಸಂಪದ್ಭರಿತವಾಗಿದೆ. ಅದರ ವ್ಯಾಪ್ತಿಯಲ್ಲಿ ಹೆಚ್ಚು ಶ್ರೀಮಂತ ಪ್ರದೇಶಗಳು ಇರುವುದೇ ಅದಕ್ಕೆ ಕಾರಣ.

ಆರ್ಥಿಕ ಬಿಕ್ಕಟ್ಟಿಗೆ ಕಾರಣಗಳು

ಪಾಲಿಕೆಯ ಇಂದಿನ ಸ್ಥಿತಿಗೆ ಎರಡು ಪ್ರಮುಖ ಕಾರಣಗಳಿವೆ. ಒಂದು, ಮಾಧ್ಯಮಗಳು ವ್ಯಾಪಕವಾಗಿ ಎತ್ತಿತೋರಿಸಿರುವಂತೆ ಆಪ್ ಮತ್ತು ಬಿಜೆಪಿ ನಡುವಿನ ರಾಜಕೀಯ ವೈರತ್ವ,ಭ್ರಷ್ಟಾಚಾರ,ದುರಾಡಳಿತದಿಂದಾಗಿ ಮೂರೂ ಪಾಲಿಕೆಗಳು ನಲುಗುತ್ತಿವೆ ಎಂಬುದು ಆಪ್ ಸರಕಾರದ ಆರೋಪವಾಗಿದೆ. ಬಿಜೆಪಿ ನೇತೃತ್ವದ ಕೇಂದ್ರ ಸರಕಾರವೂ ಇದಕ್ಕೆ ಅವಕಾಶ ನೀಡುತ್ತಿದೆ. ತನ್ನ ಕಾರ್ಪೊರೇಟರ್‌ಗಳೊಂದಿಗೆ ಕೈಜೋಡಿಸಿರುವ ಬಿಜೆಪಿಯು, ಆಪ್ ಸರಕಾರಕ್ಕೆ ಕೆಟ್ಟ ಹೆಸರು ತಂದು ಜನರನ್ನು ಅದರ ವಿರುದ್ಧ ಎತ್ತಿಕಟ್ಟಲು ಹುನ್ನಾರ ನಡೆಸುತ್ತಿದೆ ಎನ್ನುವುದು ಆಪ್ ಆರೋಪ.

ಆದರೆ, ಕಳೆದ ವಿಧಾನಸಭೆ ಚುನಾವಣೆಯಲ್ಲಿ ಆಪ್ ಕೈಯಲ್ಲಿ ಹೀನಾಯವಾಗಿ ಸೋಲುಂಡ ಬಿಜೆಪಿ ಹೇಳುವುದೇ ಬೇರೆ. ಮಹಾನಗರ ಪಾಲಿಕೆಗೆ ಸಲ್ಲತಕ್ಕ ಬಾಕಿಯನ್ನು ಆಪ್ ರಾಜ್ಯ ಸರಕಾರ ಬಿಡುಗಡೆ ಮಾಡದಿರುವುದರಿಂದ ಬಿಕ್ಕಟ್ಟು ಉಂಟಾಗಿದೆ ಎಂಬುದು ಅದರ ಹೇಳಿಕೆ.

ಆದರೆ ಎರಡು ಆಳುವ ಪಕ್ಷಗಳ ಆರೋಪ – ಪ್ರತ್ಯಾರೋಪಗಳ ನಡುವೆ ಇರುವಂಥ ಒಂದು ಸತ್ಯವನ್ನು ಎಲ್ಲರೂ ಕಡೆಗಣಿಸುತ್ತಿದ್ದಾರೆ. ದೇಶದಾದ್ಯಂತ ಮತ್ತು ವಿಶೇಷವಾಗಿ ದೆಹಲಿಯಲ್ಲಿ ನಗರ ಸ್ಥಳೀಯ ಸಂಸ್ಥೆಗಳನ್ನು (ಯುಎಲ್‌ಬಿಗಳು) ನಡೆಸುತ್ತಿರುವ ರೀತಿಯೇ ಆ ಸತ್ಯವಾಗಿದೆ. ಆದರೆ ದೇಶದಾದ್ಯಂತ ಯುಎಲ್‌ಬಿಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಪೂರ್ಣವಾಗಿ ಇಲ್ಲಿ ವಿಶ್ಲೇಷಿಸಲು ಅಸಾಧ್ಯ. ಆದರೆ ಒಂದಂತೂ ನಿಜ. ದೂರದೃಷ್ಟಿ ಇಲ್ಲದ ನೀತಿಗಳು, ಹಣಕಾಸಿನ ವಿಚಾರದಲ್ಲಿ ವಂಚನೆ ಮತ್ತು ನವ ಉದಾರವಾದಿ ನೀತಿಗಳ ಚೌಕಟ್ಟಿನಲ್ಲಿ ರೂಪಿಸುವ ನೀತಿಗಳು ಭಾರತದಲ್ಲಿ ಯುಎಲ್‌ಬಿಗಳ ಸೇವಾ ಚಟುವಟಿಕೆಗಳನ್ನು ಸಂಪೂರ್ಣವಾಗಿ ಹಾಳು ಮಾಡಿವೆ. ಈ ಎಲ್ಲಾ ಧೋರಣೆಗಳು ನಗರ ಸ್ಥಳೀಯ ಸಂಸ್ಥೆಗಳ ಪ್ರಜಾಸತ್ತಾತ್ಮಕ ಕಾರ್ಯನಿರ್ವಹಣೆಯನ್ನು ನಾಶಮಾಡಿವೆ.

ದೆಹಲಿಯಲ್ಲಿ ಈ ಸಮಸ್ಯೆಗೆ ಇನ್ನೊಂದು ವಿಶೇಷ ಆಯಾಮವಿದೆ. ಕೇಂದ್ರ, ರಾಜ್ಯ ಮತ್ತು ಸ್ಥಳೀಯ ಆಡಳಿತದ ನಡುವೆ ಹಂಚಿಹೋಗಿರುವ ವಿಶಿಷ್ಟ ಆಡಳಿತ ವ್ಯವಸ್ಥೆಯಿಂದಾಗಿ ದೆಹಲಿಯಲ್ಲಿ ಸಮಸ್ಯೆಗಳು ಇನ್ನಷ್ಟು ಉಲ್ಬಣಿಸಿವೆ.

ಕೇಂದ್ರ ಸರಕಾರದ ಏಕಪಕ್ಷೀಯ ಅಧಿಕಾರಗಳನ್ನು ತೆಗೆದುಹಾಕುವುದು; ವಲಯ, ವಾರ್ಡ್ ಮತ್ತು ಮೊಹಲ್ಲಾ ಮಟ್ಟದಲ್ಲಿ ಜನರ ಪ್ರಾತಿನಿಧ್ಯ ಹಾಗೂ ಜನತೆಯ ಭಾಗವಹಿಸುವಿಕೆಯ ಸಮಿತಿಗಳನ್ನು ರಚಿಸುವುದು, ಮಹಾನಗರ ಪಾಲಿಕೆಯ ಲೆಕ್ಕಪತ್ರಗಳನ್ನು ಕಾಲಕಾಲಕ್ಕೆ ಹಾಗೂ ಸಮಗ್ರವಾಗಿ ತಪಾಸಣೆ ಮಾಡುವುದು ಹಾಗೂ ಸರಕಾರದ ಉನ್ನತ ಮಟ್ಟಗಳಿಂದ ಮಹಾನಗರ ಪಾಲಿಕೆಗಳಿಗೆ ಸಮಾನ ರೀತಿಯಲ್ಲಿ ಸಂಪನ್ಮೂಲ ಒದಗಿಸಲು ಒಂದು ನಿರ್ದಿಷ್ಟ ನೀತಿಯನ್ನು ರೂಪಿಸುವುದು ಹಾಗೂ ಬೆಂಬಲ ನೀಡುವುದು – ಈ ಎಲ್ಲಾ ಕ್ರಮಗಳನ್ನು ಅನುಸರಿಸಿ ಇಡೀ ಸ್ಥಳೀಯ ಸಂಸ್ಥೆ ಆಡಳಿತವನ್ನು ಪ್ರಜಾಸತ್ತಾತ್ಮಕ ಗೊಳಿಸುವುದೇ ಈ ಸಮಸ್ಯೆಯ ಪರಿಹಾರಕ್ಕೆ ಇರುವ ಉತ್ತಮ ಮಾರ್ಗವಾಗಿದೆ. ●

ಚಿಂತನಶೀಲ ಬಿಂಬಕಲಾಕೃತಿಯಾಗಿ.................

ಪುಟ 6 ರಿಂದ

ಸಂಯೋಜನಾ ವಿನ್ಯಾಸಕ್ಕೆ ಕೊಡುವಷ್ಟು ಮಹತ್ವವನ್ನು ಬೆಳಕಿನ ವಿನ್ಯಾಸದ ಸಂಯೋಜನಾ ವಿನ್ಯಾಸಕ್ಕೂ ಕೊಟ್ಟರೆ ಬಿಂಬಕಲಾಕೃತಿ ಒಂದು ಪೂರ್ಣರೂಪದ ಕಲಾಕೃತಿಯಾಗುತ್ತದೆ. 'ಗಾಳಿಬೀಜ' ಇಂಥ ಕೊರತೆಯಿಂದಾಗಿ ಅಲಲ್ಲಿ ಪೇಲವವಾಗಿದೆ ಅನ್ನಿಸುತ್ತದೆ.

ಚಿತ್ರದ ಸಂಭಾಷಣೆಯನ್ನು, ಆಗಂತುಕರಾಗಿ ಬರುವ ಪಾತ್ರಗಳ ಸಂಬಂಧಗಳ ನಿರ್ವಹಣೆಯನ್ನು ಹಂತ ಹಂತವಾಗಿ ಮಾಡದೆ ಒಮ್ಮೆಗೇ ನುಗ್ಗಿಸಿ ಮುಗಿಸಿಬಿಡುವುದು ಚಿತ್ರದ ಸಣ್ಣ ಕೊರತೆ ಎನಿಸುತ್ತದೆ. ಉದಾಹರಣೆಗೆ, ದಾರಿಯಲ್ಲಿ ಕೈತೋರಿಸುವ ಆಗಂತುಕನನ್ನು ಕಾರಿಗೆ ಹತ್ತಿಸಿಕೊಳ್ಳುವಾಗ, ಅವನೊಂದಿಗೆ ವ್ಯವಹರಿಸುವಾಗ, ಟೀ ಅಂಗಡಿಯಲ್ಲಿ ಭೂಮಿಯ ಬೆಲೆ ಬಗ್ಗೆ ವಿಚಾರಿಸಿ ಉತ್ತರಿಸುವಾಗ, ಮತ್ತು ಇಂಜಿನಿಯರ್‌ನ ಕಾರು ಕೆಟ್ಟುನಿಂತಾಗ ಸಹಾಯ ಬೇಡುವಾಗ ಮತ್ತು ಅಪರಿಚಿತ ಹುಡುಗಿಯಿಂದ ಸಹಾಯ ಪಡೆಯುವಾಗ ನಡೆಯುವ ಸಂಭಾಷಣೆ.

ಮಾನವೀಯತೆಯೇ ಸಮಾಜದ ತಳಹದಿ

ಒಂದು ಕಡೆ ನಗರೀಕೃತ ಜೀವನದ ಇಬ್ಬರು ಶಿಷ್ಟ ವ್ಯಕ್ತಿಗಳ ನಡುವಿನ ಸಂಬಂಧದ ಕಷ್ಟವನ್ನು ಮೊಬೈಲ್ ಸಂವಾದದ ಮೂಲಕ ಬಿಂಬಿಸುತ್ತಲೇ ಗ್ರಾಮೀಣ ಪ್ರದೇಶದ ಹಿನ್ನೆಲೆಯಲ್ಲಿ ಒಬ್ಬ ಸಾಮಾನ್ಯ ಮನುಷ್ಯ ಮತ್ತು ಬೀದಿ ನಾಯಿಯ ನಡುವಿನ ಮಾನವೀಯ ಸಂಬಂಧವನ್ನು ಕೇಂದ್ರೀಕರಿಸಿ ಚಿತ್ರವನ್ನು ಮುಕ್ತಾಯಮಾಡಿರುವುದು 'ಗಾಳಿಬೀಜದ' ಹೆಗ್ಗಳಿಕೆ. ತನ್ನ ಹಳೆಯ ಸೈಕಲ್ ತುಳಿಯುತ್ತಾ ಪೋಸ್ಟರ್ ಅಂಟಿಸುವ ಒಬ್ಬ ಸಾಮಾನ್ಯ ಮನುಷ್ಯ ತಾನು ಕಡಿಸಿಕೊಂಡ ಕರಿ ನಾಯಿಯನ್ನು ಚಿತ್ರದುದ್ದಕ್ಕೂ ಹುಡುಕುವ ನಿರಂತರತೆ ಚಿತ್ರದಲ್ಲಿದೆ. ನಾಯಿಯಿಂದ ಕಡಿಸಿಕೊಂಡವರು ಅದು ಹುಚ್ಚುನಾಯಿ ಆಗಲಿ ಆಗದಿರಲಿ ತೊಂದರೆಯಾಗಬಾರದೆಂದು ಚುಚ್ಚುಮದ್ದು ತೆಗೆದುಕೊಳ್ಳುವುದರಲ್ಲಿ ವಿಶೇಷತೆಯೇನಿಲ್ಲ. ಹುಚ್ಚು ಹಿಡಿದ ನಾಯಿ ಒಂದು ವಾರದೊಳಗೆ ಸಾಯುವುದೆಂಬ ಸಾಮಾನ್ಯಜ್ಞಾನ ಕಡಿಸಿಕೊಂಡವನಿಗೆ ಇರುವುದು ಅಸಾಮಾನ್ಯವೇನಲ್ಲ. ಆದರೆ ಪೋಸ್ಟರ್ ಅಂಟಿಸುವ ಒಬ್ಬ ಸಾಮಾನ್ಯನ ಕಾಳಜಿ ನಾಯಿಗೆ ಹುಚ್ಚಿತ್ತೋ ಇಲ್ಲವೋ ಎಂಬುದಲ್ಲ. ತನ್ನನ್ನು ಕ ಚ್ಚಿದ ನಾಯಿ ತನ್ನಿಂದಾಗಿ ಎಲ್ಲಿ ಸಾಯುತ್ತದೆಯೋ ಎಂಬ ಆತಂಕ. ಚಿತ್ರದ ಕೊನೆಯಲ್ಲಿ ನಾಯಿ ಜೀವಂತವಾಗಿದೆಯೆಂದು ತಿಳಿದಾಗ ನಾಯಿಯ ಬಗೆಗಿನ ಅವನ ಆತಂಕ ದೂರವಾಗಿ ನಿರಾಳವಾಗಿ ಮನೆಯ ಕಡೆಗೆ ಸೈಕಲ್ ತುಳಿಯುತ್ತಾನೆ.

ಸಾಹಿತ್ಯ, ದೃಶ್ಯಮಾಧ್ಯಮ ಮತ್ತು ಸಿನಿಮಾ

ಕನ್ನಡದ ಚಿಂತನಶೀಲ ಸಿನಿಮಾ ಪ್ರಾರಂಭದಿಂದಲೂ ತನ್ನ ನಿರ್ಮಿತಿಗಾಗಿ ಸಾಹಿತ್ಯವನ್ನು ಅವಲಂಬಿಸಿದ ಕಲಾಮಾಧ್ಯಮವಾಗಿತ್ತು. ಪಟ್ಟಾಭಿರಾಮರೆಡ್ಡಿಯವರ 'ಸಂಸ್ಕಾರ',ಬಿ.ವಿ.ಕಾರಂತರ ಚೋಮನದುಡಿ, ಗಿರೀಶ್ ಕಾಸರವಳ್ಳಿ ಮತ್ತು ಪಿ. ಶೇಷಾದ್ರಿ ನಿರ್ಮಿಸುತ್ತಿರುವ ಚಿತ್ರಗಳು ಈ ಬಗೆಯವು. ಎಂ.ಎಸ್.ಸತ್ಯು, ಪಿ.ಎನ್. ರಾಮಚಂದ್ರ ಮೊದಲಾದ ಕನ್ನಡ ನಿರ್ದೇಶಕರು ಸಾಹಿತ್ಯವಲ್ಲದೆ ಇತರ ಮೂಲಗಳನ್ನೂ ಬಳಸಿಕೊಂಡು ಚಿತ್ರ ನಿರ್ಮಿಸಿದ್ದಾರೆ. ಇದೀಗ ಹೊಸ ಚಿತ್ರ ನಿರ್ದೇಶಕರು, ಅದರಲ್ಲೂ ಚಿತ್ರಕಲೆಯ ಹಿನ್ನೆಲೆಯಿಂದ ಬಂದ ಕಲಾವಿದರು ಸಾಹಿತ್ಯದ ಹಂಗಿಲ್ಲದೆ ತಾತ್ವಿಕ ಆಲೋಚನೆಗಳನ್ನು ಚಿತ್ರನಿರ್ಮಿತಿಯಲ್ಲಿ ತೊಡಗಿಸುತ್ತಿದ್ದಾರೆ. 'ಅತ್ತಿಹಣ್ಣು ಮತ್ತು ಕಣಜ' ನಿರ್ಮಿಸಿದ ಪ್ರಕಾಶ್ ಬಾಬು ಅವರಂತೆ ಬಾಬು ಈಶ್ವರ್ ಪ್ರಸಾದ್ ಸಹ ಚಿತ್ರಕಲೆಯ ಹಿನ್ನೆಲೆಯಿಂದ ಬಂದ ಬಿಂಬಕಲಾಕಾರ. ಇಂಥ ವಿಭಿನ್ನ ಹಿನ್ನೆಲೆಯ, ವಿಭಿನ್ನದೃಷ್ಟಿಕೋನ–ತಾತ್ವಿಕತೆಗಳ ಬಿಂಬಕಲಾಕಾರರು ಕನ್ನಡಕ್ಕೆ ಬಂದಷ್ಟೂ ಕನ್ನಡ ಚಿಂತನಶೀಲ ಸಿನಿಮಾ ಸಮೃದ್ಧವಾಗುತ್ತದೆ. ಚಿತ್ರಸಹೃದಯರಿಗೆ ಒಳ್ಳೆಯ ಸಿನಿಮಾಗಳನ್ನು ನೋಡಿ ಅನುಭವಿಸುವ ಸಾಧ್ಯತೆಗಳು ಹೆಚ್ಚಾಗುತ್ತಾ ಹೋಗುತ್ತವೆ. ಸಿನಿಮಾ ನೋಡುವವರು ಪ್ರಬುದ್ಧರಾದಷ್ಟೂ ಚಿಂತನಶೀಲ ಸಿನಿಮಾ ಮಾಡುವುದಕ್ಕೆ ಹೆಚ್ಚಿನ ಉತ್ತೇಜನ ಸಿಗುತ್ತದೆ. ಅಂಥ ಬದಲಾವಣೆಗಳು ಕನ್ನಡ ಸಿನಿಮಾದಲ್ಲಿ ಘಟಿಸುತ್ತಿವೆ ಎಂಬುದು ಸಂತೋಷದ ಸಂಗತಿ. ●



ವಿಯೇಟ್ನಾಮ್ ಕಮ್ಯುನಿಸ್ಟ್ ಪಕ್ಷದ 12ನೇ ಮಹಾಧಿವೇಶನ 'ಐಕ್ಯತೆ-ಪ್ರಜಾಪ್ರಭುತ್ವ-ಶಿಸ್ತು ಗಳ ಮಹಾಧಿವೇಶನ'





ಜನವರಿ 21ರಿಂದ 28 ವರೆಗೆ ಹನೋಯ್ ನಲ್ಲಿ ವಿಯೇಟ್ನಾಮ್ ಕಮ್ಯುನಿಸ್ಟ್ ಪಕ್ಷದ 12ನೇ ಸಫಲ ಮಹಾಧಿವೇಶನ ನಡೆಯಿತು. ಮಹಾಧಿವೇಶನದ ವಿಷಯ ಈ ಕೆಳಗಿನಂತಿತ್ತು:

"ಇಡೀ ದೇಶದ ಮತ್ತು ಸಮಾಜವಾದಿ ಪ್ರಜಾಪ್ರಭುತ್ವದ ಬಲ ಹಾಕುತ್ತಾ, ಸ್ವಚ್ಛ ಮತ್ತು ಬಲಶಾಲಿ ಪಕ್ಷ ಕಟ್ಟುವಿಕೆಯನ್ನು ಉತ್ತೇಜಿಸುತ್ತಾ, ಸಮಗ್ರವಾಗಿರುವ ಹಾಗೂ ಒಟ್ಟಿಗೆ ಮೇಳೈಸುವ ಸುಧಾರಣೆಗಳ ವೇಗ ಹೆಚ್ಚಿಸುತ್ತಾ, ತಾಯ್ನಾಡಿನ ರಕ್ಷಣೆ ಮಾಡುತ್ತಾ, ಶಾಂತಿಯುತ ಮತ್ತು ಸುಭದ್ರ ಪರಿಸರ ಕಾಪಾಡುತ್ತಾ, ಆಧುನಿಕತೆಯತ್ತ ಮುಖ ಮಾಡಿರುವ ಕೈಗಾರಿಕೀಕೃತ ದೇಶವಾಗಿ ಪರಿವರ್ತಿಸಲು ಶ್ರಮಿಸುವುದು"

ಮಹಾಧಿವೇಶನ ಐದು ಪ್ರಮುಖ ದಸ್ತಾವೇಜುಗಳನ್ನು ಚರ್ಚಿಸಿ ಅಂಗೀಕರಿಸಿತು. 1. ಪಕ್ಷದ ಹನ್ನೊಂದನೇ ಕೇಂದ್ರ ಸಮಿತಿಯ ರಾಜಕೀಯ ವರದಿ 2. 2011–15 ಅವಧಿಯ ಸಮಾಜೋ–ಆರ್ಥಿಕ ಅಭಿವೃದ್ಧಿಯ ಕಾರ್ಯಭಾರದ ಜಾರಿಯ ವಿಮರ್ಶೆಯ ಮತ್ತು 2016–20 ಅವಧಿಗೆ ದಿಕ್ಸೂಚಿಗಳನ್ನು ಮತ್ತು ಕಾರ್ಯಭಾರದ ವರದಿ 3. ಪಕ್ಷದ ಹನ್ನೊಂದನೇ ನಾಯಕತ್ವದ (ಕೇಂದ್ರ ಸಮಿತಿ, ಪೊಲಿಟ್ ಬ್ಯುರೊ ಮತ್ತು ಸೆಕ್ರೆಟಾರಿಯಟ್) ಕೆಲಸದ ಬಗ್ಗೆ ವರದಿ 4. ಪಕ್ಷದ 11 ನೇ ನಿಬಂಧನೆಗಳ ಆಚರಣೆ ಬಗ್ಗೆ ವರದಿ 5. ಪಕ್ಷದ 4 ನೇ ಪ್ಲೀನಂ ನಿರ್ಣಯಗಳ ಜಾರಿ ಬಗ್ಗೆ ವರದಿ.

'ದೊಯಿ ಮೊಯಿ' ಅನುಮೋದನೆ

ಪಕ್ಷದ ರಾಜಕೀಯ ವರದಿಯನ್ನು ಅಧ್ಯಾಯಗಳಾಗಿ ವಿಂಗಡಿಸುವ ಬದಲು, 'ಪ್ರಸ್ತುತಪಡಿಸುವ, ಅನುಸರಿಸಲು ಮತ್ತು ಅರ್ಥ ಮಾಡಿಕೊಳ್ಳಲು ಸುಲಭವಾಗುವಂತೆ' 17 ವಿಷಯಗಳನ್ನಾಗಿ ಸಂಘಟಿಸಲಾಗಿತ್ತು. ರಾಜಕೀಯ ವರದಿಯನ್ನು ಹಲವು ತಿಂಗಳುಗಳ ಮೊದಲು ಪ್ರಕಟಿಸಲಾಗಿದ್ದು, ಕೆಳಗಿನ ಹಂತಗಳ ಸಮ್ಮೇಳನಗಳಲ್ಲಿ, ಜನಪ್ರತಿನಿಧಿಗಳು ಹಾಗೂ ಸಾಮೂಹಿಕ ಸಂಘಟನೆಗಳಲ್ಲಿ ಚರ್ಚಿತವಾಗಿ 2.6 ಕೋಟಿ ಅಭಿಪ್ರಾಯಗಳು/ಸೂಚನೆಗಳು ಬಂದಿದ್ದವು. ಇದೊಂದು ದೇಶವ್ಯಾಪಿ ಪ್ರಜಾಸತ್ತಾತ್ಮಕ ಕಾರ್ಯಾಚರಣೆ ಆಗಿತ್ತು ಎಂಬುವುದು ಸ್ಪಷ್ಟ. ಇಲ್ಲಿದ್ದರೆ 45 ಲಕ್ಷ ಸದಸ್ಯತ್ವದ ಪಕ್ಷಕ್ಕೆ 2.6 ಕೋಟಿ ಅಭಿಪ್ರಾಯಗಳು/ಸೂಚನೆಗಳು ಬರುವುದ ಅಸಾಧ್ಯ. ಕೇಂದ್ರ ಸಮಿತಿಯ ಉಪಸಮಿತಿಯೊಂದು ಇವೆಲ್ಲವನ್ನೂ ಪರಿಶೀಲಿಸಿ ಹಲವು ಗುಂಪು ಚರ್ಚೆ, ಸರ್ವಸದಸ್ಯರ ಸಭೆಯಲ್ಲಿ ಚರ್ಚಿಸಿ ಮಹಾಧಿವೇಶನದ ಮುಂದೆ ಅದನ್ನು ಮಂಡಿಸಿತು.

ಮೇಲೆ ಹೇಳಿದ 5 ದಸ್ತಾವೇಜುಗಳಲ್ಲದೆ ಕಳೆದ 30 ವರ್ಷಗಳ 'ದೊಯಿ ಮೊಯಿ' (ಪುನರ್ನವೀಕರಣ ನೀತಿ)ಯ ಸಮಗ್ರ ವಿಮರ್ಶೆಯನ್ನೂ ಈ ಮಹಾಧಿವೇಶನದಲ್ಲಿ ಕೈಗೆತ್ತಿಕೊಳ್ಳಲಾಗಿತ್ತು. 'ದೊಯಿ ಮೊಯಿ' ವಿಯೇಟ್ನಾಮಿನ ವಾಸ್ತವಕ್ಕೆ ತಕ್ಕುದಾದ ಸಮಾಜವಾದ ಕಟ್ಟುವ ಸರಿಯಾದ ದಾರಿ ಎಂದು ಮಹಾಧಿವೇಶನ ಅನುಮೋದಿಸಿತು.

'ಜನರಿಗೆ ಗೊತ್ತು, ಜನರೊಂದಿಗೆ ಚರ್ಚಿಸಬೇಕು.. ..'

ರಾಜಕೀಯ ವರದಿಯಲ್ಲಿ ಜಾಗತಿಕ ಆರ್ಥಿಕ ಬಿಕ್ಕಟ್ಟು ಮತ್ತು ದೇಶದ ಆರ್ಥಿಕತೆಯ ಮೇಲೆ ಅದರ ಪರಿಣಾಮಗಳು, ದೇಶದ ಆರ್ಥಿಕತೆಯಲ್ಲಿ 'ಅಂತರ್ಗತವಾಗಿರುವ ಇನ್ನೂ ಬಗೆಹರಿಯದ ಮಿತಿಗಳು ನ್ಯೂನತೆಗಳು', 'ಆರ್ಥಿಕತೆ ನಿಭಾಯಿಸುವಲ್ಲಿ ನಾಯಕತ್ವದ ನ್ಯೂನತೆಗಳು ಹಾಗೂ ದೌರ್ಬಲ್ಯಗಳು', ಆರ್ಥಿಕತೆಯ ಸುಭದ್ರತೆ, ಜನತೆಯ ಜೀವನ ಮಟ್ಟ ಮುಂತಾದವುಗಳ ಮೇಲೆ ಪ್ರಸ್ತಾಪಿಸಲಾಗಿದೆ. ಇವೆಲ್ಲದರ ಮಧ್ಯೆಯೂ ಅಭಿವೃದ್ಧಿ ಆಗಿದೆ; ಸ್ಥೂಲ–ಆರ್ಥಿಕತೆ ಭದ್ರವಾಗಿದೆ. ಸಾಮಾಜಿಕ ಭದ್ರತೆ, ಶಿಕ್ಷಣ, ಆರೋಗ್ಯ ಸೇವೆ, ಸಂಸ್ಕೃತಿ ಮತ್ತು ಸಾಮಾಜಿಕ ವಲಯಗಳಲ್ಲಿ ಸತತ ಉತ್ತಮಪಡಿಸುವಿಕೆ ಕಂಡು ಬಂದಿದೆ ಎಂದು ವರದಿ ಮಂಡಿಸುತ್ತಾ ಪ್ರದಾಣ ಕಾರ್ಯದರ್ಶಿ ಟ್ರೊಂಗ್ ಹೇಳಿದರು.

ಸ್ವ–ವಿಮರ್ಶೆ ಮಾಡಿಕೊಳ್ಳುತ್ತಾ ವರದಿ ಪುನರ್ನವೀಕರಣದ ಸಮಗ್ರತೆ ಮತ್ತು ಹಲವು ಅಂಶಗಳ ಮೇಳೈಸುವಿಕೆಯಲ್ಲಿ ತೀವ್ರ ಕೊರತೆಗಳು ಇವೆ. 2020 ರ ಹೊತ್ತಿಗೆ ಆಧುನಿಕ ಕೈಗಾರಿಕೀಕೃತ ದೇಶವಾಗುವತ್ತ ಹಲವು ಗುರಿಗಳನ್ನು ಮುಟ್ಟಲಾಗಿಲ್ಲ. ಪಕ್ಷ ಕಂಡುಕೊಂಡ 4 ಅಪಾಯಗಳು ಇನ್ನೂ ಇವೆ. ಪಕ್ಷದ ಸದಸ್ಯರು ಮತ್ತು ಸಾರ್ವಜನಿಕ ಸೇವೆಯಲ್ಲಿರುವವರಲ್ಲಿ ಗಮನಾರ್ಹ ಪ್ರಮಾಣದಲ್ಲಿ ಇರುವ – ರಾಜಕೀಯ ಸಿದ್ಧಾಂತ, ನೈತಿಕತೆ, ಜೀವನಶೈಲಿಗಳಲ್ಲಿ ಅನಪೇಕ್ಷಣೀಯ ಬೆಳವಣಿಗೆಗಳು ಹಾಗೂ ಕುಸಿತ; ವಿಳಂಬ ಧೋರಣೆ, ಭ್ರಷ್ಟಾಚಾರ ಮತ್ತು ದುಂದುವೆಚ್ಚಗಳು – ಮುಂತಾದವುಗಳನ್ನು ಇನ್ನೂ ಹಿಮ್ಮೆಟ್ಟಿಸುವುದು ಸಾಧ್ಯವಾಗಿಲ್ಲ.

ಟ್ರೊಂಗ್ ಜನತೆಯೊಂದಿಗೆ ಸತತ ಸಂವಾದ, ಸಂಪರ್ಕ, ಸಂಬಂಧ ಸಾಧಿಸುವ ಬಗ್ಗೆ ಒತ್ತಿ ಹೇಳುತ್ತಾ, ದಿಕ್ಸೂಚಿ ಧ್ಯೇಯವಾಕ್ಯ 'ಜನರಿಗೆ ಗೊತ್ತು, ಜನರೊಂದಿಗೆ ಚರ್ಚಿಸಬೇಕು, ಜನ ಮಾಡಬೇಕು, ಜನ ಪರೀಕ್ಷಿಸಬೇಕು' ಆಗಿರಬೇಕು ಎಂದರು. 'ವೈಯಕ್ತಿಕವಾದ, ಅವಕಾಶವಾದ, ಸಂಕುಚಿತ ವ್ಯಾವಹಾರಿಕವಾದ'ಗಳ ವಿರುದ್ಧ ಹೋರಾಡುತ್ತಾ, 'ಸ್ವಚ್ಛವಾದ, ಸೈದ್ಧಾಂತಿಕವಾಗಿ ರಾಜಕೀಯವಾಗಿ, ನೈತಿಕವಾಗಿ ಹಾಗೂ ಸಂಘಟನಾತ್ಮಕವಾಗಿ ಶಕ್ತಿಯುತವಾದ ಪಕ್ಷ ಕಟ್ಟಲು' ಕರೆ ಕೊಟ್ಟರು. ಇದು 'ಐಕ್ಯತೆ–ಪ್ರಜಾಪ್ರಭುತ್ವ–ಶಿಸ್ತು ಗಳ ಮಹಾಧಿವೇಶನ'ವಾಗಿತ್ತು ಎಂದರು.

12ನೇ ಮಹಾಧಿವೇಶನ ಅಂಕೆ–ಸಂಖ್ಯೆಗಳಲ್ಲಿ

8	ದಿನಗಳ ಮಹಾಧಿವೇಶನ
45 ಲಕ್ಷ	ಪಕ್ಷದ ಸದಸ್ಯತ್ವ
2.6 ಕೋಟಿ	ಅಭಿಪ್ರಾಯ/ಸೂಚನೆಗಳು – ರಾಜಕೀಯ ವರದಿಗೆ
1510	ಮಹಾಧಿವೇಶನದ ಪ್ರತಿನಿಧಿಗಳು
992	ಪ್ರತಿನಿಧಿಗಳು 51–60 ವಯಸ್ಸಿನವರು
2	30 ವರ್ಷಕ್ಕಿಂತ ಕಡಿಮೆ ವಯಸ್ಸಿನ ಪ್ರತಿನಿಧಿಗಳು
5	ದಸ್ತಾವೇಜುಗಳ ಬಗ್ಗೆ ಚರ್ಚೆ ಮತ್ತು ಅಂಗೀಕಾರ
200	ಸದಸ್ಯರ ಕೇಂದ್ರ ಸಮಿತಿ ಆಯ್ಕೆ
53	ವರ್ಷ ಕೇಂದ್ರ ಸಮಿತಿಯ ಸರಾಸರಿ ವಯಸ್ಸು
100	ಹೊಸಬರು ಕೇಂದ್ರ ಸಮಿತಿ ಸದಸ್ಯರು
20	ಮಹಿಳೆಯರು ಕೇಂದ್ರ ಸಮಿತಿಯಲ್ಲಿ
17	ಅಲ್ಪಸಂಖ್ಯಾತ ಪಂಗಡದವರು ಕೇಂದ್ರ ಸಮಿತಿಯಲ್ಲಿ
19	ಸದಸ್ಯರ ಪೊಲಿಟ್‌ಬ್ಯುರೊ ಆಯ್ಕೆ
3	ಮಹಿಳಾ ಪೊಲಿಟ್‌ಬ್ಯುರೊ ಸದಸ್ಯರು – ಮೊದಲ ಬಾರಿಗೆ
9	ಪೊಲಿಟ್‌ಬ್ಯುರೊ ಸದಸ್ಯರ (ಪ್ರಸ್ತುತ ಅಧ್ಯಕ್ಷ, ಪ್ರಧಾನಿ ಸೇರಿ) ನಿವೃತ್ತಿ
3	ಸದಸ್ಯರ ಸೆಕ್ರೆಟಾರಿಯಟ್ ಆಯ್ಕೆ

ಹೊಸ ನಿಯಮಗಳ ಪ್ರಕಾರ ನಾಯಕತ್ವದ ಆಯ್ಕೆ

ಈ ಮಹಾಧಿವೇಶನದಲ್ಲಿ ಪಕ್ಷದ ನಾಯಕತ್ವದ ಆಯ್ಕೆಯನ್ನು ಆಂತರಿಕ ಪ್ರಜಾಪ್ರಭುತ್ವವನ್ನು ಇನ್ನಷ್ಟು ಬಲ ಪಡಿಸುವ ಹೊಸ ಬದಲಾದ ನಿಯಮಗಳ ಪ್ರಕಾರ ಮಾಡಲಾಯಿತು. ಮಹಾಧಿವೇಶನ 200 ಸದಸ್ಯರ ಕೇಂದ್ರ ಸಮಿತಿ, 19 ಸದಸ್ಯರ ಪೊಲಿಟ್ ಬ್ಯುರೊ, 3 ಸದಸ್ಯರ ಸೆಕ್ರೆಟಾರಿಯಟ್, 21 ಸದಸ್ಯರ ಕಂಟ್ರೋಲ್ ಕಮಿಶನನ್ನು ಆರಿಸಿತು. ಹೊಸ ಕೇಂದ್ರ ಸಮಿತಿಯಲ್ಲಿ 100 ಜನ ಹೊಸ ಸದಸ್ಯರು. ಪೊಲಿಟ್ ಬ್ಯುರೊದಲ್ಲಿ ಪ್ರಸ್ತುತ ಸರಕಾರದ ಅಧ್ಯಕ್ಷರು ಮತ್ತು ಪ್ರಧಾನಿ ಸೇರಿದಂತೆ 9 ಜನರನ್ನು ನಿವೃತ್ತಗೊಳಿಸಲಾಗಿದೆ. ಮೊದಲ ಬಾರಿಗೆ 3 ಮಹಿಳಾ ಸದಸ್ಯರು ಪೊಲಿಟ್ ಬ್ಯುರೊಗೆ ಆಯ್ಕೆಯಾಗಿದ್ದಾರೆ. ನಗುಯೆನ್ ಫು ಟ್ರೊಂಗ್ ಪ್ರಧಾನ ಕಾರ್ಯದರ್ಶಿಯಾಗಿ ಪುನರಾಯ್ಕೆಯಾಗಿದ್ದಾರೆ.

ಈ ಹೊಸ ನಿಯಮಗಳ ಕೆಲವು ಪ್ರಮುಖ ಅಂಶಗಳು ಹೀಗಿವೆ:

- ಹಿಂದಿನ ಕೇಂದ್ರ ಸಮಿತಿ ಹೊಸ ಸಮಿತಿಗೆ ಪಟ್ಟಿ ಸೂಚಿಸುವಾಗ ಶೇ. 15 ಹೆಚ್ಚು ಸದಸ್ಯರನ್ನು ಸೂಚಿಸಬೇಕು
- ಮಹಾಧಿವೇಶನದ ಪ್ರತಿನಿಧಿಗಳು ಹೊಸ ಸಮಿತಿಗೆ ಸದಸ್ಯರ ಸೂಚನೆಗಳನ್ನು ಕೊಡಬಹುದು
- ಕೇಂದ್ರ ಸಮಿತಿ ಕೈಬಿಟ್ಟಿರುವ ಸದಸ್ಯರನ್ನು ಯಾರಾದರೂ ಸೂಚಿಸಿದರೆ ಅವರನ್ನು ಚುನಾವಣಾ ಪಟ್ಟಿಯಲ್ಲಿ ಸೇರಿಸಬೇಕೆ ಎಂಬ ಬಗ್ಗೆ ಗುಪ್ತ ಮತದಾನ ನಡೆಯುತ್ತದೆ
- ಒಟ್ಟು ಚುನಾವಣಾ ಪಟ್ಟಿಯಲ್ಲಿ ಕೇಂದ್ರ ಸಮಿತಿಯ ಒಟ್ಟು ಸದಸ್ಯರಿಗಿಂತ ಶೇ. 30 ಹೆಚ್ಚು ಹೆಸರುಗಳಿರಕೂಡದು.
- ಅಂತಿಮ ಚುನಾವಣಾ ಪಟ್ಟಿಯಿಂದ ಪ್ರತಿನಿಧಿಗಳು ಕೇಂದ್ರ ಸಮಿತಿಯ ಸದಸ್ಯರನ್ನು ಆರಿಸುತ್ತಾರೆ.

ಅಸಾಂಜ್ ಬಂಧನ ಕಾನೂನುಬಾಹಿರ : ವಿಶ್ವಸಂಸ್ಥೆ ತೀರ್ಪು

ಕಳೆದ 3–4 ವರ್ಷಗಳಿಂದ ಲಂಡನಿನಲ್ಲಿರುವ ಇಕ್ವಡೋರ್ ರಾಯಭಾರ ಕಚೇರಿಯಲ್ಲಿ ಸ್ಥಾನಬದ್ಧತೆಗೆ ಒಳಗಾಗಿರುವ ವಿಕಿಲೀಕ್ಸ್ ಸ್ಥಾಪಕ ಹಾಗೂ ಮಾನವ ಹಕ್ಕುಗಳ ಹೋರಾಟಗಾರ ಜೂಲಿಯನ್ ಅಸಾಂಜ್ ಅವರನ್ನು ಅಂತಹ ಸ್ಥಿತಿಗೆ ತಂದ ಸ್ವಿಡನ್ ಮತ್ತು ಬ್ರಿಟಿಶ್ ಸರಕಾರಗಳ ಕಾರ್ಯಾಚರಣೆ ಕಾನೂನುಬಾಹಿರ ಎಂದು ಬೇಕಾಬಿಟ್ಟಿ ಬಂಧನಗಳ ಬಗೆಗಿನ ವಿಶ್ವಸಂಸ್ಥೆಯ ಕಾರ್ಯನಿರತ ಗುಂಪು ತೀರ್ಪಿತ್ತಿದೆ. ಈ ಗುಂಪಿಗೆ ಅಸಾಂಜ್ ದೂರು ಸಲ್ಲಿಸಿದ್ದರು. ಅಸಾಂಜ್ ಅವರ ಸ್ಥಾನಬದ್ಧತೆ 'ಮಾನವ ಹಕ್ಕುಗಳ ಬಗ್ಗೆ ವಿಶ್ವಸಂಸ್ಥೆಯ ಘೋಷಣೆ' ಹಾಗೂ 'ನಾಗರಿಕ ಮತ್ತು ರಾಜಕೀಯ ಹಕ್ಕುಗಳ ಅಂತರ್‍ರಾಷ್ಟ್ರೀಯ ಒಪ್ಪಂದ'ವನ್ನು ಉಲ್ಲಂಘಿಸಿದೆ ಎಂದು ತೀರ್ಪು ಹೇಳುತ್ತದೆ. ಈ ತೀರ್ಪು ಬ್ರಿಟಿಶ್ ಮತ್ತು ಸ್ವಿಡಿಶ್ ಸರಕಾರಕ್ಕೆ ಪಥ್ಯವಾಗಿಲ್ಲ. ಈ ತೀರ್ಪು ತಮಗೆ ಬಾಧ್ಯವಲ್ಲ ಎಂದು ಹೇಳಿವೆ. ಮಾತ್ರವಲ್ಲ ಅದು 'ಅರ್ಥವಿಲ್ಲದ್ದು', 'ಬರಿಯ ಅಭಿಪ್ರಾಯ' ಎಂದೆಲ್ಲ ಜರೆದಿವೆ. ತಮಗೆ ಆಗದ ಸರಕಾರಗಳ ಬಗ್ಗೆ ವಿಶ್ವಸಂಸ್ಥೆಯ ಯಾವುದೇ ಸಂಘಟನೆ ಏನಾದರೂ ಹೇಳಿದರೆ, ಅದು 'ಅಂತರ್‍ರಾಷ್ಟ್ರೀಯ ಜನಾಭಿಪ್ರಾಯ' ಎಂದು ಹೇಳುವ ಕುಣಿದಾಡುವ ಈ ಪಾಶ್ಚಿಮಾತ್ಯ ದೇಶಗಳ ಸರಕಾರಗಳ ಗೋಸುಂಬೆತನ ಬಯಲಾಗಿದೆ. ಪಾಶ್ಚಿಮಾತ್ಯ ಸರಕಾರಗಳು ಮಾತ್ರವಲ್ಲ ಮಾಧ್ಯಮಗಳೂ ಇದೇ ರಾಗ ಹಾಡುತ್ತಿವೆ. ನಮ್ಮ ಮಾಧ್ಯಮಗಳೂ ಇದೇ ರಾಗ ಹಾಡುವ ದಿನಗಳು ದೂರವಿಲ್ಲ. ಆದ್ದರಿಂದ ಅವರ ಟೀಕೆಗಳನ್ನು ಗಂಭೀರವಾಗಿ ಹಿಮ್ಮೆಟ್ಟಿಸಬೇಕಾಗಿದೆ. ಅಸಾಂಜ್ ಅಮೆರಿಕದ ಆಂತರಿಕ ಮಿಲಿಟರಿ ಮತ್ತು ವಿದೇಶಾಂಗ ನೀತಿಗಳ ಬಗೆಗಿನ ಗುಪ್ತ ಇ–ಮೈಲುಗಳನ್ನು ರಟ್ಟು ಮಾಡಿ ಪ್ರಕಟಿಸಿದ 'ಅಪರಾಧ'ಕ್ಕೆ ಅಮೆರಿಕ ಅವರನ್ನು ಬಂಧಿಸಲು ಹೊಂಚು ಹಾಕುತ್ತಿದೆ ಎಂದು ಇಲ್ಲಿ ನೆನಪಿಸಿಕೊಳ್ಳಬಹುದು.

ಪಾಶ್ಚಿಮಾತ್ಯ ಸರಕಾರಗಳು ಮತ್ತು ಮಾಧ್ಯಮಗಳು ಮೂರು ಅಂಶಗಳನ್ನು ಹೇಳುತ್ತಿವೆ. 1. ಈ ಗುಂಪು ಕಾನೂನು ತಜ್ಞರ ತಂಡ ಅಲ್ಲ. 2. ಸಾರ್ವಭೌಮ ಸರಕಾರಗಳಿಗೆ ತೀರ್ಪು ಬಾಧ್ಯವಲ್ಲ. 3. ಇಕ್ವಡೋರ್ ರಾಜಕೀಯ ಆಶ್ರಯ ನೀಡಿದ್ದರಿಂದ ಅಸಾಂಜ್ ವಿಚಾರಣೆಯಿಂದ ತಪ್ಪಿಸಿಕೊಂಡಿದ್ದಾನೆ. ಮೂರೂ ತೀರ್ಪುಗಾರರು ಅಂತರ್‍ರಾಷ್ಟ್ರೀಯ ಕಾನೂನು ತಜ್ಞರು. ಮಾನವ ಹಕ್ಕುಗಳನ್ನು ಉಲ್ಲಂಘಿಸಿದಾಗ ಅದರ ಬಗ್ಗೆ ವಿವಾದ ಬಗೆಹರಿಸಲು ಈ ಗುಂಉ ಘಟಿಸಿದ್ದು. ಇದು ಬ್ರಿಟನ್ ಮತ್ತು ಸ್ವೀಡನ್ ಸಹಿ ಹಾಕಿರುವ 'ನಾಗರಿಕ ಮತ್ತು ರಾಜಕೀಯ ಹಕ್ಕುಗಳ ಅಂತರ್‍ರಾಷ್ಟ್ರೀಯ ಒಪ್ಪಂದ'ದ ಅನ್ವಯ ಘಟಿತವಾಗಿದೆ. ಅಸಾಂಜ್ ಲಂಡನಿನ ಇಕ್ವಡೋರ್ ರಾಯಭಾರ ಕಚೇರಿಯಲ್ಲಿ ವಿಚಾರಣೆ ನಡೆಸಬಹುದು ಎಂದು ಹಿಂದಿನಿಂದಲೂ ಹೇಳುತ್ತಾ ಬಂದಿದ್ದಾರೆ. ಬ್ರಿಟನ್ ಮತ್ತು ಸ್ವೀಡನ್ ಇಂತಹ ವಿಚಾರಣೆ ನಡೆಸುವ ಬದಲು ಸ್ವೀಡನಿಗೆ ಅಸಾಂಜ್ ಬರಬೇಕು ಎನ್ನುವುದಕ್ಕೆ ಅರ್ಥವಿಲ್ಲ. ಅಸಾಂಜ್ ಅವರನ್ನು ಅಮೆರಿಕಕ್ಕೆ ಗಡಿಪಾರು ಮಾಡುವ ಮತ್ತು ಪ್ರಾಣಭಯ ಇರುವುದನ್ನು ಬ್ರಿಟನ್ ಮತ್ತು ಸ್ವೀಡನ್ ಪರಿಗಣಿಸಿ ಅವರ ವಿಚಾರಣೆ ರಾಯಭಾರ ಕಚೇರಿಯಲ್ಲೇ ಮಾಡಬಹುದಿತ್ತು. ಬದಲಾಗಿ ಆ ಪ್ರಕರಣದ ಅವಧಿ ಮುಗಿದು ಹೋದ ಮೇಲೂ ಅಸಾಂಜ್ ಅವರ ಬಂಧನಕ್ಕೆ ಒತ್ತಾಯಿಸುತ್ತಿರುವುದು ಕಾನೂನುಬಾಗಿರ ಎಂದು ತೀರ್ಪು ಹೇಳುತ್ತದೆ.

JANASHAKTHI KANNADA VARA PATRIKE FEB 21, 2016 Price : Rs. 10/- RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

'ದಲಿತ ಆತ್ಮಕತೆಗಳು ಹಸಿವು, ಹಿಂಸೆ, ಅವಮಾನ ಮತ್ತು ಹತಾಶೆಗಳಿಂದ ಕೂಡಿರುತ್ತವೆ'



"ದಲಿತ ಆತ್ಮಕಥೆಗಳನ್ನು ಓದಲು, ದಲಿತರ ಸಂಕಷ್ಟದ ಬದುಕನ್ನು ಅರಿಯಲು ಸಹ ಮೇಲ್ಜಾತಿ ಸಮುದಾಯಗಳು ತಮ್ಮವರನ್ನು ಬೀಡುತ್ತಿಲ್ಲ" ಎಂದು ಹಿರಿಯ ಕವಿ ಡಾ.ಮೂಡ್ನಾಕೂಡು ಚಿನ್ನಸ್ವಾಮಿ ವಿಷಾದ ವ್ಯಕ್ತಪಡಿಸಿದರು.

ಹೊನ್ನಾವರದ ಕೆರೆಕೋಣದ ಸಹಯಾನದಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರ, ಡಾ.ಅಂಬೇಡ್ಕರ್ 125ನೇ ವರ್ಷಾಚಣೆ ಸಮಿತಿ ಹಾಗೂ ಸಹಯಾನ(ಆರ್ ವಿ ಭಂಡಾರಿ ನೆನಪಿನ ಸಂಕ್ಕೃತಿ ಅಧ್ಯಯನ ಕೇಂದ್ರ) ಆಶ್ರಯದಲ್ಲಿ ಭಾನುವಾರ ಪ್ರಾರಂಭವಾದ "ದಲಿತ ಆತ್ಮಕಥೆಗಳು: ವಾಚನ ಮತ್ತು ವಿಶ್ಲೇಷಣೆ" ಎಂಬ ಎರಡು ದಿನಗಳ ರಾಜ್ಯ ಮಟ್ಟದ ಕಮ್ಮಟ ಉದ್ಘಾಟಿಸಿ ಅವರು ಮಾತನಾಡಿದರು.

'ದಲಿತರ ಪುಸ್ತಕ ಯಾಕೆ ಓದ್ತೀಯಾ?'

ದಲಿತರ ಬರೆದಿರುವ ಪುಸ್ತಕಗಳನ್ನು ಕೈಯಿಂದ ಮುಟ್ಟಲು ಹೆದರುವ, ಇಂಥದೆಲ್ಲ ಯಾಕೆ ಓದುತ್ತಿಯಾ ಎಂದು ಓದಲು ಸಹ ಬಿಡದ ಸನಾತನಿಗಳು ಈಗಲೂ ಇದ್ದಾರೆ. ತಮ್ಮವರಲ್ಲದವರ ಬದುಕನ್ನು ಅರಿತುಕೊಳ್ಳಲು ಸಹ ಅವರ ಮನಸ್ಸು ಒಪ್ಪುವುದಿಲ್ಲ.

'ಶೂದ್ರ' ಪತ್ರಿಕೆ ಮುಟ್ಟಲ್ಲಿಲ್ಲ

ಶೂದ್ರ ಎಂಬ ಪತ್ರಿಕೆಯನ್ನು ಸಹ ಮುಟ್ಟಲು ಮೇಲ್ವರ್ಗದವರು ಹೆದರಿದ ಪ್ರಸಂಗವನ್ನು ಮೂಡ್ನಾಕೂಡು ಚಿನ್ನಸ್ವಾಮಿ ಹಂಚಿಕೊಂಡರು. ಅವರ ಕಚೇರಿಗೆ ಬರುತ್ತಿದ್ದ ಶೂದ್ರ ಪತ್ರಿಕೆಯನ್ನು ಮೇಲ್ಜಾತಿಯ ಸಹದ್ಯೋಗಿ ಓದಿ ಹಿಂದಿರುಗಿಸುವುದಾಗಿ ಮನೆಗೆ ಒಯ್ದರಂತೆ. ಮನೆಯಲ್ಲಿ ಮೇಜಿನ ಮೇಲೆ ಇಟ್ಟಿದ್ದಾಗ ನೋಡಿ ದಂಗಾದ ಅವರ ತಾಯಿ, "ಅಯ್ಯೋಯ್ಯೋ, ಇದರ ಮೇಲೆ ಶೂದ್ರ ಅಂತ ಇದೆಯಲ್ಲೋ, ಇದನ್ಯಾಕೆ ಮನೆಗೆ ತಂದೆ? ಮನೆಯೆಲ್ಲ ಹಾಳು ಮಾಡ್ತಿ ನೀನು" ಎಂದು ತರಾಟೆಗೆ ತೆಗೆದುಕೊಂಡರಂತೆ.

ವಿಠಲ ಭಂಡಾರಿ

ತಾನು, ತನ್ನ ಸಮುದಾಯ ಚೆನ್ನಾಗಿದ್ದರೆ ಅಷ್ಟು ಸಾಕು ಎನ್ನುವ ಮನಸ್ಥಿತಿ ಅವರಲ್ಲಿ ಬೇರೂರಿದೆ ಎಂದರು.

ಭಾರತೀಯ ಸಂಸ್ಕೃತಿ ಶ್ರೇಷ್ಠವಾದುದು ಎಂಬ ಸುಳ್ಳನ್ನು ಎಲ್ಲ ಕಡೆಯೂ ಬಿತ್ತಲಾಗಿದೆ. ನಾವೆಲ್ಲರೂ ಹಾಗೆ ನಂಬಿದ್ದೇವೆ ಕೂಡ. ಆದರೆ, ಈ ಸಂಸ್ಕೃತಿ ನೀವೆಲ್ಲರೂ ತಿಳಿದುಕೊಂಡಂತೆ ಇಲ್ಲ. ಇದರಲ್ಲಿನ ಹುಳುಕುಗಳು ಇವೆ ಎಂಬುದನ್ನು ತಿಳಿಸಿಕೊಡುವ ಕೆಲಸವನ್ನು ದಲಿತ ಆತ್ಮಕಥೆಗಳು ಮಾಡುತ್ತವೆ. ಮೇಲ್ವರ್ಗದವರ ಆತ್ಮಕಥೆಗಳು ಹೆಣ್ಣು, ಹೊನ್ನು ಮತ್ತು ಮಣ್ಣಿನ ಸುತ್ತಲಿನ ಪ್ರತಿಷ್ಠೆಯ ನೆಲೆಯಿಂದ ಕೂಡಿದ್ದರೆ ದಲಿತರ ಆತ್ಮಕತೆಗಳು ಹಸಿವು, ಹಿಂಸೆ, ಅವಮಾನ ಮತ್ತು ಹತಾಶೆಗಳಿಂದ ಕೂಡಿರುತ್ತವೆ ಎಂದರು.

ಜಾತಿ ಸಮಸ್ಯೆಯನ್ನು ನಮ್ಮ ಸಮಾಜ ಗಂಭೀರವಾಗಿ ಪರಿಗಣಿಸಿದ್ದರೆ ಇಂದು, ರೋಹಿತ್ ವೇಮುಲನಂಥ ಯುವಕನ ಸಾವು ಸಂಭವಿಸುತ್ತಿರಲಿಲ್ಲ. ಉದ್ದೇಶಪೂರ್ವಕವಾಗಿ ಅವನಿಗೆ 7 ತಿಂಗಳ ಸ್ಕಾಲರ್‌ಶೀಪ್ ಸಿಗದಂತೆ ಮಾಡಲಾಯಿತು. ದೆಹಲಿಯ ಪ್ರತಿಷ್ಠಿತ ಜೆಎನ್‌ಯುಎನ್‌ನಂಥ ಸಂಸ್ಥೆಗಳಲ್ಲೂ ಜಾತಿ ಸಂಘರ್ಷಗಳು ನಡೆಯುತ್ತಿವೆ ಎಂದರು.

'ದಲಿತ ಆತ್ಮಕಥೆ ಬಿಡಿಯಾಗಿ ಓದುವ ಅಗತ್ಯ ಇದೆ'

ಕಾರ್ಯಕ್ರಮದ ಅಧ್ಯಕ್ಷತೆವಹಿಸಿದ್ದ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಬಂಜಗೆರೆ ಜಯಪ್ರಕಾಶ್ ಮಾತನಾಡಿ, ಇಂಥ ಕಮ್ಮಟಗಳು ಮನುಷ್ಯತ್ವದ ತರಬೇತಿ ಶಿಬಿರಗಳಿದ್ದಂತೆ. ಈ ಕಥೆಗಳನ್ನು ಓದಿದರೆ ಮುಂದಾದರೂ ನಮ್ಮ ಪೂರ್ವಿಕರ ಮಾಡಿದ ತಪ್ಪುಗಳನ್ನು ನಾವು ಮಾಡಬಾರದು ಎಂಬ ಪಶ್ಚಾತಾಪ ಮೂಡುತ್ತದೆ. ತನ್ನಂತೆ ಪರರನ್ನು ಕಾಣುವ ಗುಣ ಬರುತ್ತದೆ ಎಂದರು.

ನಮ್ಮ ಸಮಾಜದಲ್ಲಿ ಮೇಲ್ವರ್ಗದವರು ಯಾವ ಸಾಧನೆಯನ್ನಾದರೂ ಮಾಡಬಹುದು. ಮಂತ್ರಿಯೂ ಆಗಬಹುದು, ಮುಖ್ಯಮಂತ್ರಿಯೂ ಆಗಬಹುದು. ಆದರೆ, ಈ ಹಿಂದೆ ದಲಿತರು ಬದುಕಿ ಉಳಿಯುವುದೇ ಬಹಳ ಕಷ್ಟವಿತ್ತು. ನಮಗೆ ಅಕ್ಷರ ದಕ್ಕಿದವರ ಆತ್ಮಕಥೆಗಳು ಮಾತ್ರ ಸಿಗುತ್ತಿವೆ. ಆದರೆ, ಅಕ್ಷರ ದಕ್ಕದ ಹಳ್ಳಿಯೊಂದರ ಮೂಲೆಯಲ್ಲಿ ಬದುಕುತ್ತಿರುವ ಅಸ್ಪೃಶ್ಯರ ಬದುಕು ಇನ್ನು ನಿಕೃಷ್ಟವಾಗಿರುತ್ತದೆ ಎಂದರು.

ಕಮ್ಮಟದ ಸಂಚಾಲಕಿ, ಲೇಖಕಿ ಡಾ. ವಿನಯಾ ವಕ್ಕುಂದ ಮಾತನಾಡಿ, ಎಲ್ಲ ಆತ್ಮಕಥೆಗಳನ್ನು ಒಳಗೊಂಡ ಇಡಿಯಾದ ಕಮ್ಮಟ ಮಾಡುವ ಬದಲು ಹೀಗೆ ದಲಿತ, ಮಹಿಳಾ ಎಂದು ಬಿಡಿ ಬಿಡಿಯಾಗಿ ಮಾಡುವ ಅಗತ್ಯವಿದೆಯೇ ಎಂದು ಕೆಲವರು ಪ್ರಶ್ನಿಸುತ್ತಾರೆ. ಆದರೆ, ಇಡಿಯಾಗಿ ಹಿಡಿಯುವಾಗ ಕೆಲವನ್ನು ಉದ್ದೇಶಪೂರ್ವಕವಾಗಿ ಕೈ ಬೀಡಲಾಗುತ್ತದೆ ಆದ್ದರಿಂದ ಹೀಗೆ ಬಿಡಿಬಿಡಿಯಾಗಿ ಓದುವ ಅಗತ್ಯವಿದೆ ಎಂದರು.

'ಶಿಕ್ಷಕ ಸಂಸ್ಕೃತ ಕಲಿಯದಂತೆ ಮಾಡಿದರು'

ಇಂದಿನ ಟಿವಿ ವಾಹಿನಿಗಳಲ್ಲಿನ ಆಡಂಬರದ ರಿಯಾಲಿಟಿ ಶೋಗಳು ಯುವ ಸಮೂಹದ ದಿಕ್ಕನ್ನು ತಪ್ಪಿಸುತ್ತಿವೆ. ಅವುಗಳಿಂದ ವಿಮುಖರಾಗಿಸಿ ಹೀಗೆ ವಿಭಿನ್ನ ಸಮುದಾಯಗಳ ಸಂಸ್ಕೃತಿಯನ್ನು ತಿಳಿಸುವ ಕೃತಿಗಳ ವ್ಯವದಾನದ ಓದನ್ನು ಯುವಕರು ರೂಡಿಗತ ಮಾಡಲು ಇಂಥ ಕಮ್ಮಟಗಳು ಸಹಕಾರಿಯಾಗತ್ತವೆ ಎಂದರು.

ಹಿರಿಯ ಕಥೆಗಾರ ಆರ್.ಜಿ.ಗುಂದಿ ಮಾತನಾಡಿ, ಮೇಲ್ವರ್ಗದ ಶಿಕ್ಷಕನೊಬ್ಬ ತಮ್ಮನ್ನು ಸಂಸ್ಕೃತ ಕಲಿಯದಂತೆ ಮಾಡಿದ ಪ್ರಸಂಗವನ್ನು ನೆನಪಿಸಿಕೊಂಡರು ಮಾತ್ರವಲ್ಲ ಆಗೇರನಾಗಿರುವ ಕಾರಣಕ್ಕೆ ತಾನು ಮತ್ತು ತನ್ನ ಕುಟುಂಬ ಅನುಭವಿಸಿದ ನೋವುಗಳನ್ನು ಬಿಚ್ಚಿಟ್ಟರು. ಪ್ರಾಧಿಕಾರದ ಸದಸ್ಯೆ, ಕವಿ, ಡಾ.ಮಾಧವಿ ಭಂಡಾರಿ ಸ್ವಾಗತಿಸಿದರು.

ವಾಚಿಸಲಾದ ಆತ್ಮಕಥೆಗಳು

ಕಮ್ಮಟದಲ್ಲಿ ದಲಿತ ಆತ್ಮಕಥೆಗಳ ಭಾಗಗಳನ್ನು ಚಿಂತನ ರಂಗ ಅಧ್ಯಯನ ಕೇಂದ್ರದ ಕಲಾವಿದರು ವಾಚನ ಮಾಡಿದರು. ಐದು ಸಂವಾದಗಳನ್ನು ನಡೆಸಲಾಯಿತು. 'ಕನ್ನಡದಲ್ಲಿ ಆತ್ಮಕಥೆಗಳ ಸ್ವರೂಪ', 'ಇದೆ ಇಲ್ಲಗಳ ನಡುವೆ : ದಲಿತ ಮಹಿಳಾ ಆತ್ಮಕಥೆ', ಎ.ಎಂ. ಮಾದರಿ ಅವರ 'ಗೊಂದಲಿಗ್ಯಾ', ಸಿದ್ಧಲಿಂಗಯ್ಯ ಅವರ 'ಊರುಕೇರಿ', ಅರವಿಂದ ಮಾಲಗತ್ತಿ ಅವರ 'ಗೌರ್ನ್ಮೆಂಟ್ ಬ್ರಾಹ್ಮಣ' ಬಗೆಗೆ ಸಂವಾದ ನಡೆಯಿತು.

ಸಹಯಾನದ ಕಾರ್ಯದರ್ಶಿ ಡಾ.ವಿಠಲ್ ಭಂಡಾರಿ ನಿರೂಪಿಸಿದರು. ಕಾರ್ಯಕ್ರಮಕ್ಕೂ ಮುನ್ನ ಇತ್ತೀಚೆಗೆ ನಿಧನರಾದ ಸಾಹಿತ್ಯ ಪರಿಚಾರಿಕಿ ಕವಿತಾ ವಿಷ್ಣು ನಾಯಕರಿಗೆ ಎರಡು ನಿಮಿಷ ಮೌನ ಸಲ್ಲಿಸುವ ಶೃದ್ಧಾಂಜಲಿ ಸಲ್ಲಿಸಲಾಯಿತು.

ರಾಜ್ಯದ ವಿವಿಧ ಭಾಗಗಳಿಂದ ಶಿಬಿರಾರ್ಥಿಗಳು ಪಾಲ್ಗೊಂಡಿದ್ದಾರೆ. ಕಮ್ಮಟದ ಸಂಪನ್ಮೂಲ ವ್ಯಕ್ತಿಗಳಾಗಿ ರಾಜಪ್ಪ ದಳವಾಯಿ, ಡಾ.ಎಚ್.ಎಸ್. ಅನುಪಮ, ಮಲ್ಲಿಕಾ ಬಸವರಾಜು, ಜಯಶೀಲ ಆಗೇರ, ದೀಪಾ ಹೀರೆಗುತ್ತಿ, ಹನಮಂತ ಹಾಲಗೇರಿ ಭಾಗವಹಿಸಿದ್ದರು.

'ನರಕದಲ್ಲಿರುವ ನರಕ'

"ಹಲವು ಬಾರಿ ಆತ್ಮಕತೆಗಳು ಸಾಮುದಾಯಿಕ ನೆಲೆಯಿಂದ ಮತ್ತು ಕೆಲವು ಬಾರಿ ವೈಯಕ್ತಿಕ ನೆಲೆಯಿಂದಲೂ ಹೊರಡುತ್ತವೆ. ಈವರೆಗೆ ಬಂದ ಆತ್ಮಕತೆಗಳು ಕನ್ನಡ ಕಾವ್ಯಮೀಮಾಂಸೆಯನ್ನು ಮೀರುವ ಹಕ್ಕೊತ್ತಾಯವನ್ನು ನಮ್ಮೆದುರು ಮಂಡಿಸುತ್ತವೆ. ಹಾಗೆ ನೋಡಿದರೆ ನರಕದಲ್ಲಿರುವವರ ನರಕ ದಲಿತ ಆತ್ಮ ಕತೆ. ಬದುಕಿನ ನಿಕೃಷ್ಟತೆಯ ಮಾನದಂಡವಾಗಿ ದಲಿತ ಆತ್ಮ ಕತೆಗಳು ನಿಲ್ಲುತ್ತವೆ." ಎಂದು ಕರ್ನಾಟಕ ವಿ ವಿಯ ಹಾವೇರಿ ಕೇಂಧ್ರದ ಕನ್ನಡ ವಿಭಾಗದ ಅಧ್ಯಾಪಕಿಯರಾದ ಅನಸೂಯಾ ಕಂಬ್ಳೆ ಸಮಾರೋಪ ಸಭೆಯಲ್ಲಿ ಭಾಗವಹಿಸಿ ಹೇಳಿದರು. ಮುಂದುವರಿದು "ಕಳೆದು ಹೋದ ಚರಿತ್ರೆಯನ್ನು ಮರುಕಟ್ಟಿಕೊಳ್ಳುವ ಪ್ರಕ್ರಿಯೆಯಲ್ಲಿ ಆತ್ಮ ಚರಿತ್ರ್ರೆಗಳು ಅಸ್ತಿತ್ವ ಪಡೆಯುತ್ತವೆ. ನಾಡಿನಲ್ಲಿ ಜೀವಂತವಾಗಿರುವ ಅಸಮಾನತೆಯನ್ನು ದಾಖಲಿಸುವ ಮೂಲಕ ಸಮಾನತೆಯ ಆಶಯಕ್ಕಾಗಿ ಇದು ಹಂಬಲಿಸುತ್ತದೆ. ಅಂಬೇಡ್ಕರ್ ಅವರು ಹತ್ತು ವರ್ಷದಲ್ಲಿ ಮೀಸಲಾತಿಯನ್ನು ಕೊನೆಗೊಳಿಸಬೇಕು ಎಂದು ಹೇಳಿದ್ದಾರೆಂದು ಕೆಲವರು ಇಂದು ಹೇಳುತ್ತಿದ್ದಾರೆ. ಆದರೆ ಅಂಬೇಡ್ಕರ್ ಎಲ್ಲಾ ಖಾಸಗೀ ಆಸ್ತಿಯನ್ನು ರಾಷ್ಟ್ರೀಕರಣ ಮಾಡಬೇಕೆಂದು ಹೇಳಿದ್ದನ್ನು ಯಾಕೆ ಮರೆಯುತ್ತಾರೆ? ಮೀಸಲಾತಿಯನ್ನು ವಿರೋಧಿಸುವವರು ಯಾಕೆ ರಾಷ್ಟ್ರೀಕರಣಕ್ಕೆ ಒತ್ತಾಯಿಸುವುದಿಲ್ಲ? ಎಂದು ಪ್ರಶ್ನಿಸಿದ ಅವರು ಗಾಂಧೀಜಿಯವರ ಆತ್ಮಕತೆಯನ್ನು ಸತ್ಯದೊಂದಿಗಿನ ಪ್ರಯೋಗ ಎನ್ನುತ್ತಾರೆ. ಆದರೆ ಸತ್ಯವನ್ನೇ ಬರೆದಿರುವ ದಲಿತನ ಆತ್ಮಚರಿತೆಯನ್ನು ಅನುಮಾನದಿಂದ ನೋಡುತ್ತಾರೆ" ಎಂದು ಹೇಳಿದರು.


'ಹೊಸ ಜಗತ್ತು ತೆರೆದುಕೊಂಡಿತು'

ಶಿಬಿರದ ನಿರ್ದೇಶಕರಾದ ಡಾ. ವಿನಯ ಒಕ್ಕುಂದ ಮಾತನಾಡಿ "ಆತ್ಮಕತೆಗಳ ಓದು ನಮ್ಮಲ್ಲಿ ಸಂವೇದನಾಶೀಲತೆಯನ್ನು ಬೆಳೆಸುತ್ತದೆ. ಈ ಕಮ್ಮಟ ವಿದ್ಯಾರ್ಥಿಗಳಲ್ಲಿ ಓದುವ ಆಸಕ್ತಿಯನ್ನು ಬೆಳೆಸುವದರೊಂದಿಗೆ ನಮಗೆ ಅರಿವಿಲ್ಲದ ಹೊಸಲೋಕಕ್ಕೆ ಬಾಗಿಲು ತೆರೆದಿದೆ." ಎಂದರು

ಶಿಬಿರಾರ್ಥಿಗಳಾಗಿ ಭಾಗವಹಿಸಿದ ವಿದ್ಯಾರ್ಥಿ ಮಲ್ಲಿಕಾ ಗೌಡ ಮಾತನಾಡಿ ಆತ್ಮಕತೆಗಳು ಓದಿಗೆ ಪ್ರೇರಕವಾಗಿದೆ. ನಮ್ಮ ಸುತ್ತಲಿನ ಆದ-ರೆ ನಮಗೆ ಅರಿವಿಲ್ಲದ ಹೊಸದೊಂದು ಜಗತ್ತಿನ ಪರಿಚಯವಾಯಿತು. ದಲಿತರ ಬಡತನ, ನೋವು, ಹಸಿವು ಇತ್ಯಾದಿಗಳಿಂದ ಮುಕ್ತವಾದ ನಾಡು ಕಟ್ಟಬೇಕು ಎನ್ನುವ ಭಾವ ನಮ್ಮಲ್ಲಿ ಹುಟ್ಟಿಕೊಂಡಿದೆ. ವೈಯಕ್ಕಿಕ ನೆಲೆಯಲ್ಲಾದರೂ ಜಾತಿಪದ್ಧತಿಯನ್ನು ಮೀರುವ ಕಡೆಗೆ ಪ್ರಯತ್ನಿಸಬೇಕು." ಎಂದರು.

ಸಭೆಯಲ್ಲಿ ಸಹಯಾನದ ಅಧ್ಯಕ್ಷ ಶಾಂತಾರಾಮ ನಾಯಕ ಹಿಚ್ಕಡ್ ಉಪಸ್ಥಿತರಿದ್ದರು. ಡಾ.ಅಂಬೇಡ್ಕರ್ 125ನೇ ವರ್ಷಾಚಣೆ ಸಮಿತಿಯ ಗೌರವಾಧ್ಯಕ್ಷರಾದ ವಿಷ್ಣು ನಾಯ್ಕ ಅಧ್ಯಕ್ಷತೆ ವಹಿಸಿದ್ದರು. ಪ್ರಾಧಿಕಾರದ ಸದಸ್ಯರಾದ ಮಾಧವಿ ಭಂಡಾರಿ ಕೆರೆಕೋಣ ಸ್ವಾಗತಿಸಿದರು. ಡಾ.ವಿಠಲ್ ಭಂಡಾರಿ ವಂದಿಸಿದರು. ಗಣೇಶ ಭಂಡಾರಿ ನೆನಪಿನ ಪುಸ್ತಕ ನೀಡಿದರು. ಶ್ರೀನಿವಾಸ ನಾಯ್ಕ ಕಾರ್ಯಕ್ರಮ ನಿರೂಪಿಸಿದರು.

ಹೆಚ್.ಆರ್. ನವೀನ್‌ಕುಮಾರ್



JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **NITHYANANDASWAMI** EMS Bhavana, No.37/A, 8th Cross, Mahalakshmi Layout, BANGALORE-560086 Editor : **NITHYANANDASWAMI**